**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ**

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ-ಶಿವಮೊಗ್ಗ**

# ಪಾಠ ಆಧಾರಿತ ಮೌಲ್ಯಾಂಕನ ಸಾಮಗ್ರಿ

**2025-26**

# ಸಮಾಜವಿಜ್ಞಾನ

## ಎಂಟನೇ ತರಗತಿ

**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ,**

**ಬನಶಂಕರಿ 3ನೇ ಹಂತ, ಬೆಂಗಳೂರು-560085**

## ಸಮಾಜ ವಿಜ್ಞಾನ

## 8 ನೇ ತರಗತಿ

## ಎಂಟನೇ ತರಗತಿ ಪಾಠ ಆಧಾರಿತ ಮೌಲ್ಯಾಂಕನ ಸಾಮಾಗ್ರಿ. ಕಲಿಕಾ ಫಲವಾರು ಪ್ರಶ್ನೆ ಕೋಠಿ (Question Bank and Answer keys)

| ಪರಿಕಲ್ಪನೆ ಮತ್ತು ಮಾರ್ಗದರ್ಶನ | |
|---|---|
| **ಶ್ರೀಮತಿ ರಶ್ಮಿ ಮಹೇಶ್ ಭಾ.ಆ.ಸೇ**<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ | |
| **ಡಾ. ತ್ರಿಲೋಕ್ ಚಂದ್ರ K V**., ಭಾ.ಆ.ಸೇ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು | **ಶ್ರೀ ಗೋಪಾಲಕೃಷ್ಣ H N,**<br>ನಿರ್ದೇಶಕರು,<br>DSERT, ಬೆಂಗಳೂರು |
| **ಡಯಟ್ ಸಹಕಾರ** | |
| ಶ್ರೀ ಮಂಜುನಾಥ ಎಸ್ ಆರ್ ಉಪನಿರ್ದೇಶಕರು ಆಡಳಿತ ಹಾಗೂ ಅಭಿವೃದ್ಧಿ ಡಯಟ್ ಶಿವಮೊಗ್ಗ | ಶ್ರೀಮತಿ ಜ್ಯೋತಿಕುಮಾರಿ ಕೆ ವಿ<br>ಉಪನ್ಯಾಸಕರು ಡಯಟ್ ಶಿವಮೊಗ್ಗ |
| **ಸಂಯೋಜನೆ** | |
| **ಶ್ರೀಮತಿ ರಾಧಾ P,**<br>ಹಿರಿಯ ಸಹಾಯಕ ನಿರ್ದೇಶಕರು,<br>DSERT, ಬೆಂಗಳೂರು | |
| **ಪಾಠ ಆಧಾರಿತ ಮೌಲ್ಯಾಂಕನ ಸಾಮಗ್ರಿ ರಚನಾ ಸಂಪನ್ಮೂಲ ತಂಡ** | |
| 1. ಶ್ರೀ ಹೂವಣ್ಣ ಹೆಚ್ ಬಿ ಉಪನ್ಯಾಸಕರು ಡಯಟ್ ಶಿವಮೊಗ್ಗ<br>2. ಶ್ರೀ ಶೇಖರಪ್ಪ ಪಿ ಜಿ.ಪಿ.ಯು.ಸಿ ಬರೂರು ತಾ:ಸಾಗರ<br>3. ಶ್ರೀ ನವೀನ್ ಕುಮಾರ್ ಬಿ.ಎಸ್ ಜಿ.ಪಿ.ಯು.ಸಿ ಶಿಕಾರಿಪುರ<br>4. ಶ್ರೀಮತಿ ನಾಗರತ್ನ ಎಲ್ ಜಿ.ಹೆಚ್.ಎಸ್ ಮಂಡಗಟ್ಟ ತಾ:ಶಿವಮೊಗ್ಗ | 5. ಶ್ರೀ ಸುರೇಂದ್ರ ಎಂ ಜಿ.ಹೆಚ್.ಎಸ್ ಜಯನಗರ ತಾ:ಹೊಸನಗರ<br>6.ಶ್ರೀಮತಿ ರಜನಿ ಎನ್ ಜಿ.ಹೆಚ್.ಎಸ್ ಕೋಡ್ಲು ತಾ:ತೀರ್ಥಹಳ್ಳಿ<br>7.ಶ್ರೀಮತಿ ಸವಿತ ಎಂ.ಆರ್ ಜಿ.ಹೆಚ್.ಎಸ್ ನಗರ ತಾ:ಹೊಸನಗರ<br>8. ಶ್ರೀ ಶಿವಕುಮಾರ್ ಜಿ.ಹೆಚ್.ಎಸ್ ಶೆಟ್ಟಿಕೆರೆ ತಾ:ಶಿವಮೊಗ್ಗ |
| **ಮಾರ್ಗದರ್ಶಕರು ಹಾಗೂ ಪರಿಶೀಲಕರು** | |
| **ಶ್ರೀ ವೇಣುಗೋಪಾಲ್.** ಸ.ಶಿ. ಕರ್ನಾಟಕ ಪಬ್ಲಿಕ್ ಶಾಲೆ, 6ನೇ ಬ್ಲಾಕ್ ಜಯನಗರ,ಯಡಿಯೂರು, ದಕ್ಷಿಣ ವಲಯ-03, ಬೆಂಗಳೂರು ದಕ್ಷಿಣ ಜಿಲ್ಲೆ | |

**ಸಮಾಜ ವಿಜ್ಞಾನ**

**8 ನೇ ತರಗತಿ**

| ಕ್ರ.ಸಂ | ಘಟಕದ ಹೆಸರು ಮತ್ತು ಕಲಿಕಾ ಫಲ |
|---|---|
| 1 | **ಆಧಾರಗಳು**<br><br>ಕಲಿಕಾ ಫಲ :<br><br>• ಇತಿಹಾಸ ರಚನೆಯಲ್ಲಿ ಪ್ರಮುಖ ಆಧಾರಗಳನ್ನು ಗುರುತಿಸುತ್ತಾರೆ<br>• ಇತಿಹಾಸದ ಆಧಾರಗಳ ಮಹತ್ವ ಅರಿಯುವರು<br>• ಪ್ರಾಕ್ತನಾ ಶಾಸ್ತ್ರಾಧಾರಗಳನ್ನು ಪರಸ್ಪರ ಹೋಲಿಸುವರು |
| 2 | **ಭರತ ವರ್ಷ: ಭಾರತದ ಭೌಗೋಳಿಕ ಲಕ್ಷಣಗಳು ಮತ್ತು ಪ್ರಾಗೈತಿಹಾಸಿಕ ಕಾಲ**<br><br>ಕಲಿಕಾ ಫಲ :<br><br>• ಭಾರತದ ಭೌಗೋಳಿಕ ಲಕ್ಷಣಗಳನ್ನು ತಿಳಿಯುವರು<br>• ಭಾರತದ ನೆರೆಹೊರೆಯ ರಾಷ್ಟ್ರಗಳನ್ನು ಗುರುತಿಸುವರು<br>• ಇತಿಹಾಸ ಪೂರ್ವಕಾಲದ ಮಾನವನ ಜೀವನ ಶೈಲಿ ಅರಿಯುವರು<br>• ಶಿಲಾಯುಗದ ಹಂತಗಳನ್ನು ವರ್ಗೀಕರಿಸುವರು |
| 3 | **ಪ್ರಾಚೀನ ಭಾರತದ ನಾಗರಿಕತೆಗಳು:** ಸಿಂಧು ಸರಸ್ವತಿ ನಾಗರಿಕತೆ ಮತ್ತು ವೇದಗಳ  ಕಾಲದ ನಾಗರಿಕತೆ<br><br>ಕಲಿಕಾಫಲ:<br><br>• ಸಿಂಧೂ-ಸರಸ್ವತಿ ನಾಗರೀಕತೆಯ ನಗರ ಯೋಜನೆ, ಜೀವನ ಹಾಗೂ ಅವನತಿಯ ಕಾರಣಗಳನ್ನು ತಿಳಿಯುವರು<br>• ವೇದಕಾಲದ ಮಹಿಳೆಯರ ಸ್ಥಾನಮಾನ, ಜಾತಿ ವ್ಯವಸ್ಥೆ ಕುರಿತು ವಿಶ್ಲೇಷಿಸುತ್ತಾರೆ |

| | |
|---|---|
| 4 | ಜಗತ್ತಿನ ಕೆಲವು ಪ್ರಮುಖ ನಾಗರಿಕತೆಗಳು<br><br>ಕಲಿಕಾಫಲ:<br><br>• ಈಜಿಪ್ಟ್, ಮೆಸಪಟೋಮಿಯಾ,ಚೀನಾ ನಾಗರಿಕತೆಗಳನ್ನು ಪ್ರಾಚೀನ ಭಾರತದ ನಾಗರಿಕತೆಯೊಂದಿಗೆ ವಿಶ್ಲೇಷಿಸುವರು<br><br>• ಪ್ರಪಂಚದ ವಿವಿಧ ನಾಗರಿಕತೆಗಳನ್ನು ಹೋಲಿಕೆಯೊಂದಿಗೆ ವಿಶ್ಲೇಷಿಸುತ್ತಾರೆ. |
| 5 | ಸನಾತನ ಧರ್ಮ<br><br>ಕಲಿಕಾಫಲ:<br><br>• ಸನಾತನ ಧರ್ಮದ ವ್ಯಾಪ್ತಿ ಮತ್ತು ಅರ್ಥವನ್ನು ತಿಳಿಯುವರು<br><br>• ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಹಾಗೂ ವಿವಿಧತೆಯಲ್ಲಿ ಏಕತೆಯ ಬೆಳವಣಿಗೆಯನ್ನು ಪ್ರಶಂಸಿಸುವರು. |
| 6 | ಜೈನ ಮತ್ತು ಬೌದ್ಧ ಧರ್ಮಗಳು<br><br>ಕಲಿಕಾಫಲ:<br><br>• ಜೈನ ಹಾಗೂ ಬೌದ್ಧಧರ್ಮದ ಹಿನ್ನಲೆಯನ್ನು ತಿಳಿಯುವರು<br><br>• ಜೈನ ಹಾಗೂ ಬೌದ್ಧಧರ್ಮದ ತತ್ವಗಳನ್ನು ಹೋಲಿಸುವರು<br><br>• ಬೌದ್ಧ ಮತ್ತು ಜೈನ ಮತದ ಬೋಧನೆಗಳು ಮತ್ತು ಜೀವನ ಶೈಲಿಯನ್ನು ಹೋಲಿಸುವರು |
| 7 | **ರಾಜ್ಯ ಶಾಸ್ತ್ರದ ಅರ್ಥ & ಪ್ರಾಮುಖ್ಯತೆ**<br><br>**ಕಲಿಕಾಫಲ:-**<br><br>• ರಾಜ್ಯಶಾಸ್ತ್ರದ ಕಲ್ಪನೆಯನ್ನು ತಿಳಿಯುವರು<br><br>• ರಾಜಕೀಯ ಚಿಂತಕರು ಹಾಗೂ ಅವರ ಕೊಡುಗೆಗಳನ್ನು ತಿಳಿಯುವರು<br><br>• ರಾಜ್ಯಶಾಸ್ತ್ರದ ಪ್ರಾಮುಖ್ಯತೆಯನ್ನು ಅರಿಯುವರು |

| | |
|---|---|
| 8 | **ಪೌರ ಮತ್ತು ಪೌರತ್ವ**<br><br>**ಕಲಿಕಾಫಲ:**<br><br>• ಪೌರ ಮತ್ತು ಪೌರತ್ವದ ಅರ್ಥ, ವ್ಯತ್ಯಾಸವನ್ನು ತಿಳಿಯುವರು<br>• ರಾಷ್ಟ್ರವು ಪೌರರಿಗೆ ನೀಡಿರುವ ಸೌಲಭ್ಯಗಳನ್ನು ಅರಿಯುವರು<br>• ಪೌರ ಮತ್ತು ವಿದೇಶಿಯರ ನಡುವಿನ ವ್ಯತ್ಯಾಸ ಗುರುತಿಸುವರು<br>• ಪೌರತ್ವ ಪಡೆಯುವ ಹಾಗೂ ಕಳೆದುಕೊಳ್ಳುವ ವಿಧಾನಗಳನ್ನು ವಿಶ್ಲೇಷಿಸುವರು |
| 9 | **ಮಾನವ ಮತ್ತು ಸಮಾಜ**<br><br>ಕಲಿಕಾ ಫಲ :<br><br>• ಮಾನವ ಮತ್ತು ಸಮಾಜದ ನಡುವಿನ ಸಂಬಂಧ ಹಾಗೂ ಸಾಮಾಜಿಕರಣವನ್ನು ವಿಶ್ಲೇಷಿಸುತ್ತಾರೆ<br>• ಆರಂಭಿಕ ಸಮಾಜಶಾಸ್ತ್ರಜ್ಞರನ್ನು ಹೆಸರಿಸುವರು<br>• ಸಮಾಜಶಾಸ್ತ್ರದ ಅಧ್ಯಯನದ ಮಹತ್ವವನ್ನು ಪಟ್ಟಿಮಾಡುವರು |
| 10 | **ಮಾನವ ಮತ್ತು ಸಂಸ್ಕೃತಿ**<br><br>**ಕಲಿಕಾಫಲ :**<br><br>• ಸಂಸ್ಕೃತಿಯ ಕಲ್ಪನೆಯನ್ನು ತಿಳಿಯುವರು<br>• ಸಾಂಸ್ಕೃತಿಕ  ವೈವಿಧ್ಯತೆ ಹಾಗೂ ಪರಂಪರೆಯನ್ನು ಪ್ರಶಂಸಿಸುವರು |
| 11 | **ಭೂಮಿ ನಮ್ಮ ಜೀವಂತ ಗ್ರಹ.**<br><br>ಕಲಿಕಾ ಫಲ :<br><br>• ಭೂಮಿಯ ಆಕಾರ ಹಾಗೂ ಜಲ ಹಂಚಿಕೆಯನ್ನು ತಿಳಿಯುವರು<br>• ಪ್ರಪಂಚದ ಭೌಗೋಳಿಕ ನಕ್ಷೆಯಲ್ಲಿ ಖಂಡಗಳು ಹಾಗೂ ಸಾಗರಗಳನ್ನು ಗುರುತಿಸುವರು<br>• ಅಕ್ಷಾಂಶ ಮತ್ತು ರೇಖಾಂಶಗಳ ಮಹತ್ವವನ್ನು ವಿವರಿಸುತ್ತಾರೆ |

| | |
|---|---|
| 12 | **ಶಿಲಾಗೋಳ**<br><br>ಕಲಿಕಾ ಫಲ:<br><br>• ಶಿಲಾಗೋಳದ ರಚನೆ ಸಂಯೋಜನೆ ತಿಳಿಯುವರು<br>• ಭೂ ಅಂತರಿಕ ಹಾಗೂ ಬಾಹ್ಯ ಶಕ್ತಿಗಳ ಕಾರಣ ಹಾಗೂ ಪರಿಣಾಮಗಳನ್ನು ವಿಶ್ಲೇಷಿಸುವರು |
| 13 | **ವಾಯುಗೋಳ**<br><br>ಕಲಿಕಾ ಫಲ:<br><br>• ವಾಯುಗೋಳದ  ರಚನೆ ಸಂಯೋಜನೆ ತಿಳಿದು ವಿವರಿಸುತ್ತಾರೆ.<br>• ವಾಯುಗೋಳದ ಘಟಕಾಂಶಗಳನ್ನು ಹೆಸರಿಸುವರು<br>• ವಾಯುಗುಣ ಹಾಗೂ ಹವಾಮಾನವನ್ನು ವ್ಯತ್ಯಾಸಿಸುವರು |
| 14 | **ಅರ್ಥಶಾಸ್ತ್ರ ಅರ್ಥ ಮತ್ತು ಮಹತ್ವ**<br><br>ಕಲಿಕಾ ಫಲ:<br><br>• **ಅರ್ಥಶಾಸ್ತ್ರ ಅರ್ಥ ಮತ್ತು ಮಹತ್ವ** ತಿಳಿದು ವಿವರಿಸುತ್ತಾರೆ.<br>• **ಆರ್ಥಿಕ ಚಟುವಟಿಕೆಗಳನ್ನು ವರ್ಗೀಕರಿಸುವರು**<br>• **ಉತ್ಪಾದಾಂಗಗಳನ್ನು ವ್ಯಾಖ್ಯಾನಿಸುವರು** |
| 15 | **ವ್ಯವಹಾರ ಅರ್ಥ ಮತ್ತು ಪ್ರಾಮುಖ್ಯತೆ**<br><br>**ಕಲಿಕಾಫಲ :.**<br><br>• ವ್ಯವಹಾರದ ಉದ್ದೇಶಗಳನ್ನು ಪಟ್ಟಿಮಾಡುವರು<br>• ವ್ಯವಹಾರದ ವಿಧಗಳನ್ನು ವರ್ಗೀಕರಿಸುವರು<br>• ವ್ಯವಹಾರದ ಅರ್ಥ ಮತ್ತು ಪ್ರಾಮುಖ್ಯತೆಯನ್ನು ಕುರಿತು ವಿಶ್ಲೇಷಿಸುತ್ತಾರೆ.<br>• ವ್ಯವಹಾರದ ತತ್ವಗಳನ್ನು ತೀಳಿಯುವರು |

| | |
|---|---|
| 16 | **ಮೌರ್ಯರು ಮತ್ತು ಕುಶಾನರು**<br><br>**ಕಲಿಕಾ ಫಲ :**<br><br>• ಸಾಮ್ರಾಟ ಅಶೋಕ ಹಾಗೂ ಮೌರ್ಯರ ಆಡಳಿತ ಹಾಗೂ ಕೊಡುಗೆಗಳನ್ನು ತಿಳಿಯುವರು<br>• ಕುಶಾನರ ವಾಸ್ತುಶಿಲ್ಪ ಕೊಡುಗೆಗಳನ್ನು ಪ್ರಶಂಶಿಸುವರು<br>• ಮೌರ್ಯರು ಹಾಗೂ ಕುಶಾನರ ಆಡಳಿತ ವ್ಯವಸ್ಥೆಯನ್ನು ಪ್ರಸ್ತುತ ಆಡಳಿತ ವ್ಯವಸ್ಥೆಯೊಂದಿಗೆ ಹೋಲಿಸುವರು |
| 17 | **ಗುಪ್ತರು ಮತ್ತು ವರ್ಧನರು**<br><br>**ಕಲಿಕಾ ಫಲ:**<br><br>• ಗುಪ್ತರು ಮತ್ತು ವರ್ಧನರ ಪ್ರಸಿದ್ಧ ದೊರೆಗಳನ್ನು ಹೆಸರಿಸುವರು<br>• ಗುಪ್ತ ಸಾಮ್ರಾಜ್ಯದ ಸಾಹಿತ್ಯ ಹಾಗೂ ವೈಜ್ಞಾನಿಕ ಕೊಡುಗೆಗಳನ್ನು ವಿಶ್ಲೇಷಿಸುವರು<br>• ವರ್ಧನರ ಶೈಕ್ಷಣಿಕ ಹಾಗೂ ಸಾಹಿತ್ಯ ಕೊಡುಗೆಗಳನ್ನು ಪ್ರಶಂಸಿಸುವರು<br>• ಭಾರತದ ಭೂಪಟದಲ್ಲಿ ಗುಪ್ತ ಸಾಮ್ರಾಜ್ಯದ ಮೇರೆಗಳನ್ನು ಗುರುತಿಸುವ ಕೌಶಲ್ಯ ವೃದ್ಧಿಸಿಕೊಳ್ಳುವರು |
| 18 | **ದಕ್ಷಿಣ ಭಾರತದ ರಾಜವಂಶಗಳು**<br><br>**ಕಲಿಕಾ ಫಲ:**<br><br>• **ಶಾತವಾಹನ, ಕದಂಬರು, ಗಂಗರ ಆಡಳಿತ, ಮತ್ತು ಕಲೆ ವಾಸ್ತುಶಿಲ್ಪದ ಕೊಡುಗೆಗಳನ್ನು ವಿಶ್ಲೇಷಿಸುವರು**<br>• ಭೂಪಟದಲ್ಲಿ ಕದಂಬರು ಹಾಗೂ ಗಂಗರ ಸಾಮ್ರಾಜ್ಯದ ಎಲ್ಲೆಗಳನ್ನು ಗುರುತಿಸುವರು |
| 19 | **ಬಾದಾಮಿ ಚಾಲುಕ್ಯರು ಮತ್ತು ಕಂಚಿ ಪಲ್ಲವರು**<br><br>**ಕಲಿಕಾ ಫಲ:**<br><br>• **ಬಾದಾಮಿ ಚಾಲುಕ್ಯರ ಇಮ್ಮಡಿ ಪುಲಿಕೇಶಿಯ ಸಾಮ್ರಾಜ್ಯ ವಿಸ್ತರಣೆಯನ್ನು ತಿಳಿಯುವರು**<br>• **ಕಂಚಿ ಪಲ್ಲವರ ಸಾಹಿತ್ಯ, ಧರ್ಮ, ಕಲೆ, ವಾಸ್ತುಶಿಲ್ಪ ಹಾಗೂ ಶಿಕ್ಷಣದ ಕೊಡುಗೆಗಳನ್ನು ಪ್ರಶಂಸಿಸುವರು** |

| | |
|---|---|
| 20 | **ಮಾನ್ಯಖೇಟ ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಲುಕ್ಯರು**<br><br>**ಕಲಿಕಾ ಫಲ :**<br><br>• ರಾಷ್ಟ್ರಕೂಟರು ಆಡಳಿತ, ಸಾಹಿತ್ಯ ಹಾಗೂ ವಾಸ್ತುಶಿಲ್ಪದ ಕೊಡುಗೆಗಳನ್ನು ವಿವರಿಸುವರು<br><br>• ಕಲ್ಯಾಣದ ಚಾಲುಕ್ಯರ ಆಡಳಿತ, ಸಾಹಿತ್ಯ ಹಾಗೂ ವಾಸ್ತುಶಿಲ್ಪದ ಪ್ರಗತಿಯನ್ನು ತಿಳಿಯುವರು<br><br>• ಭೂಪಟದಲ್ಲಿ ರಾಷ್ಟ್ರಕೂಟರ ಸಾಮ್ರಾಜ್ಯದ ಗಡಿಗಳನ್ನು ಗುರುತಿಸುವರು<br><br>• ಆಡಳಿತ ವ್ಯವಸ್ಥೆಯನ್ನು ಪ್ರಸ್ತುತ ಆಡಳಿತ ವ್ಯವಸ್ಥೆಯೊಂದಿಗೆ ಹೋಲಿಸುವರು ಹಾಗೂ ಈ ಕಾಲದ ಐತಿಹಾಸಿಕ ಬೆಳವಣಿಗೆಯನ್ನು ವಿವರಿಸುತ್ತಾರೆ |
| 21 | **ಚೋಳರು ಮತ್ತು ದ್ವಾರಸಮುದ್ರದ ಹೊಯ್ಸಳರು**<br><br>**ಕಲಿಕಾ ಫಲ :**<br><br>• ವಿವಿಧ ಕ್ಷೇತ್ರಗಳಲ್ಲಿ ಚೋಳ ಸಾಮ್ರಾಜ್ಯದ ಕೊಡುಗೆ ಹಾಗೂ ವಿಸ್ತರಣೆಯನ್ನು ಪಟ್ಟಿಮಾಡುವರು<br><br>• ಚೋಳರ ಸ್ವಯಮಾಡಳಿತ ವ್ಯವಸ್ಥೆಯನ್ನು ಪ್ರಸ್ತುತ ಆಡಳಿತ ವ್ಯವಸ್ಥೆಯೊಂದಿಗೆ ಹೋಲಿಸುವರು<br><br>• ಹೋಯ್ಸಳರ ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪದಹಾಗೂ ಬೆಳವಣಿಗೆಯನ್ನು ತಿಳಿಯುವರು |
| 22 | **ಪ್ರಜಾಪ್ರಭುತ್ವ**<br><br>ಕಲಿಕಾಫಲ:<br><br>• ಪ್ರಜಾಪ್ರಭುತ್ವದ ಕಲ್ಪನೆಯನ್ನು ಅರಿಯುವರು<br><br>• ಪ್ರಜಾಪ್ರಭುತ್ವದ ವಿಧಗಳು ಹಾಗೂ ಅವುಗಳ ವ್ಯತ್ಯಾಸಗಳನ್ನು ಗುರುತಿಸುವರು<br><br>• ಪ್ರಜಾಪ್ರಭುತ್ವದ ಲಕ್ಷಣಗಳು, ಅದರ ಯಶಸ್ಸಿಗೆ ಕಾರಣವಾಗುವ ಅಂಶಗಳನ್ನು ಪಟ್ಟಿಮಾಡುವರು<br><br>• ಚುನಾವಣಾ ಪದ್ಧತಿಯನ್ನು ತಿಳಿಯುವರು<br><br>• ಪ್ರಜಾಪ್ರಭುತ್ವದಲ್ಲಿ ಸಮೂಹ ಮಾಧ್ಯಮಗಳ ಪಾತ್ರವನ್ನು ವಿಶ್ಲೇಸುವರು<br><br>• 2005 ರ ಮಾಹಿತಿ ಹಕ್ಕು ಕಾಯ್ದೆಯ ಬಗ್ಗೆ ತಿಳಿಯುವರು |

| | |
|---|---|
| 23 | **ಸ್ಥಳೀಯ ಸ್ವಯಂ ಸರ್ಕಾರಗಳು**<br><br>**ಕಲಿಕಾ ಫಲ:**<br><br>• ಸ್ಥಳೀಯ ಸರ್ಕಾರದ ರಚನೆಯ ಹಿನ್ನಲೆಯನ್ನು ತಿಳಿಯುವರು<br>• ಸ್ಥಳೀಯ ಸರ್ಕಾರದ ಕಾರ್ಯಗಳು ಹಾಗೂ ಉದ್ದೇಶಗಳನ್ನು ತಿಳಿಯುವರು<br>• ವಿವಿಧ ಸ್ಥಳೀಯ ಸರ್ಕಾರಗಳ ರಚನೆ, ಆಡಳಿತ, ಜವಾಬ್ದಾರಿಗಳನ್ನು ತಿಳಿಯುವರು |
| 24 | **ದಿನನಿತ್ಯದ ಜೀವನದಲ್ಲಿ ಸಮಾಜಶಾಸ್ತ್ರ**<br><br>**ಕಲಿಕಾ ಫಲ:**<br><br>• ನಿತ್ಯಜೀವನದಲ್ಲಿ ವ್ಯಕ್ತಿಗಳ ಪಾತ್ರ ಮತ್ತು ಸಾಮಾಜಿಕ ಚಲನವಲನಗಳನ್ನು ತಿಳಿಯುವರು<br>• ಸಾಮಾಜೀಕರಣದ ಮಹತ್ವವನ್ನು ವಿಶ್ಲೇಷಿಸುತ್ತಾರೆ. |
| 25 | **ಸಮಾಜದ ಪ್ರಕಾರಗಳು**<br><br>**ಕಲಿಕಾ ಫಲ:**<br><br>• **ವಿವಿಧ ಪ್ರಕಾರದ** ಸಮಾಜದ ಉಗಮ ಹಾಗೂ ಆಧುನಿಕ ಸಮಾಜದ ನಡುವೆ ಹೋಲಿಕೆಯನ್ನು ತಿಳಿಯುವರು<br>• ವಿವಿಧ ಪ್ರಕಾರದ ಸಮಾಜಗಳನ್ನು ವರ್ಗೀಕರಿಸುವರು<br>• ವಿವಿಧ ಪ್ರಕಾರದ ಸಮಾಜಗಳ ಲಕ್ಷಣಗಳನ್ನು ಪಟ್ಟಿಮಾಡುವರು |
| 26 | **ಜಲಗೋಳ**<br><br>**ಕಲಿಕಾ ಫಲ:**<br><br>• ವಿವಿಧ ಜಲಮೂಲಗಳ ಬಗ್ಗೆ ತಿಳಿಯುವರು<br>• ಮೇಲ್ಮೈ ಲಕ್ಷಣಗಳ ಆಧಾರದ ಮೇಲೆ ಸಾಗರದ ತಳದ ಭೂಸ್ವರೂಪವನ್ನು ವರ್ಗೀಕರಿಸುವರು<br>• ಸಾಗರ ಪ್ರವಾಹಗಳು ಹಾಗೂ ಅವುಗಳ ವಿಧಗಳನ್ನು ಹೆಸರಿಸುವರು<br>• ಸಾಗರಗಳ ಸಂರಕ್ಷಣೆಯ ಮಹತ್ವವನ್ನು ತಿಳಿಯುವರು<br>• ಭಾರತದ ಭೂಪಟದಲ್ಲಿ ವಿವಿಧ ಜಲಮೂಲಗಳನ್ನು ಗುರುತಿಸುವರು |

| | |
|---|---|
| 27 | **ಜೀವಗೋಳ**<br><br>**ಕಲಿಕಾ ಫಲ:**<br><br>• ಪರಿಸರ ಸಮತೋಲನದ ಅರ್ಥ ಹಾಗೂ ಪ್ರಾಮುಖ್ಯತೆ ತಿಳಿಯುವರು<br>• ಪರಿಸರ ಮಾಲಿನ್ಯದ ಕಾರಣ ಮತ್ತು ಪರಿಣಾಮಗಳನ್ನು ತಿಳಿಯುವರು<br>• ಪರಿಸರ ಮಾಲಿನ್ಯ ತಡೆಗಟ್ಟುವ ಕ್ರಮಗಳನ್ನು ವಿಶ್ಲೇಷಿಸುವರು |
| 28 | **ಅರ್ಥ ಶಾಸ್ತ್ರದ ಮೂಲ ಪರಿಕಲ್ಪನೆಗಳು**<br><br>**ಕಲಿಕಾ ಫಲ:**<br><br>• ಅರ್ಥಶಾಸ್ತ್ರದ ಮೂಲ ಪರಿಕಲ್ಪನೆಗಳನ್ನು ಹೆಸರಿಸುವರು<br>• ಬೇಡಿಕೆ, ಪೂರೈಕೆ, ವಿತರಣೆ ಹಾಗೂ ಉತ್ಪಾದನೆಗಳ ನಡುವಿನ ಸಂಬಂಧಗಳನ್ನು ತಿಳಿಯುವರು<br>• ರಾಷ್ಟ್ರೀಯ ವರಮಾನ ಹಾಗೂ ತಲವರಮಾನಗಳನ್ನು ವ್ಯತ್ಯಾಸಿಸುವರು. |
| 29 | **ವಿವಿಧ ವ್ಯವಹಾರ ಸಂಘಟನೆಗಳ ಹುಟ್ಟು**<br><br>**ಕಲಿಕಾ ಫಲ:**<br><br>• ವ್ಯವಹಾರದ ಸಂಘಟನೆಗಳನ್ನು ವರ್ಗೀಕರಿಸುವರು<br>• **ಪಾಲುದಾರಿಕೆ ಸಂಸ್ಥೆಗಳ ವಿಧಗಳು, ಅನುಕೂಲಗಳು ಹಾಗೂ ಅನಾನುಕೂಲಗಳನ್ನು ಪಟ್ಟಿ ಮಾಡುವರು** |
| 30 | **ದೊಡ್ಡ ಪ್ರಮಾಣದ ವ್ಯವಹಾರ ಸಂಘಟನೆಗಳು**<br><br>**ಕಲಿಕಾ ಫಲ:**<br><br>• ಸಹಕಾರಿ ಸಂಘಗಳ ಲಕ್ಷಣಗಳು, ವಿಧಗಳು, ಅನುಕೂಲಗಳು ಹಾಗೂ ಅನಾನೂಕೂಲಗಳನ್ನು ತಿಳಿಯುವರು<br>• ಜಂಟಿ ಪಾಲುದಾರಿಕೆ ಸಂಸ್ಥೆಗಳ ವಿದಗಳು, ಲಕ್ಷಣಗಳು, ಸ್ವರೂಪ, ಅನುಕೂಲಗಳು ಹಾಗೂ ಅನಾನುಕೂಲಗಳನ್ನು ಪಟ್ಟಿಮಾಡುವರು<br>• ಬೃಹತ್ ಪ್ರಮಾಣದ, ಸಣ್ಣ ಪ್ರಮಾಣದ ಮತ್ತು ಬಹು ರಾಷ್ಟ್ರೀಯ ಕಂಪನಿಗಳ ಕಾರ್ಯ ವಿಧಾನವನ್ನು ವಿವರಿಸುವರು. |

ಎಂಟನೇ ತರಗತಿ ಪಾಠ ಆಧಾರಿತ ಮೌಲ್ಯಾಂಕನ ಸಾಮಾಗ್ರಿ. ಕಲಿಕಾ ಫಲವಾರು ಪ್ರಶ್ನೆ ಕೋಠಿ (Question Bank and Answer key)

# ಸಮಾಜ ವಿಜ್ಞಾನ

## 8 ನೇ ತರಗತಿ

## ಪಾಠವಾರು, ಕಲಿಕಾ ಫಲವಾರು ಪ್ರಶ್ನೆ ಕೋಠಿ (Question Bank)

## ಅಧ್ಯಾಯ 1. ಆಧಾರಗಳು

ಕಲಿಕಾ ಫಲ :

- ಇತಿಹಾಸ ರಚನೆಯಲ್ಲಿ ಪ್ರಮುಖ ಆಧಾರಗಳನ್ನು ಗುರುತಿಸುತ್ತಾರೆ
- ಇತಿಹಾಸದ ಆಧಾರಗಳ ಮಹತ್ವ ಅರಿಯುವರು
- ಪ್ರಾಕ್ತನಾ ಶಾಸ್ತ್ರಾಧಾರಗಳನ್ನು ಪರಸ್ಪರ ಹೋಲಿಸುವರು

### I. ಬಹುಆಯ್ಕೆ ಪ್ರಶ್ನೆಗಳು

1. ಹ್ಯೂಯೆನ್ ತ್ಸಾಂಗ್ ನ ಪ್ರಸಿದ್ಧ ಕೃತಿ (ಸು)

A) ಸಿ-ಯು-ಕಿ B) ಇಂಡಿಕಾ C) ಜಿಯೋಗ್ರಫಿ D) ಫೋ-ಕು-ಕಿ

2. ಪ್ರಾಕ್ತನ ಆಧಾರಕ್ಕೆ ಉದಾಹರಣೆ (ಸಾ)

A) ದೇಶೀಯ ಸಾಹಿತ್ಯ B) ಮೌಖಿಕ ಆಧಾರ C) ವಿದೇಶೀಯ ಸಾಹಿತ್ಯ D) ನಾಣ್ಯಗಳು

3. ಕನ್ನಡ ಭಾಷೆಯ ಮೊದಲ ಶಾಸನ (ಸು)

A) ಐಹೊಳೆ ಶಾಸನ B) ಹಲ್ಮಿಡಿ ಶಾಸನ

C) ಅಲಹಾಬಾದ್ ಸ್ತಂಭ ಶಾಸನ D) ತಾಳಗುಂದ ಸಿಂಹಕಟಾಂಜನ ಶಾಸನ

4. "ಉತ್ತರ ಮೇರೂರು" ಶಾಸನವು ಇವರ ಕಾಲಕ್ಕೆ ಸೇರಿದೆ (ಸು)

A) ಪಾಂಡ್ಯರು B) ಚೇರರು C) ಚೋಳರು D) ಶಾತವಾಹನರು

5. ಮೌಖಿಕ ಆಧಾರಕ್ಕೆ ಒಂದು ಉದಾಹರಣೆ (ಸಾ)

A) ಶಾಸನ B) ಲಾವಣಿ C) ಅವಶೇಷ D) ಸ್ಮಾರಕ

6. ಭಾರತದಲ್ಲಿ ಮೊದಲು ಶಾಸನ ಹೊರಡಿಸಿದ ಅರಸ (ಸು)

A) ಅಶೋಕ B) ಕಾನಿಷ್ಕ C) ಹರ್ಷವರ್ಧನ D) ಸಮುದ್ರಗುಪ್ತ

### II.

**ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.**

7. ಆಧಾರಗಳು ಎಂದರೇನು? (ಸು)

8. ಚಾಂದ್ ಬರ್ದಾಯಿ ಬರೆದ ಕೃತಿ ಯಾವುದು? (ಸು)

9. ಶ್ರೀವಿಜಯನಿಗೆ ಆಶ್ರಯ ನೀಡಿದ್ದ ಅರಸನನ್ನುಹೆಸರಿಸಿ? (ಸು)

10. ಸಿಲೋನಿನ ಎರಡು ಪ್ರಸಿದ್ಧ ಕೃತಿಗಳು ಯಾವುವು? (ಸು)

11. ನಾಣ್ಯಶಾಸ್ತ್ರ ಎಂದರೇನು? (ಸು)

12. 'ತಾಜ್ ಮಹಲ್' ಯಾವ ಸ್ಥಳದಲ್ಲಿದೆ? (ಸು)

13. ಬೆಂಗಳೂರಿನಲ್ಲಿರುವ ರೋಮನ್ ನಾಣ್ಯಗಳು ಏನನ್ನು ತಿಳಿಸುತ್ತವೆ? (ಕ)

14. ಜಿಯೋಗ್ರಾಫಿ ಕೃತಿ ರಚಿಸಿದವರು ಯಾರು? (ಸು)

III. **ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

15. ಆಧಾರಗಳ ಪ್ರಕಾರಗಳಾವುವು? (ಸು)

16. ಪ್ರಾಕ್ತನ ಆಧಾರಗಳನ್ನು ವಿಂಗಡಿಸಿರಿ. (ಸಾ)

17. ವಿದೇಶಿ ಸಾಹಿತ್ಯಗಳನ್ನು ಹೆಸರಿಸಿರಿ. (ಸು)

18. ದೇಶಿಯ ಸಾಹಿತ್ಯ ರಚನೆಗೆ ಸಹಕಾರಿಯಾಗಿರುವ ಶಾಸನಗಳನ್ನು ಹೆಸರಿಸಿ. (ಸು)

19. ಭಾರತದ ಇತಿಹಾಸ ಮೌಖಿಕ ಆಧಾರಗಳಿಂದ ರೂಪಗೊಳ್ಳುತ್ತದೆ. ಸಮರ್ಥಿಸಿ. (ಕ)

20. ಇತಿಹಾಸಕಾರರು ಇತಿಹಾಸವನ್ನು ಹೇಗೆ ರಚಿಸುತ್ತಾರೆ? (ಕ)

IV. **ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿ.**

21. ಭಾರತದ ಇತಿಹಾಸ ರಚಿಸಲು ಸಾಹಿತ್ಯಗಳು ಹೇಗೆ ಪೂರಕವಾಗಿವೆ? ವಿವರಿಸಿ (ಸಾ)

## ಅಧ್ಯಾಯ 2.

## ಭರತವರ್ಷ : ಭಾರತದ ಭೌಗೋಳಿಕ ಲಕ್ಷಣಗಳು ಮತ್ತು ಪ್ರಾಗೈತಿಹಾಸಿಕ ಕಾಲ

ಕಲಿಕಾ ಫಲ :

- ಭಾರತದ ಭೌಗೋಳಿಕ ಲಕ್ಷಣಗಳನ್ನು ತಿಳಿಯುವರು
- ಭಾರತದ ನೆರೆಹೊರೆಯ ರಾಷ್ಟ್ರಗಳನ್ನು ಗುರುತಿಸುವರು
- ಇತಿಹಾಸ ಪೂರ್ವಕಾಲದ ಮಾನವನ ಜೀವನ ಶೈಲಿ ಅರಿಯುವರು
- ಶಿಲಾಯುಗದ ಹಂತಗಳನ್ನು ವರ್ಗೀಕರಿಸುವರು

I. ಬಹು ಆಯ್ಕೆ ಪ್ರಶ್ನೆಗಳು:

1. ಭಾರತದ ಕರಾವಳಿ ತೀರದ ಉದ್ದ (ಸು)

A) 7100 ಕಿಲೋಮೀಟರ್ B) 6800 ಕಿಲೋಮೀಟರ್
C) 6100 ಕಿಲೋಮೀಟರ್ D) 8500 ಕಿಲೋಮೀಟರ್

2. ಭಾರತವನ್ನು ಎರಡು ಸಮಭಾಗಗಳಾಗಿ ವಿಂಗಡಿಸಿದ ನದಿ (ಸಾ)

A) ಯಮುನಾ ನದಿ B) ಗಂಗಾ ನದಿ C) ಸಿಂಧೂ ನದಿ D) ನರ್ಮದಾ ನದಿ

3. ಭಾರತದ ದಕ್ಷಿಣಕ್ಕಿರುವ ನೆರೆಯ ರಾಷ್ಟ್ರ (ಸು)

A) ಶ್ರೀಲಂಕಾ B) ಪಾಕಿಸ್ತಾನ C) ಬಾಂಗ್ಲಾದೇಶ D) ಭೂತಾನ್

4. ಭಾರತದ ಪ್ರಾಚೀನ ವಿದೇಶಿ ವ್ಯಾಪಾರ ಈ ಮಾರ್ಗದ ಮೂಲಕ ನಡೆದಿತ್ತು (ಸು)

A) ಭೂಮಾರ್ಗ B) ಸಮುದ್ರ ಮಾರ್ಗ C) ವಾಯುಮಾರ್ಗ D) ರೈಲು ಮಾರ್ಗ

5. ಭಾರತ ಏಷ್ಯಾ ಖಂಡದ ಈ ಭಾಗದಲ್ಲಿದೆ (ಸು)

A) ದಕ್ಷಿಣ ಭಾಗ B) ಉತ್ತರ ಭಾಗ C) ಪೂರ್ವ ಭಾಗ D) ಪಶ್ಚಿಮ ಭಾಗ

6. ಪ್ರಾಗೈತಿಹಾಸಿಕ ಕಾಲದ ಬೂದಿಯ ಕುರುಹುಗಳು ದೊರೆತ ಸ್ಥಳ (ಸು)

A) ಹುಣಸಗಿ B) ಕರ್ನೂಲಿ C) ಹರಪ್ಪ D) ಲೋಥಾಲ್

II. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ವಾಕ್ಯದಲ್ಲಿ ಉತ್ತರಿಸಿ.

7. ಚರಿತ್ರೆಯ ಪೂರ್ವಕಾಲ ಎಂದರೇನು? (ಸು)

8. ಭಾರತದಲ್ಲಿರುವ ಒಟ್ಟು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸಂಖ್ಯೆ ಎಷ್ಟು? (ಸು)

9. ಜಗತ್ತಿನಲ್ಲಿಯೇ ಅತ್ಯಂತ ಎತ್ತರದ ಶಿಖರಗಳನ್ನು ಹೊಂದಿರುವ ಪರ್ವತ ಶ್ರೇಣಿ ಯಾವುದು? (ಸು)

10. ಪ್ರಾಚೀನ ವೇದಕಾಲದ ನಾಗರೀಕತೆಗಳು ಜನಿಸಿದ ನದಿದಂಡೆಯನ್ನು ಹೆಸರಿಸಿ (ಸು)

11. ರೇವುಪಟ್ಟಣಗಳ ಅಭಿವೃದ್ಧಿ ಯಾವ ಯಾವ ಪ್ರಬಲ ರಾಜ್ಯಗಳ ಉದಯಕ್ಕೆ ಕಾರಣವಾಗಿತ್ತು? (ಸಾ)

III. ಕೆಳಗಿನ ಪ್ರಶ್ನೆಗಳಿಗೆ ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿ. (ಸು)

12. “ಭಾರತ ಒಂದು ಉಪಖಂಡ” ಕಾರಣ ತಿಳಿಸಿ. (ಸಾ)

13. ಭಾರತದೊಂದಿಗೆ ಗಡಿಯನ್ನು ಹಂಚಿಕೊಂಡಿರುವ ದೇಶಗಳಾವುವು? (ಸು)

14. “ಪ್ರಾಗೈತಿಹಾಸಿಕ ಕಾಲವನ್ನು ಚರಿತ್ರೆಯ ಪೂರ್ವಕಾಲ ಎಂದು ಕರೆಯಲಾಗಿದೆ ಏಕೆ? (ಸಾ)

15. ಪ್ರಾಚೀನ ಕೃಗಾರಿಕ ನೆಲೆಗಳು ಹೇಗೆ ಹುಟ್ಟಿಕೊಂಡವು? (ಕ)

16. ಹೆಚ್ಚಾಗಿ ಯಾವ ಕಣಿವೆಗಳ ಮೂಲಕ ಭಾರತದ ಮೇಲೆ ದಾಳಿಗಳು ಸಂಭವಿಸಿವೆ? (ಸು)

IV. ಕೆಳಗಿನ ಪ್ರಶ್ನೆಗಳಿಗೆ ಐದು- ಆರು ವಾಕ್ಯಗಳಲ್ಲಿ ಉತ್ತರಿಸಿ.

17. ಶಿಲಾಯುಗ ಬಗ್ಗೆ ವಿವರಿಸಿ. (ಸಾ)

## ಅಧ್ಯಾಯ 3 :

## ಪ್ರಾಚೀನ ಭಾರತದ ನಾಗರಿಕತೆಗಳು: ಸಿಂಧು ಸರಸ್ವತಿ ನಾಗರಿಕತೆ ಮತ್ತು ವೇದಗಳ ಕಾಲದ ನಾಗರಿಕತೆ

**ಕಲಿಕಾಫಲ:**

- ಸಿಂಧೂ-ಸರಸ್ವತಿ ನಾಗರೀಕತೆಯ ನಗರ ಯೋಜನೆ, ಜೀವನ ಹಾಗೂ ಅವನತಿಯ ಕಾರಣಗಳನ್ನು ತಿಳಿಯುವರು
- ವೇದಕಾಲದ ಮಹಿಳೆಯರ ಸ್ಥಾನಮಾನ, ಜಾತಿ ವ್ಯವಸ್ಥೆ ಕುರಿತು ವಿಶ್ಲೇಷಿಸುತ್ತಾರೆ.

I. **ಬಹು ಆಯ್ಕೆ ಪ್ರಶ್ನೆಗಳು**

1) ಸಿಂಧೂ ನಾಗರಿಕತೆಯ ಶೋಧನೆಯ ವರ್ಷ. (ಸು)

A) 1920-1921 B) 1925-1926 C) 1911-1912 D) 1947-1948

2) ವಿಶ್ವಕ್ಕೆ ಭಾರತದ ಪ್ರಾಚೀನ ನಾಗರಿಕತೆ ಶೋದ ಪ್ರಕಟಿಸುವಲ್ಲಿ ನೇತೃತ್ವ ವಹಿಸಿದ್ದವರು. (ಸು)

A) ದಯಾರಾಮ್ ಸಹಾನಿ, B) ಆರ್.ಡಿ. ಬ್ಯಾನರ್ಜಿ, C) ಜಾನ್ ಮಾರ್ಷಲ್, D) ಕನ್ನಿಂಗ್ ಹ್ಯಾಮ್.

3) ಬೆಂಕಿಯ ಒಲೆಗಳು ಕಂಡುಬಂದ ಸ್ಥಳ (ಸು)

A) ಕಾಲಿಬಂಗನ್ B) ಮಹೆಂಜೋದಾರೋ C) ಹರಪ್ಪ D) ಅಜಂತ

4) ಮಳೆ ನೀರನ್ನು ಅತ್ಯಂತ ಯುಕ್ತವಾಗಿ ಸಂಗ್ರಹಿಸುವ ವ್ಯವಸ್ಥೆ ಇದ್ದ ಸ್ಥಳ. (ಸು)

A) ಕಾಲಿಬಂಗನ್ B) ಧೋಲವೀರ C) ಲೋಥಾಲ್ D) ಹರಪ್ಪ.

5) ಈ ಸ್ಥಳದಲ್ಲಿ ಬೃಹದಾಕಾರದ ಹಡಗುಕಟ್ಟೆ ಪತ್ತೆಯಾಗಿದೆ (ಸು)

A) ಧೋಲವೀರ B) ಲೋಥಾಲ್ C) ಕಾಲಿಬಂಗನ್ D) ಮಹೆಂಜೊದಾರೋ.

II. ಒಂದು ವಾಕ್ಯದಲ್ಲಿ ಉತ್ತರಿಸಿ.

6) ಮೊದಲ ಬಾರಿಗೆ 'ಹರಪ್ಪ ನಾಗರಿಕತೆ' ಎಂದು ಘೋಷಿಸಿದವರು ಯಾರು? (ಸು)

7) ವೇದಗಳ ಕಾಲದ ನಾಗರಿಕತೆಯ ಅವಧಿ ತಿಳಿಸಿ. (ಸು)

8) ವೇದ ಎಂಬ ಪದದ ಉಗಮವನ್ನು ತಿಳಿಸಿ (ಸು)

9) ಅತ್ಯಂತ ಪುರಾತನವಾದ ವೇದ ಯಾವುದು? (ಸು)

10) ಋಗ್ವೇದದ ಯಾವ ಮಂಡಲದಲ್ಲಿ ಯಾವ ಸೂಕ್ತದಲ್ಲಿ ವರ್ಣ ವ್ಯವಸ್ಥೆ ಬಗ್ಗೆ ಉಲ್ಲೇಖಿಸಲಾಗಿದೆ? (ಸು)

11) ಉತ್ತರ ವೇದ ಕಾಲದ ಪ್ರಮುಖ ಉದ್ಯೋಗವನ್ನು ಹೆಸರಿಸಿ. (ಸು)

12) ಋಗ್ವೇದದಲ್ಲಿ ಎಷ್ಟು ಸ್ತೋತ್ರಗಳಿವೆ? (ಸು)

13) ಪ್ರಪಂಚದ ಪ್ರಮುಖ ನಾಗರಿಕತೆಗಳನ್ನು ಹೆಸರಿಸಿ. (ಸು)

14) ಸರಸ್ವತಿ ನದಿಯು ಏನೆಂದು ಕರೆಯಲ್ಪಟ್ಟಿದೆ? (ಸು)

15) ಸಿಂಧೂ ಸರಸ್ವತಿ ನಾಗರಿಕತೆಯ ಕುರುಹುಗಳು ಹೆಚ್ಚಾಗಿ ಯಾವ ನೆಲೆಯಲ್ಲಿ ಕಂಡುಬಂದಿವೆ? (ಸು)

III. ಕೆಳಗಿನ ಪ್ರಶ್ನೆಗಳಿಗೆ ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿ.

16) ಭಾರತದ ಪ್ರಾಚೀನ ನಾಗರಿಕತೆಯನ್ನು ಏನೆಂದು ಕರೆಯಲಾಗಿದೆ? (ಸು)

17) ವೇದಗಳನ್ನು ಹೆಸರಿಸಿ. (ಸು)

18) ನಾಗರಿಕತೆಗಳ ಉಗಮ ಹೇಗಾಯಿತು? (ಕ)

19) ಹರಪ್ಪದ ನಗರ ಯೋಜನೆಯನ್ನು ವಿವರಿಸಿ. (ಸಾ)

IV. ಕೆಳಗಿನ ಪ್ರಶ್ನೆಗಳಿಗೆ ಐದು- ಆರು ವಾಕ್ಯಗಳಲ್ಲಿ ಉತ್ತರಿಸಿ

20) ಮಹೆಂಜೊದಾರೋವಿನ ಸ್ನಾನದ ಕೊಳದ ವಿಶೇಷತೆಯನ್ನು ವಿವರಿಸಿ. (ಸಾ)

21) ಸಿಂಧೂ ನಾಗರಿಕತೆಯಲ್ಲಿ ಕಂಡುಬಂದಿರುವ ದಿನಬಳಕೆ ವಸ್ತುಗಳ ತಯಾರಿಕೆಯ ವೈಶಿಷ್ಟ್ಯವನ್ನು ತಿಳಿಸಿ. (ಕ)

V. ಕೆಳಗಿನ ಪ್ರಶ್ನೆಗಳಿಗೆ ಏಳು- ಎಂಟು ವಾಕ್ಯಗಳಲ್ಲಿ ಉತ್ತರಿಸಿ.

22) ಸಿಂಧು ಸರಸ್ವತಿ ನಾಗರಿಕತೆ ನಗರ ಯೋಜನೆಯ ವೈಶಿಷ್ಟ್ಯಗಳನ್ನು ಪಟ್ಟಿ ಮಾಡಿರಿ. (ಸಾ)

23) ವೇದಗಳ ಕಾಲದ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಯನ್ನು ವಿವರಿಸಿರಿ. (ಸಾ)

## ಅಧ್ಯಾಯ 4:

# ಜಗತ್ತಿನ ಕೆಲವು ಪ್ರಮುಖ ನಾಗರಿಕತೆಗಳು

ಕಲಿಕಾಫಲ:

- ಈಜಿಪ್ಟ್, ಮೆಸಪಟೋಮಿಯಾ,ಚೀನಾ ನಾಗರಿಕತೆಗಳನ್ನು ಪ್ರಾಚೀನ ಭಾರತದ ನಾಗರಿಕತೆಯೊಂದಿಗೆ ವಿಶ್ಲೇಷಿಸುವರು
- ಪ್ರಪಂಚದ ವಿವಿಧ ನಾಗರಿಕತೆಗಳನ್ನು ಹೋಲಿಕೆಯೊಂದಿಗೆ ವಿಶ್ಲೇಷಿಸುತ್ತಾರೆ.

I. ಬಹು ಆಯ್ಕೆ ಪ್ರಶ್ನೆಗಳು

1) ನೈಲ್ ನದಿ ದಡದಲ್ಲಿ ಉಗಮವಾದ ನಾಗರಿಕತೆ ಯಾವುದೆಂದರೆ (ಸು)

A) ಈಜಿಪ್ಟ್ ನಾಗರಿಕತೆ B) ಮಾಯಾ ನಾಗರಿಕತೆ C) ಸಿಂಧು ನಾಗರಿಕತೆ D) ಇಂಕಾ ನಾಗರಿಕತೆ.

2) ಸಾ.ಶ.ಪು. 4ನೇ ಶತಮಾನದಲ್ಲಿ ಪರ್ಷಿಯಾವನ್ನು ವಶಪಡಿಸಿಕೊಂಡ ದೊರೆ. (ಸು)

A) ಕ್ಯಾಂಬೆಸಿಸ್ B) ಅಲೆಗ್ಸಾಂಡರ್ C) ಅಗಸ್ಟಸ್ D) ಕ್ಲಿಯೋಪಾತ್ರ.

3) ಮೆಸಪಟೋಮಿಯದ ಮೊಟ್ಟಮೊದಲ ಬರವಣಿಗೆಯನ್ನು ಅಭಿವೃದ್ಧಿಪಡಿಸಿದವರು (ಸು)

A) ಬ್ಯಾಬಿಲೋನಿಯನ್ನರು B) ಅಸಿರಿಯನ್ನರು C) ಸುಮೇರಿಯನ್ನರು D) ಚಾಲ್ಡಿಯನ್ನರು

4) ಬ್ಯಾಬಿಲೋನಿಯನ್ ತೂಗು ಉದ್ಯಾನವನವನ್ನು ನಿರ್ಮಿಸಿದ ಅರಸ. (ಸು)

A) ಅಮೈಟಿಸ್ B) ನೆಬುಕಡ್ನಿಜರ್ C) ಸಮ್ಮುರಾವತ್ D) ಹಮ್ಮುರಬಿ

5) 'ಹವಾಂಗೋ 'ನದಿ ಈ ದೇಶದಲ್ಲಿ ಹರಿಯುತ್ತದೆ (ಸು)

A) ಚೀನ, B) ಅಮೆರಿಕ, C) ಭಾರತ, D) ರಷ್ಯಾ

6) ಚೀನಾದ ಮಹಾಗೋಡೆಯ ಉದ್ದ (ಸಾ)

A) 100 ಕಿಲೋಮೀಟರ್ B) 5000 ಕಿಲೋಮೀಟರ್,

C) 10000 ಕಿಲೋಮೀಟರ್, D) 2000 ಕಿಲೋಮೀಟರ್

7) ಇಂಕನ್ನರ ಆರಾಧ್ಯ ದೈವ. (ಸು)

A) ಭೂಮಿ, B) ಚಂದ್ರ, C) ಸೂರ್ಯ, D) ಸಮುದ್ರ

8) ಹಿರೋಗ್ಲೈಫಿಕ್ಸ್ ಇವರಿಗೆ ಸೇರಿದ ಬರವಣಿಗೆಯಾಗಿದೆ (ಸು)

A) ಮಾಯನ್ನರು, B) ಈಜಿಪ್ಟ್ ನಾಗರೀಕತೆ, C) ಬ್ಯಾಬಿಲೋನಿಯನ್ನರು, D) ಸಿಂಧೂ ನಾಗರಿಕತೆ

II. ಒಂದು ಪದ-ವಾಕ್ಯದಲ್ಲಿ ಉತ್ತರಿಸಿ.

9) ರೋಮನ್ನರ ಭಾಷೆಯನ್ನು ಹೆಸರಿಸಿ. (ಸು)

10) ಮೆಸಪಟೋಮಿಯನನ್ನು ಎರಡು ನದಿಗಳ ನಾಡು ಎಂದು ಕರೆದವರು ಯಾರು? (ಸು)

11) ಈಜಿಪ್ಟಿನ ರಾಜರನ್ನು ಏನೆಂದು ಕರೆಯಲಾಗುತ್ತಿತ್ತು? (ಸು)

12) ‘ಮಮ್ಮಿ'ಎಂದರೇನು? (ಸು)

13) 'ಪಿರಮಿಡ್'ಎಂದರೇನು? (ಸು)

14) ಅಲೆಗ್ಸಾಂಡ್ರಿಯ ನಗರ ನಿರ್ಮಿಸಿದ ಅರಸನನ್ನು ಹೆಸರಿಸಿ. (ಸು)

15) ಮೆಸಪಟೋಮಿಯದ ನಾಗರಿಕತೆಯ ಕೇಂದ್ರ ಸ್ಥಳ ಯಾವುದು? (ಸು)

16) ಸುಮೇರಿಯನ್ನರ ಆರಾಧನಾ ಸ್ಥಳಗಳನ್ನು ಏನೆಂದು ಕರೆಯುವರು? (ಸು)

17) ಬ್ಯಾಬಿಲೋನಿಯನ್ನರ ಪ್ರಸಿದ್ಧ ದೊರೆ ಯಾರು? (ಸು)

18) ಚೀನಾದ ನಾಗರಿಕತೆಯ ಪ್ರಥಮ ರಾಜ ಮನೆತನ ಯಾವುದು? (ಸಾ)

III. ಕೆಳಗಿನ ಪ್ರಶ್ನೆಗಳಿಗೆ ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿ.

19) ಹವಾಂಗೋ ನದಿಯನ್ನು ‘ಚೀನಾದ ದುಗುಡ'ಎಂದು ಕರೆಯುತ್ತಾರೆ. ಏಕೆ? (ಸಾ)

20) ‘ಹಮ್ಮುರಬಿಯ’ ಕಾನೂನಿನ ವೈಶಿಷ್ಟ್ಯತೆಗಳೇನು? (ಸಾ)

IV. ಕೆಳಗಿನ ಪ್ರಶ್ನೆಗಳಿಗೆ ಐದು -ಆರು ವಾಕ್ಯಗಳಲ್ಲಿ ಉತ್ತರಿಸಿ.

21) ‘ಚೀನಾದ ಮಹಾಗೋಡೆಯ ಐತಿಹಾಸಿಕ ಮಹತ್ವ ತಿಳಿಸಿ. (ಸಾ)

22) ಶಾಂಗ್ ದೊರೆಗಳು ಬಹು ಸಮಯ ಯುದ್ಧದಲ್ಲಿ ಕಳೆದಿದ್ದರು. ಪುಷ್ಟೀಕರಿಸಿರಿ. (ಕ)

23) "ಇಂಕಾ" ಜನರ ಚಿನ್ನದ ಆಭರಣ ತಯಾರಿಸುವ ಪ್ರತಿಭೆ ಕುರಿತು ಮಾಹಿತಿ ಸಂಗ್ರಹಿಸಿ ಬರೆಯಿರಿ. (ಕ)

24) 'ಸೂರ್ಯ' ಇಂಕನ್ನರ ಆರಾಧ್ಯ ದೈವ ಎಂದು ಪರಿಗಣಿಸಲ್ಪಡಲು ಕಾರಣಗಳನ್ನು ತಿಳಿಸಿ. (ಕ)

## ಅಧ್ಯಾಯ 4 & 5:

## ಸನಾತನ ಧರ್ಮ, ಜೈನ ಮತ್ತು ಬೌದ್ಧ ಮತಗಳು.

**ಕಲಿಕಾಫಲ:**

- ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಹಾಗೂ ವಿವಿಧತೆಯಲ್ಲಿ ಏಕತೆಯ ಬೆಳವಣಿಗೆಯನ್ನು ಪ್ರಶಂಸಿಸುವರು
- ಸನಾತನ ಧರ್ಮದ ವ್ಯಾಪ್ತಿ ಮತ್ತು ಅರ್ಥವನ್ನು ತಿಳಿಯುವರು
- ಜೈನ ಹಾಗೂ ಬೌದ್ಧಧರ್ಮದ ಹಿನ್ನಲೆಯನ್ನು ತಿಳಿಯುವರು
- ಜೈನ ಹಾಗೂ ಬೌದ್ಧಧರ್ಮದ ತತ್ವಗಳನ್ನು ಹೋಲಿಸುವರು

- ಬೌದ್ಧ ಮತ್ತು ಜೈನ ಮತದ ಬೋಧನೆಗಳು ಮತ್ತು ಜೀವನ ಶೈಲಿಯನ್ನು ಹೋಲಿಸುವರು

**I. ಬಹು ಅಂಶೀಯ ಆಯ್ಕೆ ಪ್ರಶ್ನೆಗಳು :**

**1 .ಗೌತಮ ಬುದ್ಧನ ತತ್ವಗಳು ಜನಪ್ರಿಯವಾಗಲು ಕಾರಣವಾಗಿರುವ ಪ್ರಮುಖ ಅಂಶ** (ಸಾ)

A) ಚತುರ್ ಆರ್ಯಸತ್ಯ B) ಪ್ರಾಕೃತಭಾಷೆ

C) ಸರಳವಾದ ಉಡುಗೆ D) ಅಷ್ಟಾಂಗಿಕಮಾರ್ಗಗಳು

**2.ಸನಾತನ ಧರ್ಮದ ಆಧಾರಗಳು ಎಂದು ಪರಿಗಣಿಸಲ್ಪಟ್ಟಿರುವುದು ಯಾವುದೆಂದರೆ** (ಸು)

A) ಐತಿಹ್ಯಗಳು B) ಪುರಾಣಗಳು C) ವೇದಗಳು D) ದರ್ಶನಗಳು

**3.ಹಿಂದೂ ಧರ್ಮವನ್ನು ಸನಾತನ ಧರ್ಮವೆಂದು ಕರೆಯಲಾಗಿದೆ ಕಾರಣ** (ಸಾ)

A) ವೈದಿಕ ಆಚರಣೆಗಳನ್ನು ಹೊಂದಿದೆ B) ಪುರಾಣ-ದರ್ಶನಗಳ ನೆಲೆಯನ್ನು ಹೊಂದಿದೆ

C) ಐತಿಹಾಸಿಕ ಹಿನ್ನಲೆಯನ್ನು ಹೊಂದಿದೆ D) ಪ್ರಾಚೀನ ಕಾಲದಿಂದ ಆಚರಣೆಯಲ್ಲಿದೆ.

**II. ಒಂದು ಪದ- ವಾಕ್ಯದಲ್ಲಿ ಉತ್ತರಿಸಿ.**

4. ಪ್ರವಾಸಕ್ಕೆಂದು ಶ್ರವಣ ಬೆಳಗೊಳಕ್ಕೆ ಹೋದಾಗ ನೀವು ನೋಡಿದ ಬಿಳಿ ಉಡುಪು ಧರಿಸಿದ ಜೈನಮುನಿಗಳನ್ನು ಜೈನಧರ್ಮದ ಯಾವ ಪಂಗಡದವರೆಂದು ಪರಿಗಣಿಸುವಿರಿ?. (ಕ)

5. ಸ್ಮೃತಿ ಎಂದರೇನು? (ಸು)

III. ಕೆಳಗಿನ ಪ್ರಶ್ನೆಗಳಿಗೆ ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿ.

6.ಪೂರ್ವ ವೇದ ಮತ್ತು ನಂತರ ದವೇದಗಳ ಕಾಲದಲ್ಲಿ ರಚನೆಯಾದ ವೇದಗಳನ್ನು ಹೆಸರಿಸಿ. (ಸು)

7.ಪ್ರಸ್ತುತ ಬೌದ್ದ ಧರ್ಮವು ಅಸ್ತಿತ್ವದಲ್ಲಿರುವ ದೇಶಗಳನ್ನು ಈ ಆವರಣದಲ್ಲಿ ನೀಡಲಾಗಿರುವ ಪಟ್ಟಿಯಿಂದ ಆಯ್ಕೆ ಮಾಡಿ ಬರೆಯಿರಿ. (ಸಾ)

**(ಬಾಂಗ್ಲಾದೇಶ, ಶ್ರೀಲಂಕ, ಬರ್ಮಾ, ಇಂಡೋನೇಷ್ಯಾ, ರಷ್ಯಾ, ಚೀನ, ಅಮೇರಿಕಾ, ನೇಪಾಳ, ಭೂತನ್,ಜಾವ ,ಟಿಬೇಟ್, ಆಸ್ಟ್ರೇಲಿಯಾ, ಜಪಾನ್. ಕಾಂಬೋಡಿಯಾ, ಮಲೇಷಿಯಾ)**

IV. ಕೆಳಗಿನ ಪ್ರಶ್ನೆಗಳಿಗೆ ಐದು- ಆರು ವಾಕ್ಯಗಳಲ್ಲಿ ಉತ್ತರಿಸಿ.

8.ಗೌತಮ ಬುದ್ಧನು ಬೋಧಿಸಿದ ಅಷ್ಟಾಂಗ ಮಾರ್ಗಗಳಿಂದ ನೀವು ಸುಖಕರ ಜೀವನ ನಡೆಸಲು ಸಾಧ್ಯ. ಸಮರ್ಥಿಸಿ.(ಕ)

9.ವೇದಕಾಲದ ಸಮಾಜ ವ್ಯವಸ್ಥೆ ಹಾಗೂ ಇಂದಿನ ಸಮಾಜ ವ್ಯವಸ್ಥೆಗೂ ಇರುವ ವ್ಯತ್ಯಾಸವನ್ನು ವಿಶ್ಲೇಷಿಸಿ. (ಕ)

10.ಸನಾತನ ಧರ್ಮದ ವಿಶೇಷತೆಗಳನ್ನು ಪಟ್ಟಿ ಮಾಡಿ. (ಕ)

11.ಬುದ್ಧ ಮತ್ತು ಮಹಾವೀರನ ಬೋಧನೆಗಳಿಂದ ನಿಮ್ಮ ಜೀವನದಲ್ಲಿ ಯಾವ ಮೌಲ್ಯಗಳನ್ನು ಅಳವಡಿಸಿ ಕೊಳ್ಳಬಹುದು? ವಿವರಿಸಿ. (ಸಾ)

V. **ಕೆಳಗಿನ ಪ್ರಶ್ನೆಗಳಿಗೆ ಏಳು- ಎಂಟು ವಾಕ್ಯಗಳಲ್ಲಿ ಉತ್ತರಿಸಿ**

12.ಬೌದ್ಧ ಮತ್ತು ಜೈನ ಧರ್ಮದ ಬೋಧನೆಗಳಲ್ಲಿ ಇಂದಿಗೂ ಪ್ರಸ್ತುತ ವಾಗಿರುವ ಮೌಲ್ಯಗಳನ್ನು ಪಟ್ಟಿ ಮಾಡಿ. (ಸಾ)

13.ಸನಾತನ ಧರ್ಮಕ್ಕೆ ಸಂಬಂಧಿಸಿದಂತೆ ವೇದಗಳಲ್ಲಿರುವ ಶಾಂತಿ ಮಂತ್ರವನ್ನು ಶಿಕ್ಷಕರ ಸಹಾಯದಿಂದ ಅರ್ಥೈಸಿಕೊಂಡು ಟಿಪ್ಪಣಿ ಬರೆಯಿರಿ. (ಸಾ)

## 7. ರಾಜ್ಯ ಶಾಸ್ತ್ರದ ಅರ್ಥ & ಪ್ರಾಮುಖ್ಯತೆ

**ಕಲಿಕಾಫಲ:-**

- ರಾಜ್ಯಶಾಸ್ತ್ರದ ಕಲ್ಪನೆಯನ್ನು ತಿಳಿಯುವರು
- ರಾಜ್ಯಶಾಸ್ತ್ರದ ಪ್ರಾಮುಖ್ಯತೆಯನ್ನು ಅರಿಯುವರು
- ರಾಜಕೀಯ ಚಿಂತಕರು ಹಾಗೂ ಅವರ ಕೊಡುಗೆಗಳನ್ನು ತಿಳಿಯುವರು

I. **ಬಹು ಆಯ್ಕೆ ಪ್ರಶ್ನೆಗಳು.**

1) ರಾಜ್ಯ ಶಾಸ್ತ್ರದ ಪಿತಾಮಹ (ಸು)

A)ಹೆರೋಡೋಟಸ್ B) ಅರಿಸ್ಟಾಟಲ್ C) ಪ್ಲೇಟೋ D) ಸಾಕ್ರಟೀಸ್

2) ರಿಪಬ್ಲಿಕ್ ಕೃತಿಯ ಕರ್ತೃ (ಸು)

A) ಸಾಕ್ರೆಟೀಸ್ B) ಅರಿಸ್ಟಾಟಲ್ C) ಪ್ಲೇಟೋ D) ಹೆರೋಡೊಟಸ್

3) ಕೌಟಿಲ್ಯ ರಚಿಸಿದ ಕೃತಿ (ಸು)

A) ಅರ್ಥಶಾಸ್ತ್ರ B) ರಾಜ್ಯಶಾಸ್ತ್ರ C) ಸಮಾಜಶಾಸ್ತ್ರ D) ಗಣಿತ ಶಾಸ್ತ್ರ

**II. ಒಂದು ಪದ-ವಾಕ್ಯ ದಲ್ಲಿ ಉತ್ತರಿಸಿ.**

4) ಪಾಲಿಟಿಕ್ಸ್ ಎಂಬ ಪದದ ಮೂಲವನ್ನು ತಿಳಿಸಿ.. (ಸು)

5) ರಾಜ್ಯ ಶಾಸ್ತ್ರಕ್ಕೆ ಸ್ವತಂತ್ರ ಅಧ್ಯಯನದ ಸ್ಥಾನಮಾನ ಕೊಟ್ಟವರು ಯಾರು? (ಸು)

6) ರಾಜ್ಯಶಾಸ್ತ್ರ ಎಂದರೇನು? (ಸು)

7) ಅರಿಸ್ಟಾಟಲ್ ರವರನ್ನು ರಾಜ್ಯ ಶಾಸ್ತ್ರದ ಪಿತಾಮಹ ಎಂದು ಕರೆಯುತ್ತಾರೆ. ಏಕೆ? (ಸಾ)

**III. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ**

**8)**ರಾಜ್ಯ ಶಾಸ್ತ್ರದ ಎರಡು ಪ್ರಾಮುಖ್ಯತೆಗಳನ್ನು ತಿಳಿಸಿ. (ಸು)

9) 'ಪಾಲಿಟಿಕ್ಸ್' ಗ್ರಂಥದಲ್ಲಿ ಯಾವ ವಿಷಯಗಳ ಬಗ್ಗೆ ಚರ್ಚಿಸಲಾಗಿದೆ? (ಸಾ)

IV. **ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ**

10) ರಾಜ್ಯ ಶಾಸ್ತ್ರದ ಅಧ್ಯಯನ ವಿಷಯಗಳನ್ನು ಹೆಸರಿಸಿ (ಸು)

11) ರಾಜ್ಯ ಶಾಸ್ತ್ರಕ್ಕೆ ಗ್ರೀಕರ ಕೊಡುಗೆಗಳನ್ನು ವಿವರಿಸಿ. (ಸಾ)

**V. ನಾಲ್ಕು ಅಂಕದ ಪ್ರಶ್ನೆಗಳು**

12) ಪ್ರತಿಯೊಬ್ಬರಿಗೂ ರಾಜ್ಯ ಶಾಸ್ತ್ರದ ಜ್ಞಾನ ಅತ್ಯವಶ್ಯಕ, ಸಮರ್ಥಿಸಿ. (ಕ)

## 8.ಪೌರ ಮತ್ತು ಪೌರತ್ವ.

**ಕಲಿಕಾಫಲ:**

- ಪೌರ ಮತ್ತು ಪೌರತ್ವದ ಅರ್ಥ, ವ್ಯತ್ಯಾಸವನ್ನು ತಿಳಿಯುವರು
- ರಾಷ್ಟ್ರವು ಪೌರರಿಗೆ ನೀಡಿರುವ ಸೌಲಭ್ಯಗಳನ್ನು ಅರಿಯುವರು
- ಪೌರ ಮತ್ತು ವಿದೇಶಿಯರ ನಡುವಿನ ವ್ಯತ್ಯಾಸ ಗುರುತಿಸುವರು
- ಪೌರತ್ವ ಪಡೆಯುವ ಹಾಗೂ ಕಳೆದುಕೊಳ್ಳುವ ವಿಧಾನಗಳನ್ನು ವಿಶ್ಲೇಷಿಸುವರು

## I. ಬಹು ಆಯ್ಕೆ ಪ್ರಶ್ನೆಗಳು

1. ಪೌರತ್ವ ಕಾಯಿದೆಯು ಜಾರಿಗೆ ಬಂದ ವರ್ಷ (ಸು)

A) 1950 B)1956 C) 1955 D)1947

2. ತಾತ್ಕಾಲಿಕವಾಗಿ ಬೇರೊಂದು ದೇಶದಲ್ಲಿ ನೆಲೆಸಿದವರು (ಸು)

A)ವಿದೇಶಿಯರು B)ಸ್ವದೇಶಿಯರು C) ಶಾಶ್ವತ ಪೌರರು D) ಅಪರಾಧಿಗಳು

3. ಮೂಲಭೂತ ಕರ್ತವ್ಯಗಳಿಗೆ ಸಂಬಂಧಿಸಿದ ಸಂವಿಧಾನದ ಪರಿ ಚ್ಛೇದ (ಸು)

A)76 ಬಿ B) 53 ಬಿ C)51ಎ D) 73

4. ಕಾನೂನುಬಾಹಿರವಾಗಿ ಭಾರತದ ಪೌರತ್ವವನ್ನು ಪಡೆದವರು ಈ ವಿಧಾನದ ಮೂಲಕ ಪೌರತ್ವ ಕಳೆದುಕೊಳ್ಳುತ್ತಾರೆ. (ಸು)

A)ಪರಿತ್ಯಾಗ B) ಪದಚ್ಯುತಿ C)ನೋಂದಣಿ D)ಅಂತ್ಯಗೊಳಿಸುವಿಕೆ

5. ದ್ವಿ ಪೌರತ್ವ ಜಾರಿಯಲ್ಲಿರುವ ರಾಷ್ಟ್ರಕ್ಕೆ ಉತ್ತಮ ಉದಾಹರಣೆ(ಸಾ)

A) ಭಾರತ B)ಅಮೆರಿಕ C) ಪಾಕಿಸ್ತಾನ D)ಕೆನಡಾ

6. ಜ್ಯೋತಿ 1982 ರಲ್ಲಿ ಕರ್ನಾಟಕದಲ್ಲಿ ಜನಿಸಿರುತ್ತಾಳೆ.ಅವಳ ತಂದೆ ಭಾರತೀಯ. ತಾಯಿ ಅಮೆರಿಕಾದವರು. ಜ್ಯೋತಿ ಈ ವಿಧಾನದ ಮೂಲಕ ಭಾರತೀಯ ಪೌರತ್ವ ಪಡೆಯಬಹುದಾಗಿದೆ. (ಕ)

A) ರಕ್ತ ಸಂಬಂಧ B)ಜನ್ಮದತ್ತ C)ನೋಂದಣಿ D) ಸಹಜ

## II. ಒಂದು ಪದ-ವಾಕ್ಯದಲ್ಲಿ ಉತ್ತರಿಸಿ.

7) ಭಾರತ ತನ್ನ ಪೌರರಿಗೆ ಯಾವ ವಿಧದ ಪೌರತ್ವ ನೀಡಿದೆ ? (ಸು)

8) ಭಾರತದ ಪೌರತ್ವ ಪಡೆಯುವ ಯಾವುದಾದರೊಂದು ವಿಧಾನ ತಿಳಿಸಿ ? (ಸು)

9) ಭಾರತದ ಪೌರತ್ವ ಕಳೆದುಕೊಳ್ಳುವ ಯಾವುದಾದರೊಂದು ವಿಧಾನ ತಿಳಿಸಿ ? (ಸು)

10) ಆಸ್ತಿ ಸಂಪಾದನೆಯ ಮೂಲಕ ಪೌರತ್ವ ನೀಡುವ ನೀತಿ ಹೊಂದಿರುವ ದೇಶ ಯಾವುದು? (ಸು)

**III. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ**

12) ಪೌರ ಎಂದು ಕರೆಯಲು ಇರಬೇಕಾದ ಅಂಶಗಳಾವುವು? (ಸು)

13)ಪೌರರಾದವರು ಪಡೆಯುವ ಎರಡು ಸೌಲಭ್ಯಗಳನ್ನು ತಿಳಿಸಿ? (ಸು)

14)ಪೌರತ್ವ ಪಡೆಯುವ ಎರಡು ವಿಧಾನಗಳನ್ನು ಹೆಸರಿಸಿ. (ಸು)

15) ಪೌರತ್ವದ ಎರಡು ವಿಧಗಳು ಯಾವುವು? (ಸು)

16) ಪೌರತ್ವ ಕಳೆದುಕೊಳ್ಳುವ ವಿಧಾನಗಳಾವುವು? (ಸು)

**IV. ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ**

17)ಭಾರತದ ಪೌರತ್ವ ಪಡೆಯುವ ವಿಧಾನಗಳು ಯಾವುವು? (ಸು)

18)ಸಹಜೀಕೃತ ಪೌರತ್ವವನ್ನು ವಿವರಿಸಿ. (ಸಾ)

**V. ಕೆಳಗಿನ ಪ್ರಶ್ನೆಗಳಿಗೆ ಏಳು-ಎಂಟು ವಾಕ್ಯಗಳಲ್ಲಿ ಉತ್ತರಿಸಿ**

19) ಪೌರನ ಕರ್ತವ್ಯಗಳನ್ನು ವಿವರಿಸಿ (ಸಾ)

20)ಪೌರ ಮತ್ತು ವಿದೇಶಿ ನಡುವಿನ ವ್ಯತ್ಯಾಸಗಳನ್ನು ತಿಳಿಸಿ (ಸಾ)

## 9.ಸಮಾಜಶಾಸ್ತ್ರ -- ಮಾನವ ಮತ್ತು ಸಮಾಜ

ಕಲಿಕಾ ಫಲ :

- ಸಮಾಜಶಾಸ್ತ್ರದ ಅಧ್ಯಯನದ ಮಹತ್ವವನ್ನು ಪಟ್ಟಿಮಾಡುವರು
- ಮಾನವ ಮತ್ತು ಸಮಾಜದ ನಡುವಿನ ಸಂಬಂಧ ಹಾಗೂ ಸಾಮಾಜಿಕರಣವನ್ನು ವಿಶ್ಲೇಷಿಸುತ್ತಾರೆ
- ಆರಂಭಿಕ ಸಮಾಜಶಾಸ್ತ್ರಜ್ಞರನ್ನು ಹೆಸರಿಸುವರು

**I. ಬಹು ಆಯ್ಕೆ ಪ್ರಶ್ನೆಗಳು**

1. ಸಮಾಜಶಾಸ್ತ್ರದ ಪಿತಾಮಹ (ಸು)

   A)ಹರ್ಬರ್ಟ್ ಪೆನ್ಸರ್ B) ಆಗಸ್ಟ್ ಕಾಮ್ಟೆ C)ಮ್ಯಾಕ್ಸ್ ವೆಬರ್ D)ಅರಿಸ್ಟಾಟಲ್

2. ಭಾರತದಲ್ಲಿ ಮೊದಲ ಬಾರಿಗೆ ಸಮಾಜಶಾಸ್ತ್ರ ಪರಿಚಯಿಸಲ್ಪಟ್ಟ ವಿಶ್ವವಿದ್ಯಾಲಯ ಯಾವುದೆಂದರೆ (ಸು)

   A) ಮುಂಬೈ ವಿಶ್ವವಿದ್ಯಾಲಯ. B)ಹಂಪಿ ವಿಶ್ವವಿದ್ಯಾಲಯ

   C)ಕರ್ನಾಟಕ ವಿಶ್ವವಿದ್ಯಾಲಯ D) ಮೈಸೂರು ವಿಶ್ವ ವಿದ್ಯಾಲಯ

3. ಔಪಚಾರಿಕ ಶಿಕ್ಷಣ ದೊರೆಯುವ ಸ್ಥಳ (ಸು)

A)ಶಾಲೆ B)ನೆರೆಹೊರೆ C)ಮನೆ D)ಕುಟುಂಬ

4. ಕಾರ್ಲ್ ಮಾರ್ಕ್ಸ್ ಈ ದೇಶದ ತತ್ವಜ್ಞಾನಿ (ಸು)

A)ಇಟಲಿ B)ಜಪಾನ್ C)ಭಾರತ D)ಜರ್ಮನಿ

## II. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ- ವಾಕ್ಯಗಳಲ್ಲಿ ಉತ್ತರಿಸಿ

5.ಸೋಶಿಯಾಲಜಿ ಪದದ ಉಗಮವನ್ನು ತಿಳಿಸಿ (ಸು)

6.ಸಮಾಜಶಾಸ್ತ್ರದ ಬಗ್ಗೆ ಆಗಸ್ಟ್ ಕಾಮ್ಟೆ ಯವರ ವ್ಯಾಖ್ಯಾನವನ್ನು ತಿಳಿಸಿ. (ಸು)

7. ಮಾನವ ಯಾವ ಬಗೆಯ ಜೀವಿ? (ಸು)

8. ಮಾನವ ಸಮಾಜವನ್ನು ಸಾಮಾಜಿಕ ಸಂಬಂಧಗಳ ಬಲೆ ಎಂದು ಕರೆಯಲು ಕಾರಣವೇನು? (ಸಾ)

9. ಮಾನವರು ತಮ್ಮ ಭಾವನೆಯನ್ನು ಹೇಗೆ ವ್ಯಕ್ತಪಡಿಸುತ್ತಾರೆ ? (ಕ)

10. ಮಾನವ ಸಮಾಜ ಬಿಟ್ಟು ಬದುಕಲಾರ ಎಂಬ ವಿಚಾರವನ್ನು ಅರಿಸ್ಟಾಟಲ್ ತನ್ನ ಯಾವ ಹೇಳಿಕೆಯಿಂದ ನಿರೂಪಿಸುತ್ತಾನೆ? (ಸು)

11. ಕಾರ್ಲ್ ಮಾರ್ಕ್ಸ್ ರವರ ವೈಜ್ಞಾನಿಕ ಸಮಾಜವಾದದಲ್ಲಿ ಕಂಡುಬರುವ ಬಹುಮುಖ್ಯ ಪ್ರತಿಪಾದನೆ ಯಾವುದು? (ಸು)

## III. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ

13) ಸಾಮಾಜಿಕರಣ ಎಂದರೇನು? (ಸು)

14) ಮಾನವನರಿಗೆ ಭಾಷೆ ಅನಿವಾರ್ಯ, ಏಕೆ? (ಸಾ)

15) ಪ್ರಾಣಿಗಳು ಮತ್ತು ಮಾನವರ ನಡುವಿನ ಎರಡು ವ್ಯತ್ಯಾಸಗಳನ್ನು ಪಟ್ಟಿ ಮಾಡಿ. (ಸಾ)

## IV. ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ

16.ಸಮಾಜಶಾಸ್ತ್ರದ ಅಧ್ಯಯನದ ಮಹತ್ವವನ್ನು ವಿವರಿಸಿ. (ಸಾ)

17.ಮಾನವರಿಗೆ ಸಾಮಾಜಿಕ ಪರಿಸರ ಅತ್ಯಗತ್ಯವಾಗಿದೆ ಎಂಬುದನ್ನು ವಿವರಿಸಿ. (ಸಾ)

18.ಭಾಷೆಯೇ ಅಸ್ತಿತ್ವದಲ್ಲಿರದ ಸಮಾಜ ಎದುರಿಸಬಹುದಾದ ಸಮಸ್ಯೆಗಳನ್ನು ಪಟ್ಟಿ ಮಾಡಿರಿ (ಸಾ)

19.ಜಿ ಎಸ್ ಘುರ್ಯೆ, ಎಂ ಎಸ್ ಶ್ರೀನಿವಾಸ್, ಎ ಆರ್ ದೇಸಾಯಿ, ಎಸ್ ಸಿ ದುಬೈ ,ಇರಾವತಿ ಕರ್ವೆ ಇವರ ಬಗ್ಗೆ ಕಿರು ಟಿಪ್ಪಣಿ ಬರೆಯಿರಿ. (ಸಾ)

## 10. ಮಾನವ ಮತ್ತು ಸಂಸ್ಕೃತಿ

**ಕಲಿಕಾಫಲ :**

- ಸಂಸ್ಕೃತಿಯ ಕಲ್ಪನೆಯನ್ನು ತಿಳಿಯುವರು
- ಸಾಂಸ್ಕೃತಿಕ ವೈವಿಧ್ಯತೆ ಹಾಗೂ ಪರಂಪರೆಯನ್ನು ಪ್ರಶಂಸಿಸುವರು

**I. ಬಹು ಆಯ್ಕೆ ಪ್ರಶ್ನೆಗಳು**

1. ಕಲ್ಚರ್ ಎಂಬ ಪದ ಈ ಭಾಷೆಯದ್ದು (ಸು)

A)ಲ್ಯಾಟಿನ್ B)ಗ್ರೀಕ್ C)ರೋಮನ್ D) ಹೀಬ್ರೂ

2. ವಿವಿಧ ಆಚಾರ –ವಿಚಾರ, ಉಡುಗೆ –ತೊಡುಗೆ, ಭಾಷೆ ಹೊಂದಿರುವ ಸಂಸ್ಕೃತಿ (ಸು)

A)ಲೋಕ ರೂಢಿ B)ಸಂಪ್ರದಾಯ C)ವೈವಿಧ್ಯಮಯ ಸಂಸ್ಕೃತಿ D) ಸಾಮಾಜಿಕರಣ

3. ನಾವು ದಿನನಿತ್ಯದ ಜೀವನದಲ್ಲಿ ಮತ್ತೆ ಮತ್ತೆ ತೊಡಗಿಸಿಕೊಳ್ಳುವ ಚಟುವಟಿಕೆಗಳು (ಸು)

A) ಮೂಡನಂಬಿಕೆಗಳು B)ಲೋಕ ರೂಢಿಗಳು C)ಸಂಪ್ರದಾಯ D) ಸಂಸ್ಕೃತಿ

4. ನಾವು ಮಾತನಾಡುವ ಭಾಷೆ ನಮ್ಮ ಹಿರಿಯರ ಬಳುವಳಿಯಾಗಿದೆ ಇದನ್ನು ಸಮರ್ಥಿಸುವ ಸಂಸ್ಕೃತಿಯ ಒಂದು ಲಕ್ಷಣ (ಕ)

A) ಸಂಸ್ಕೃತಿ ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿದೆ .

B) ಸಂಸ್ಕೃತಿಯು ನಿರಂತರವಾಗಿ ಬದಲಾಗುತ್ತದೆ .

C) ಸಂಸ್ಕೃತಿ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ವರ್ಗಾವಣೆಯಾಗುತ್ತದೆ.

D) ಸಂಸ್ಕೃತಿ ಭಿನ್ನವಾಗಿಲ್ಲ.

**II.** ಕೆಳಗಿನ ಪ್ರಶ್ನೆಗಳಿಗೆ ಒಂದು ಪದ-ವಾಕ್ಯದಲ್ಲಿ ಉತ್ತರಿಸಿ.

5.ಸಂಸ್ಕೃತಿ ಎಂದರೇನು? (ಸು)

6.ಸಾಂಸ್ಕೃತಿಕ ವೈವಿಧ್ಯತೆ ಎಂದರೇನು? (ಸು)

7.ಯಾವುದಾದರೂ ಎರಡು ಲೋಕ ರೂಢಿಗಳನ್ನು ಹೆಸರಿಸಿ. (ಸು)

8.ನಿಮ್ಮ ಸುತ್ತಲಿನ ಸಾಂಸ್ಕೃತಿಕ ವೈವಿಧ್ಯತೆಯ ಒಂದು ಉದಾಹರಣೆ ನೀಡಿ. (ಸಾ)

**III.** ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.

9.ನೀನು ಸಮಾಜದ ಸದಸ್ಯನಾಗಿದ್ದುಕೊಂಡು ಕಲಿತುಕೊಳ್ಳುವ ಮೌಲ್ಯಗಳನ್ನು ಪಟ್ಟಿ ಮಾಡಿರಿ. (ಸಾ)

10.ಸಂಸ್ಕೃತಿಯು ಪೀಳಿಗೆಯಿಂದ ಪೀಳಿಗೆಗೆ ವರ್ಗಾವಣೆಯಾಗುತ್ತದೆ. ಸಮರ್ಥಿಸಿ. (ಕ)

11.ನಮ್ಮ ಸಂಸ್ಕೃತಿಯಂತೆ ಇತರರ ಸಂಸ್ಕೃತಿ ಆಚಾರ ವಿಚಾರವನ್ನು ಹೇಗೆ ಗೌರವಿಸುವಿರಿ? (ಕ)

12.ಭಾರತದಲ್ಲಿನ ವಿವಿಧತೆಯಲ್ಲಿ ಏಕತೆ ಪರಿಕಲ್ಪನೆಯನ್ನು ಸಮರ್ಥಿಸಿ. (ಕ)

## 11. ಭೂಮಿ ನಮ್ಮ ಜೀವಂತ ಗ್ರಹ.

ಕಲಿಕಾ ಫಲ :

- ಅಕ್ಷಾಂಶ ಮತ್ತು ರೇಖಾಂಶಗಳ ಮಹತ್ವವನ್ನು ವಿವರಿಸುತ್ತಾರೆ
- ಭೂಮಿಯ ಆಕಾರ ಹಾಗೂ ಜಲ ಹಂಚಿಕೆಯನ್ನು ತಿಳಿಯುವರು
- ಪ್ರಪಂಚದ ಭೌಗೋಳಿಕ ನಕ್ಷೆಯಲ್ಲಿ ಖಂಡಗಳು ಹಾಗೂ ಸಾಗರಗಳನ್ನು ಗುರುತಿಸುವರು

**I. ಬಹು ಆಯ್ಕೆ ಪ್ರಶ್ನೆಗಳು**

1. ಸೌರಮಂಡಲದಲ್ಲಿ ಭೂಮಿಯ ಸ್ಥಾನ (ಸು)

A)ಒಂದನೇ ದೊಡ್ಡ ಗ್ರಹ B)ಐದನೇ ದೊಡ್ಡ ಗ್ರಹ C)ನಾಲ್ಕನೇ ದೊಡ್ಡ ಗ್ರಹ D)ಆರನೇ ದೊಡ್ಡ ಗ್ರಹ

2. ಅತಿ ದೊಡ್ಡ ಸಾಗರ (ಸು)

A)ಪೆಸಿಫಿಕ್ ಸಾಗರ B)ಅಟ್ಲಾಂಟಿಕ್ ಸಾಗರ C) ಹಿಂದೂ ಮಹಾಸಾಗರ D)ಆರ್ಕ್‌ಟಿಕ್ ಸಾಗರ

3. ದಕ್ಷಿಣಾರ್ಧಗೋಳದಲ್ಲಿನ ಜಲರಾಶಿಯ ಪ್ರಮಾಣ (ಸು)

A)ಶೇಕಡಾ 81 ಭಾಗ B) ಶೇಕಡ 19 ಭಾಗ C) ಶೇಕಡ 50 ಭಾಗ D)ಶೇಕಡಾ 71 ಭಾಗ

4. ಒಂದು ಅಕ್ಷಾಂಶದಿಂದ ಮತ್ತೊಂದು ಅಕ್ಷಾಂಶಕ್ಕೆ ಇರುವ ಭೂಮಿಯ ಮೇಲಿನ ದೂರ (ಸು)

A)111 km B)110.4 km C) 100 km D)112 km

5. ಗ್ರೀನ್ ವಿಚ್ ಮೇಲೆ ಹಾದು ಹೋಗಿರುವ ಪ್ರಧಾನ ರೇಖಾಂಶ (ಸು)

A)0 ಡಿಗ್ರಿ ರೇಖಾಂಶ B) 180 ಡಿಗ್ರಿ ರೇಖಾಂಶ C)110 ಡಿಗ್ರಿ ರೇಖಾಂಶ D) 82 ಡಿಗ್ರಿ ರೇಖಾಂಶ

6. ಭಾರತದ ಪ್ರಮಾಣಿತ ವೇಳೆ ಹಾಗೂ ಗ್ರೀನ್ ವಿಚ್ ವೇಳೆಯ ನಡುವಿನ ಸಮಯದ ವ್ಯತ್ಯಾಸ. (ಸಾ)

A) 5 ಗಂಟೆ B) 6 ಗಂಟೆ C) 5 ಗಂಟೆ 30 ನಿಮಿಷಗಳು D)6 ಗಂಟೆ 30 ನಿಮಿಷಗಳು

**II. ಒಂದು ಅಂಕದ ಪ್ರಶ್ನೆಗಳು**

1. ಭೂಮಿಯ ವ್ಯಾಸವು ಸೂರ್ಯನಿಗಿಂತ ಎಷ್ಟು ಪಟ್ಟು ದೊಡ್ಡದಿದೆ ? (ಸು)
2. ಭೂಮಿಯ ಮೇಲೆ ಶೇಕಡ ಎಷ್ಟು ಭಾಗ ನೀರು ಆವರಿಸಿದೆ ? (ಸು)
3. ಭೂ ಭಾಗದಲ್ಲಿ ಎಷ್ಟು ಖಂಡಗಳು ಕಂಡುಬರುತ್ತವೆ? (ಸು)
4. ಭೂಮಿಯ ಮೇಲಿನ ಅತಿ ಚಿಕ್ಕ ಸಾಗರವನ್ನು ಹೆಸರಿಸಿ. (ಸು)
5. ದಕ್ಷಿಣಾರ್ಧಗೋಳವನ್ನು ಜಲ ಪ್ರಧಾನಗೋಳ ಎಂದು ಏಕೆ ಕರೆಯಲಾಗಿದೆ? (ಸಾ)
6. ಭೂಮಿಯು ತನ್ನ ಅಕ್ಷದ ಸುತ್ತ ಒಂದು ಸುತ್ತು ಪೂರ್ಣಗೊಳಿಸಲು ಎಷ್ಟು ಸಮಯ

ತೆಗೆದುಕೊಳ್ಳುತ್ತದೆ ? (ಸು)

7. ರಷ್ಯಾ ಎಷ್ಟು ವೇಳಾ ವಲಯಗಳನ್ನು ಹೊಂದಿದೆ ? (ಸು)

8. ಭಾರತದ ಪ್ರಮಾಣಿತ ವೇಳೆ ಯಾವ ರೇಖಾಂಶವನ್ನಾಧರಿಸಿದೆ ? (ಸು)

**III. ಎರಡು ಅಂಕದ ಪ್ರಶ್ನೆಗಳು**

1. ಭೂಮಿಯ ಇತರ ಹೆಸರುಗಳಾವುವು ? (ಸು)
2. ಅಕ್ಷಾಂಶ ಹಾಗೂ ರೇಖಾಂಶಗಳೆಂದರೇನು? (ಸು)
3. ಪ್ರಮಾಣ ವೇಳೆ ಎಂದರೇನು? (ಸು)
4. ಭೂಮಿಯು ಒಂದು ವಿಶಿಷ್ಟ ಗ್ರಹ ಏಕೆ ? (ಸಾ)

**IV. ಮೂರು ಅಂಕಗಳ ಪ್ರಶ್ನೆಗಳು.**

1. ಭೂಭಾಗದ ಮೇಲಿನ ಏಳು ಖಂಡಗಳನ್ನು ಹೆಸರಿಸಿ (ಸು)
2. ಒಂದು ಸ್ಥಳದ ಸನ್ನಿವೇಶ ದಿಕ್ಕು ಮತ್ತು ಅಂತರವನ್ನು ಹೇಗೆ ನಿರ್ಧರಿಸಲಾಗುತ್ತದೆ? (ಕ)
3. ಅಂತರ ರಾಷ್ಟ್ರೀಯ ದಿನಾಂಕ ರೇಖೆ ಎಂದರೇನು ? (ಸು)
4. ಪ್ರಮುಖವಾದ ಏಳು ಅಕ್ಷಾಂಶಗಳನ್ನು ಹೆಸರಿಸಿ. (ಸು)

**V. ನಾಲ್ಕು ಅಂಕದ ಪ್ರಶ್ನೆಗಳು**

1. ಅಕ್ಷಾಂಶ & ರೇಖಾಂಶಗಳು ಒಂದು ಪ್ರದೇಶದ ವಾಯುಗುಣ ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಸಮರ್ಥಿಸಿ? (ಕ)
2. ಅಂತರ ರಾಷ್ಟ್ರೀಯ ದಿನಾಂಕ ರೇಖೆಯ ಮಹತ್ವ ಕುರಿತು ಟಿಪ್ಪಣಿ ಬರೆಯಿರಿ. (ಸಾ)

## 12. ಶಿಲಾಗೋಳ

ಕಲಿಕಾ ಫಲ:

- ಶಿಲಾಗೋಳದ ರಚನೆ ಸಂಯೋಜನೆ ತಿಳಿಯುವರು
- ಭೂ ಅಂತರಿಕ ಹಾಗೂ ಬಾಹ್ಯ ಶಕ್ತಿಗಳ ಕಾರಣ ಹಾಗೂ ಪರಿಣಾಮಗಳನ್ನು ವಿಶ್ಲೇಷಿಸುವರು

**ಬಹು ಆಯ್ಕೆ ಪ್ರಶ್ನೆಗಳು**

1. ಮಾರುತಗಳ ನಗ್ನೀಕರಣದಿಂದ ನಿರ್ಮಿತವಾಗುವ ಭೂ ಸ್ವರೂಪಗಳು (ಕ)

   A) ನಾಯಿಕೊಡೆ, ಶಿಲಾಪೀಠ, ಮರಳುದಿಣ್ಣೆ ,ಲೋಯಿಸ್ ಮೈದಾನ.

   B) ವೀ ಆಕಾರದ ಕಣಿವೆಗಳು, ಮೆಕ್ಕಲು ಬೀಸಣಿಕೆ, ಮುಖಜಭೂಮಿ, ಪ್ರವಾಹ ಮೈದಾನಗಳು.

   C) ಯು ಆಕಾರದ ಕಣಿವೆ, ಗಿರಿ ಶೃಂಗಗಳು, ಶಿಲಾ ಸೋಪಾನಗಳು, ತೂಗು ಕಣಿವೆ.

   D) ಲೇಪೀಸ್, ನುಂಗುಬಿಲ, ಅಂತರ್ ಗುಹೆಗಳು, ಅವರೋಹಿ ಗುಹೆಗಳು.

2. ಕೆ.ಜಿ.ಎಫ್ ಚಿನ್ನದ ಗಣಿ ಕಂಡುಬರುವ ರಾಜ್ಯ (ಸು)

   A)ಕರ್ನಾಟಕ B) ಆಂಧ್ರಪ್ರದೇಶ C)ಗೋವಾ D)ಮಹಾರಾಷ್ಟ್ರ

3. ರಾಸಾಯನಿಕ ಕ್ರಿಯೆಯಿಂದ ಉಂಟಾದ ಕಣ ಶಿಲೆ (ಸು)

   A)ಗ್ರಾಫೈಟ್ B)ಗ್ರಾನೆಟ್ C)ಜಿಪ್ಸಂ D) ಸುಣ್ಣಕಲ್ಲು

4. ಇಟಲಿಯ ಪ್ರಸಿದ್ಧ ಜ್ವಾಲಾಮುಖಿ (ಸು)

   A)ಮೌಂಟ್ ಕ್ರಕಟೋವ B)ಮೌಂಟ್ ಪಿಲಿ C)ಮೌಂಟ್ ವೆಸುವಿಯಸ್ D)ಮೌಂಟ್ ಫ್ಯೂಜಿಯಮ

5. ಕರ್ನಾಟಕದಲ್ಲಿರುವ ಭೂಕಂಪ ಮಾಪನ ಕೇಂದ್ರ (ಸು)

   A)ಹೈದರಾಬಾದ್ B)ಡೆಹ್ರಾಡೂನ್ C)ಪುಣೆ D)ಗೌರಿಬಿದನೂರು

6. ಬೇಲಮ್ ಮತ್ತು ಬೆಹರಾ ಸುಣ್ಣ ಕಲ್ಲಿನ ಗುಹೆಗಳು ಕಂಡುಬರುವ ರಾಜ್ಯವೆಂದರೆ (ಸು)

   A) ಕರ್ನಾಟಕ B) ಆಂಧ್ರಪ್ರದೇಶ C)ಕೇರಳ D) ರಾಜಸ್ಥಾನ

I. **ಒಂದು ಅಂಕದ ಪ್ರಶ್ನೆಗಳು.**

1. ಶಿಲಾಗೋಳ ಎಂದರೇನು? (ಸು)
2. ಭೂಮಿಯು ಎಷ್ಟು ವರ್ಷ ಹಳೆಯದಾಗಿದೆ? (ಸು)
3. ಭೂಕವಚದ ರಚನೆಯನ್ನು ವಿವರಿಸಿ. (ಸು)
4. ಭೂಕವಚ ಮತ್ತು ಮ್ಯಾಂಟಲ್ ಸೇರುವ ವಲಯವನ್ನು ಹೆಸರಿಸಿ. (ಸು)
5. ಅಂತಸ್ಸರಣ ಶಿಲೆಗೆ ಒಂದು ಉದಾಹರಣೆ ಕೊಡಿ (ಸಾ)
6. ಮ್ಯಾಗ್ಮಾ ಎಂದರೇನು? (ಸು)
7. ನದಿ ಹರಿಯುವ ಮಾರ್ಗವನ್ನು ಏನೆಂದು ಕರೆಯುವರು,? (ಸು)
8. ಜಲ ಮಾಲಿನ್ಯ ಎಂದರೇನು? (ಸು)
9. ಜ್ವಾಲಾಮುಖಿ ಕುಂಡದ ಅರ್ಥ ತಿಳಿಸಿ (ಸು)
10. ಭೂಕಂಪನದ ತೀವ್ರತೆ ಅಳೆಯುವ ಮಾಪನವನ್ನು ಹೆಸರಿಸಿ. (ಸು)

## II. ಎರಡು ಅಂಕದ ಪ್ರಶ್ನೆಗಳು

1. ಭೂಮಿಯ ಅಂತರಾಳದ ವಿವಿಧ ಪದರಗಳನ್ನು ಹೆಸರಿಸಿ. (ಸು)
2. ಮ್ಯಾಂಟಲ್ ಎಂದರೇನು? ಅದರ ಎರಡು ಭಾಗಗಳು ಯಾವುವು ? (ಸು)
3. ಶಿಲೆಗಳ ಪ್ರಮುಖ ವಿಧಗಳು ಯಾವುವು? (ಸು)
4. ಭೂಕವಚದ ಶಕ್ತಿಗಳನ್ನು ವಿವರಿಸಿ. (ಕ)
5. ಜಾಗೃತ ಜ್ವಾಲಾಮುಖಿ ಎಂದರೇನು ? ಒಂದು ಉದಾಹರಣೆ ಕೊಡಿ. (ಸಾ)
6. ಶಿಥಿಲೀಕರಣ ಎಂದರೇನು? (ಸು)

## III. ಮೂರು ಅಂಕದ ಪ್ರಶ್ನೆಗಳು

1. ರಾಸಾಯನಿಕ ಶಿಥಿಲೀಕರಣ ಎಂದರೇನು? ನಾಲ್ಕು ವಿಧಗಳನ್ನು ತಿಳಿಸಿ ? (ಸು)
2. ಹಿಮ ನದಿ ಎಂದರೇನು? ಮುಖ್ಯ ವಿಧಗಳಾವುವು? (ಸು)
3. ಚಿಲುಮೆಗಳ ವಿಧಗಳನ್ನು ಹೆಸರಿಸಿ (ಸು)
4. ಜೈವಿಕ ಶಿಥಿಲೀಕರಣವನ್ನು ವಿವರಿಸಿ. (ಸಾ)

## IV. ನಾಲ್ಕು ಅಂಕದ ಪ್ರಶ್ನೆಗಳು

1. ನೈಸರ್ಗಿಕ ವಿಕೋಪಗಳು ಸಂಭವಿಸುವಲ್ಲಿ ಮಾನವನ ಕೃತ್ಯಗಳು ಪ್ರಮುಖ ಪಾತ್ರ ವಹಿಸಿವೆ. ಸಮರ್ಥಿಸಿ (ಕ)
2. ಭೂಕಂಪನದ ಅನಾಹುತ ತಡೆಗಟ್ಟುವಲ್ಲಿ ಮುನ್ನೆಚ್ಚರಿಕ ಕ್ರಮಗಳ ಬಗ್ಗೆ ಸಲಹೆ ನೀಡಿರಿ. (ಕ)

# 13.ವಾಯುಗೋಳ

ಕಲಿಕಾ ಫಲ:

- ವಾಯುಗೋಳದ ರಚನೆ ಸಂಯೋಜನೆ ತಿಳಿದು ವಿವರಿಸುತ್ತಾರೆ.
- ವಾಯುಗೋಳದ ಘಟಕಾಂಶಗಳನ್ನು ಹೆಸರಿಸುವರು
- ವಾಯುಗುಣ ಹಾಗೂ ಹವಾಮಾನವನ್ನು ವ್ಯತ್ಯಾಸಿಸುವರು

## I. ಬಹು ಆಯ್ಕೆ ಪ್ರಶ್ನೆಗಳು

1. ಭಾರತದಲ್ಲಿ ಅತಿ ಹೆಚ್ಚು ಉಷ್ಣಾಂಶ ದಾಖಲಿಸಿದ ಪ್ರದೇಶ (ಸು)

   A)ಕರ್ನಾಟಕದ ಅಂಬಿಕ ನಗರ B)ರಾಜಸ್ಥಾನದ ಗಂಗಾ ನಗರ

C)ಕಾಶ್ಮೀರದ ಕಾರ್ಗಿಲ್ D) ನಾಯಕನಹಟ್ಟಿ

2. ವಾಯುವಿನ ಒತ್ತಡ ಅಳೆಯುವ ಮಾಪಕ (ಸು)

A)ವಾಯುಭಾರ ಮಾಪಕ B) ರಿಕ್ಟರ್ ಮಾಪಕ C)ಎಂಪಿಯರ್ D)ಅಮ್ಮೀಟರ್

3. $40^0$ ಡಿಗ್ರಿ ಅಕ್ಷಾಂಶದಲ್ಲಿ ಬೀಸುವ ಗಾಳಿಯನ್ನು ಹೀಗೆ ಕರೆಯುವರು, (ಸು)

A) 40ರ ಅಬ್ಬರದ ಗಾಳಿ B) 50ರ ಅಬ್ಬರದ ಗಾಳಿ C) 60ರ ಅಬ್ಬರದ ಗಾಳಿ D)70ರ ಅಬ್ಬರದ ಗಾಳಿ

4. ಆವರ್ತ ಮಾರುತಗಳನ್ನು ಭಾರತದಲ್ಲಿ ಹೀಗೆ ಕರೆಯುಲಾಗುವುದು. (ಸು)

A)ಸೈಕ್ಲೋನ್, B)ಹರಿಕೇನ್, C) ಲೈಲಾ. D)ಟೈಫೂನ್

5. ವಾಯು ಬೀಸುವ ದಿಕ್ಕನ್ನು ತಿಳಿಯುವ ಉಪಕರಣ (ಸು)

A)ಪವನ ವೇಗ ಮಾಪಕ B)ಪವನ ದಿಕ್ಸೂಚಿ C)ವಾಯುಭಾರ ಮಾಪಕ D)ರಿಕ್ಟರ್ ಮಾಪಕ

6. ಭಾರತದ ಸ್ಥಳೀಯ ಮಾರುತ (ಸು)

A)ಚೀನುಕ್ B)ಲೂ C)ಸಿರಾಕ್ಕೋ D)ಮಿಸ್ಟ್ರಲ್

7. ನಾಯಕನಹಟ್ಟಿಯು ಈ ಜಿಲ್ಲೆಯಲ್ಲಿ ಕಂಡುಬರುವುದು. (ಸು)

A)ಶಿವಮೊಗ್ಗ B)ಚಿತ್ರದುರ್ಗ C) ದಾವಣಗೆರೆ D)ಉಡುಪಿ

8. ಭೂಮಿಯ ಮೇಲಿನ ಅತ್ಯಂತ ತೇವಯುತ ಪ್ರದೇಶ (ಸು)

A)ಮೇಘಾಲಯದ ಮೌಸಿನ್ ರಾಮ್ B)ಕರ್ನಾಟಕದ ಆಗುಂಬೆ

C)ರಾಜಸ್ಥಾನದ ರೈಲಿ D)ಚಿತ್ರದುರ್ಗದ ನಾಯಕನಹಟ್ಟಿ

## II. ಒಂದು ಅಂಕದ ಪ್ರಶ್ನೆಗಳು

1. ವಾಯುಗೋಳದ ದಪ್ಪ ಎಷ್ಟಿದೆ ? (ಸು)
2. ವಾಯುಮಂಡಲದಲ್ಲಿ ನೈಟ್ರೋಜನ್ ಅನಿಲದ ಪ್ರಮಾಣವೆಷ್ಟು ? (ಸು)
3. ವಾಯುವಿನ ಒತ್ತಡ ಕಡಿಮೆ ಇರುವ ವಾಯುಮಂಡಲದ ಪದರವನ್ನು ಹೆಸರಿಸಿ (ಸು)
4. ಸೂರ್ಯಜನ್ಯ ಶಾಖ ಎಂದರೇನು? (ಸು)
5. ಸೂರ್ಯನ ನೇರವಾದ ಕಿರಣಗಳನ್ನು ಪಡೆಯುವ ವಲಯ ಯಾವುದು? (ಸು)
6. ಸಮಾಭಾರ ರೇಖೆಗಳೆಂದರೇನು? (ಸು)
7. ವಾಯುವಿನ ವೇಗ ಅಳೆಯುವ ಮಾಪಕ ಯಾವುದು? (ಸು)
8. ಭಾರತದಲ್ಲಿ ಬೀಸುವ ಮಾರುತಗಳು ಯಾವ ಮಾರುತಗಳಿಗೆ ಉದಾಹರಣೆಯಾಗಿದೆ? (ಸಾ)
9. ಆವರ್ತ ಮಾರುತಗಳನ್ನು ವ್ಯಾಖ್ಯಾನಿಸಿ. (ಸು)
10. ಆರ್ದ್ರತೆ ಎಂದರೇನು? (ಸು)

## III. ಎರಡು ಅಂಕದ ಪ್ರಶ್ನೆಗಳು

1. ವಾಯುಮಂಡಲದ ರಚನೆಯನ್ನು ವಿವರಿಸಿ(ಸಾ)
2. ಹವಾಮಾನದ ಪರಿಸ್ಥಿತಿ ಯಾವ ಅಂಶಗಳಿಂದ ಪ್ರಭಾವಿತವಾಗಿದೆ? (ಸು)
3. ಉಷ್ಣಾಂಶದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ತಿಳಿಸಿ. (ಸು)
4. ವಾಯುಮಂಡಲದ ಒತ್ತಡ ಎಂದರೇನು? (ಸು)
5. ಮಾರುತಗಳ ವಿಧಗಳನ್ನು ಪಟ್ಟಿ ಮಾಡಿರಿ (ಸಾ)

## IV. ಮೂರು ಅಂಕದ ಪ್ರಶ್ನೆಗಳು

1. ಉಷ್ಣಾಂಶ ವಿಪರ್ಯಯಕ್ಕೆ ಕಾರಣಗಳೇನು ? (ಸಾ)
2. ಮೋಡಗಳೆಂದರೇನು? ವಿಧಗಳನ್ನು ಹೆಸರಿಸಿ(ಸು)
3. ಹವಾಮಾನ ಮತ್ತು ವಾಯುಗುಣ ಕುರಿತು ಟಿಪ್ಪಣಿ ಬರೆಯಿರಿ. (ಸಾ)

## V. ನಾಲ್ಕು ಅಂಕದ ಪ್ರಶ್ನೆಗಳು

1.ವಾಯುಮಂಡಲದ ರಚನೆಯನ್ನು ವಿವರಿಸಿ. (ಸಾ)

2. ವಾಯುಮಂಡಲದ ಒತ್ತಡ ಎಂದರೇನು ? ಪ್ರಪಂಚದ ಮುಖ್ಯ ಒತ್ತಡದ ಪಟ್ಟಿಗಳನ್ನು ಹೆಸರಿಸಿ(ಸು)

# 14.ಅರ್ಥಶಾಸ್ತ್ರದ ಅರ್ಥ ಮತ್ತು ಮಹತ್ವ

ಕಲಿಕಾಫಲ :

- **ಉತ್ಪಾದಾಂಗಗಳನ್ನು ವ್ಯಾಖ್ಯಾನಿಸುವರು**
- **ಅರ್ಥಶಾಸ್ತ್ರ ಅರ್ಥ ಮತ್ತು ಮಹತ್ವ** ತಿಳಿದು ವಿವರಿಸುತ್ತಾರೆ.
- **ಆರ್ಥಿಕ ಚಟುವಟಿಕೆಗಳನ್ನು ವರ್ಗೀಕರಿಸುವರು**

## I. ಬಹು ಆಯ್ಕೆಯ ಪ್ರಶ್ನೆಗಳು

1. ಸರಕು ಸೇವೆಯಲ್ಲಿರುವ ಮಾನವರ ಬಯಕೆಯನ್ನು ತೃಪ್ತಿಪಡಿಸುವ ಗುಣ (ಸು)

   A) ಆಸೆ  B) ತುಷ್ಟಿಗುಣ  C) ತೃಪ್ತಿ  D) ಪ್ರತಿಫಲ

2. ಹಣದ ಪ್ರತಿಫಲಕ್ಕೆ ಮಾಡುವ ದೈಹಿಕ ಮತ್ತು ಬೌದ್ಧಿಕ ಕೆಲಸ (ಸು)

   A) ಸಾಮಾಜಿಕ ಚಟುವಟಿಕೆ  B) ಸಾಂಸ್ಕೃತಿಕ ಚಟುವಟಿಕೆ

C) ಆರ್ಥಿಕ ಚಟುವಟಿಕೆ D) ರಾಜಕೀಯ ಚಟುವಟಿಕೆ

3. ಕೌಟಿಲ್ಯನು ರಚಿಸಿದ ಗ್ರಂಥ. (ಸು)

A) ರಿಪಬ್ಲಿಕ್ B)ಅರ್ಥಶಾಸ್ತ್ರ C) ಪಾಲಿಟಿಕ್ಸ್ D) ಗಾಥಸಪ್ತಸತಿ

4. ಎಕನಾಮಿಕ್ಸ್ ಎಂಬ ಪದ ಈ ದೇಶ ಭಾಷಾ ಪದವಾಗಿದೆ. (ಸು)

A)ಗ್ರೀಕ್ B)ರೋಮನ್ C) ಅಮೆರಿಕ D)ಭಾರತ

## II. ಒಂದು ಅಂಕದ ಪ್ರಶ್ನೆಗಳು

1. ಅರ್ಥಶಾಸ್ತ್ರದ ಪಿತಾಮಹ ಎಂದು ಯಾರನ್ನು ಪರಿಗಣಿಸಲಾಗಿದೆ?. (ಸು)
2. ಸಂಪತ್ತನ್ನು ಕುರಿತು ಅಧ್ಯಯನ ಮಾಡುವ ಶಾಸ್ತ್ರ ಯಾವುದು? (ಸು)
3. ಎಲ್ಲಾ ಆರ್ಥಿಕ ಚಟುವಟಿಕೆಗಳ ಮೂಲ ಯಾವುದು? (ಸು)
4. ಅರ್ಥಶಾಸ್ತ್ರ ಪದದ ಉತ್ಪತ್ತಿಯನ್ನು ವಿವರಿಸಿ. (ಸಾ)
5. ಸರ್ಕಾರ ತಾನು ಒದಗಿಸುವ ಸರಕು ಮತ್ತು ಸೇವೆಗಳಿಗೆ ಏನನ್ನು ವಿಧಿಸುತ್ತದೆ? (ಸು)
6. ಉತ್ಪಾದಕ ಚಟುವಟಿಕೆಗಳೆಂದರೇನು? (ಸು)

## III. ಸಂಕ್ಷಿಪ್ತವಾಗಿ ಉತ್ತರಿಸಿರಿ

1. ಆರ್ಥಿಕ ಚಟುವಟಿಕೆಗಳನ್ನು ವಿವರಿಸಿರಿ. (ಸಾ)
2. ಅರ್ಥಶಾಸ್ತ್ರದ ಅಧ್ಯಯನ ಅವಶ್ಯಕ ಕಾರಣಗಳನ್ನು ಪಟ್ಟಿ ಮಾಡಿರಿ (ಸಾ)

# 15. ವ್ಯವಹಾರ ಅರ್ಥ ಮತ್ತು ಪ್ರಾಮುಖ್ಯತೆ

**ಕಲಿಕಾಫಲ :**

- ವ್ಯವಹಾರದ ಉದ್ದೇಶಗಳನ್ನು ಪಟ್ಟಿಮಾಡುವರು
- ವ್ಯವಹಾರದ ವಿಧಗಳನ್ನು ವರ್ಗೀಕರಿಸುವರು
- ವ್ಯವಹಾರದ ಅರ್ಥ ಮತ್ತು ಪ್ರಾಮುಖ್ಯತೆಯನ್ನು ಕುರಿತು ವಿಶ್ಲೇಷಿಸುತ್ತಾರೆ.
- ವ್ಯವಹಾರದ ತತ್ವಗಳನ್ನು ತೀಳಿಯುವರು

## I. ಬಹು ಆಯ್ಕೆ ಪ್ರಶ್ನೆಗಳು

1) ಗೃಹ ಕೈಗಾರಿಕೆಗಳು ಸಾಮಾನ್ಯವಾಗಿ ಕಂಡು ಬರುವ ಸ್ಥಳ, (ಸು)

A) ಪಟ್ಟಣ B) ನಗರ C) ಗ್ರಾಮ D) ಮಹಾನಗರ.

2) ಒಂದು ದೇಶವು ತನ್ನ ಬಳಕೆಗಾಗಿ ಬೇರೆ ದೇಶಗಳಿಂದ ಸರಕುಗಳನ್ನು ಕೊಳ್ಳುವುದು (ಸು)

A) ಆಮದು B) ರಫ್ತು C) ಪುನರ್ ರಫ್ತು D) ವ್ಯಾಪಾರ

3) ದೊಡ್ಡ ಪ್ರಮಾಣದಲ್ಲಿ ಸರಕುಗಳನ್ನು ಕೊಂಡು ಸಣ್ಣ ಪ್ರಮಾಣದಲ್ಲಿ ಗ್ರಾಹಕರಿಗೆ ಮಾರುವವರು (ಸು)

A) ಸಗಟು ವ್ಯಾಪಾರಿ, B) ಚಿಲ್ಲರೆ ವ್ಯಾಪಾರಿ, C) ಉತ್ಪಾದಕ ವ್ಯಾಪಾರಿ, D) ವಿತರಕ ವ್ಯಾಪಾರಿ.

4) ಪ್ರಾಥಮಿಕ ವಲಯ : ಕೃಷಿ : : ತೃತೀಯ ವಲಯ : ...................(ಸು)

A) ಹೈನುಗಾರಿಕೆ B) ಕೈಗಾರಿಕೆ C) ಗಣಿಗಾರಿಕೆ, D) ಸಾರಿಗೆ ಸಂಪರ್ಕ.

5) ಒಂದು ದೇಶವು ಬೇರೆ ದೇಶಗಳಿಗೆ ವಸ್ತುಗಳನ್ನು ಮಾರುವುದು (ಸು)

A) ಪುನರ್ ರಫ್ತು B) ರಫ್ತು C) ಆಮದು D) ಚಿಲ್ಲರೆ ವ್ಯಾಪಾರ

## II. ಒಂದು ಅಂಕದ ಪ್ರಶ್ನೆಗಳು.

1) ತಲೆಹೊರೆ ವ್ಯಾಪಾರಿಗಳೆಂದರೆ ಯಾರು? (ಸು)

2) ಆಂತರಿಕ ವ್ಯಾಪಾರ ಎಂದರೇನು? (ಸು)

3) ಪುನರ್ ರಫ್ತು ವ್ಯಾಪಾರ ನಡೆಸುವ ದೇಶಕ್ಕೆ ಒಂದು ಉದಾಹರಣೆ ನೀಡಿರಿ (ಸು)

4) ಗುಡಿ ಕೈಗಾರಿಕೆಗೆ ಒಂದು ಉದಾಹರಣೆ ನೀಡಿರಿ. (ಸಾ)

5) ವ್ಯಾಪಾರದ ಮುಖ್ಯ ಉದ್ದೇಶವೇನು? (ಸು)

6) ವ್ಯವಸಾಯ ಉತ್ಪನ್ನಗಳ ಗುಣಮಟ್ಟ ತಿಳಿಯಲು ಮುದ್ರಿಸುವ ಚಿನ್ಹ ಯಾವುದು? (ಸು)

7) ISI ನ ವಿಸ್ತೃತ ರೂಪ ಬರೆಯಿರಿ. (ಸು)

8) ಜಾಹಿರಾತಿನ ಅನುಕೂಲ ತಿಳಿಸಿ. (ಸು)

## III. ಸಂಕ್ಷಿಪ್ತವಾಗಿ ಉತ್ತರಿಸಿರಿ:

1) ವ್ಯಾಪಾರ ಎಂದರೇನು? ಎರಡು ವಿಧ ತಿಳಿಸಿ. (ಸು)

2) ಚಿಲ್ಲರೆ ವ್ಯಾಪಾರಿಗಳು, ವಸ್ತುಗಳ ವಿತರಣೆಯ ಕೊನೆಯ ಕೊಂಡಿಯಾಗಿದ್ದಾರೆ. ಸಮರ್ಥಿಸಿರಿ. (ಕ)

3) ಸಗಟು ವ್ಯಾಪಾರದ ಅನುಕೂಲಗಳನ್ನು ಪಟ್ಟಿ ಮಾಡಿರಿ. (ಸಾ)

4) ವಿದೇಶಿ ವ್ಯಾಪಾರ ಎಂದರೇನು? ಮೂರು ಭಾಗಗಳನ್ನು ಹೆಸರಿಸಿ. (ಸು)

5) ಕೈಗಾರಿಕಾ ಉದ್ಯಮಗಳನ್ನು ಹೆಸರಿಸಿ. (ಸು)

6) ಗೃಹ ಕೈಗಾರಿಕೆಯಲ್ಲಿ ಉತ್ಪಾದಿಸುವ ವಸ್ತುಗಳನ್ನು ಪಟ್ಟಿಮಾಡಿ. (ಸಾ)

7) ಸಮಯದ ಅಡಚಣೆ ತಪ್ಪಿಸಲು ಕೈಗೊಳ್ಳುವ ಕ್ರಮಗಳನ್ನು ತಿಳಿಸಿರಿ. (ಕ)

# 16. ಮೌರ್ಯರು ಮತ್ತು ಕುಶಾಣರು

**ಕಲಿಕಾ ಫಲ :**

- ಸಾಮ್ರಾಟ ಅಶೋಕ ಹಾಗೂ ಮೌರ್ಯರ ಆಡಳಿತ ಹಾಗೂ ಕೊಡುಗೆಗಳನ್ನು ತಿಳಿಯುವರು
- ಕುಶಾನರ ವಾಸ್ತುಶಿಲ್ಪ ಕೊಡುಗೆಗಳನ್ನು ಪ್ರಶಂಶಿಸುವರು
- ಮೌರ್ಯರು ಹಾಗೂ ಕುಶಾನರ ಆಡಳಿತ ವ್ಯವಸ್ಥೆಯನ್ನು ಪ್ರಸ್ತುತ ಆಡಳಿತ ವ್ಯವಸ್ಥೆಯೊಂದಿಗೆ ಹೋಲಿಸುವರು

I. ಬಹು ಆಯ್ಕೆ ಪ್ರಶ್ನೆಗಳು

1. ಮೌರ್ಯ ಸಮಾಜದ ಸ್ಥಾಪಕರು (ಸು)

   A) ಅಶೋಕ B) ಬಿಂದುಸಾರ C) ಚಂದ್ರಗುಪ್ತ ಮೌರ್ಯ D) ಚಾಣಕ್ಯ

2. ಚಾಣಕ್ಯನ ಪ್ರಖ್ಯಾತ ಕೃತಿ (ಸು)

   A) ರಾಮಾಯಣ B) ಅಭಿಜ್ಞಾನ ಶಾಕುಂತಲ C) ಅರ್ಥಶಾಸ್ತ್ರ D) ಮಹಾಭಾರತ

3. ಅಶೋಕನು ಬೌದ್ಧ ಧರ್ಮವನ್ನು ಸ್ವೀಕರಿಸಲು ಪ್ರೇರಣೆಯಾದ ಯುದ್ಧ (ಸು)

   A) ಪೌರುಷ ಯುದ್ಧ B) ಕಳಿಂಗ ಯುದ್ಧ C) ಉಜ್ಜಯಿನಿ ಯುದ್ಧ D) ಪಾಟ್ನಾ ಯುದ್ಧ

4. ಅಶೋಕನ ಶಿಲಾ ಶಾಸನಗಳಲ್ಲಿ ಹೆಚ್ಚು ಬಳಸಿದ ಭಾಷೆ (ಸು)

   A) ಸಂಸ್ಕೃತ B) ತಮಿಳು C) ಪ್ರಾಕೃತ D) ಪರ್ಶಿಯನ್

5. ಕುಶಾಣ ಸಾಮ್ರಾಜ್ಯದ ಪ್ರಮುಖ ಚಕ್ರವರ್ತಿ (ಸು)

   A) ಕಾನಿಷ್ಕ B) ಹರ್ಷವರ್ಧನ C) ಅಶೋಕ D) ಚಂದ್ರಗುಪ್ತ

6. ಗಾಂಧಾರ ಶೈಲಿಯು ಯಾವುದಕ್ಕೆ ಸಂಬಂಧಪಟ್ಟಿದೆ (ಸು)

   A) ಗೀತಾ ಸಾಹಿತ್ಯ B) ನೃತ್ಯ C) ಬೌದ್ಧಶಿಲ್ಪ ಕಲೆ D) ಜೈನ ಶಾಸನಗಳು

7. ಕಾನಿಷ್ಕನ ಕಾಲದಲ್ಲಿ ಬೆಳವಣಿಗೆಯಾದ ಬೌದ್ಧ ಧರ್ಮದ ಶಾಖೆ (ಸು)

   A) ಹೀನ ಯಾನ B) ಮಹಾಯಾನ C) ಲಮಾಯಾನ D) ವಜ್ರಯಾನ

8. ಚಂದ್ರಗುಪ್ತ ಮೌರ್ಯನು ತನ್ನ ಜೀವಿತದ ಕೊನೆಗೆ ಅಂಗೀಕರಿಸಿದ ಧರ್ಮ (ಸು)

   A) ಬೌದ್ಧ ಧರ್ಮ B) ವೈಷ್ಣವ ಧರ್ಮ C) ಜೈನ ಧರ್ಮ D) ಶೈವ ಧರ್ಮ

II. **ಕೇಳಗಿನ ಪ್ರಶ್ನೇಗಳಿಗೆ** ಒಂದು ವಾಕ್ಯದಲ್ಲಿ ಉತ್ತರಿಸಿ

9. ಚಾಣಕ್ಯನ ಇತರ ಹೆಸರುಗಳಾವುವು? (ಸು)

10. ಅಶೋಕನ ಶಿಲಾ ಶಾಸನಗಳ ಭಾಷೆ ಯಾವುದು? (ಸು)

11. ಕುಶಾನರ ರಾಜಧಾನಿ ಯಾವುದು? (ಸು)

12. ಅಶೋಕನು ಧರ್ಮಪ್ರಚಾರಕ್ಕಾಗಿ ಸಿಂಹಳಕ್ಕೆ ಯಾರನ್ನು ಕಳುಹಿಸಿದನು? (ಸು)

13. ಗುಜರಾತಿನ ಜುನಾಗಢದ ಬಳಿ ಸುದರ್ಶನ ಸರೋವರ ಅಣೆಕಟ್ಟನ್ನು ಕಟ್ಟಿಸಿದವರು ಯಾರು? (ಸು)

III. **ಕೆಳಗಿನ ಪ್ರಶ್ನೆಗಳಿಗೆ** ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ

14. ಮೌರ್ಯರ ಇತಿಹಾಸವನ್ನು ತಿಳಿಸುವ ಆಕರ ಗ್ರಂಥಗಳನ್ನು ಪಟ್ಟಿ ಮಾಡಿ. (ಸಾ)

15. ಅಶೋಕನ ಕಾಲದ ಪ್ರಮುಖ ನಗರಗಳನ್ನು ಪಟ್ಟಿಮಾಡಿ (ಸಾ)

IV. **ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ**

16. ಅಶೋಕನನ್ನು ಒಬ್ಬ ಮಹಾಶಯನೆಂದು ಇತಿಹಾಸಕಾರರು ಬಣ್ಣಿಸಿದ್ದಾರೆ. ಈ ಹೇಳಿಕೆಯನ್ನು ವಿಶ್ಲೇಷಿಸಿ. (ಕ)

17. ಅಶೋಕನ ಆಡಳಿತದ ಬಗ್ಗೆ ವಿವರಿಸಿ. (ಸಾ)

18. ಮೌರ್ಯ ಸಾಮ್ರಾಜ್ಯದ ಕಲೆ ಮತ್ತು ವಾಸ್ತುಶಿಲ್ಪದ ಬಗ್ಗೆ ವಿವರಿಸಿ. (ಸಾ)

19. ಕಾನಿಷ್ಕನ ಆಡಳಿತದ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ. (ಸಾ)

V. ಐದು ಅಂಕದ ಪ್ರಶ್ನೆಗಳು

20. ಪ್ರಾಚೀನ ಭಾರತದ ನಕ್ಷೆ ಬರೆದು ಈ ಕೆಳಗಿನ ಸ್ಥಳಗಳನ್ನು ಗುರುತಿಸಿ. (ಸಾ)

A) ಗಾಂಧಾರ B) ಪುರುಷಪುರ C) ಉಜ್ಜಯಿನಿ D) ಇಂದ್ರಪ್ರಸ್ಥ

## 17. ಗುಪ್ತರು ಮತ್ತು ವರ್ಧನರು

**ಕಲಿಕಾ ಫಲ:**

- ಭಾರತದ ಭೂಪಟದಲ್ಲಿ ಗುಪ್ತ ಸಾಮ್ರಾಜ್ಯದ ಮೇರೆಗಳನ್ನು ಗುರುತಿಸುವ ಕೌಶಲ್ಯ ವೃದ್ಧಿಸಿಕೊಳ್ಳುವರು
- ಗುಪ್ತರು ಮತ್ತು ವರ್ಧನರ ಪ್ರಸಿದ್ಧ ದೊರೆಗಳನ್ನು ಹೆಸರಿಸುವರು
- ಗುಪ್ತ ಸಾಮ್ರಾಜ್ಯದ ಸಾಹಿತ್ಯ ಹಾಗೂ ವೈಜ್ಞಾನಿಕ ಕೊಡುಗೆಗಳನ್ನು ವಿಶ್ಲೇಷಿಸುವರು
- ವರ್ಧನರ ಶೈಕ್ಷಣಿಕ ಹಾಗೂ ಸಾಹಿತ್ಯ ಕೊಡುಗೆಗಳನ್ನು ಪ್ರಶಂಸಿಸುವರು

I. ಬಹು ಆಯ್ಕೆ ಪ್ರಶ್ನೆಗಳು

1. ಗುಪ್ತ ಸಾಮ್ರಾಜ್ಯದ ಈ ರಾಜನು ಅಶ್ವಮೇಧ ಯಾಗವನ್ನು ಮಾಡಿದನು (ಸು)

A) ಮೊದಲನೇ ಚಂದ್ರಗುಪ್ತ B) ಇಮ್ಮಡಿ ಚಂದ್ರಗುಪ್ತ C) ಸಮುದ್ರ ಗುಪ್ತ D) ಕುಮಾರ ಗುಪ್ತ

2. ನಳಂದ ವಿಶ್ವವಿದ್ಯಾಲಯವನ್ನು ಗುಪ್ತರ ಈ ದೊರೆ ಪ್ರಾರಂಭಿಸಿದನು (ಸು)

A) ಎರಡನೇ ಚಂದ್ರಗುಪ್ತ B) ಸಮುದ್ರಗುಪ್ತ C) ನರಸಿಂಹ ಗುಪ್ತ D) ಒಂದನೇ ಚಂದ್ರಗುಪ್ತ

3. ಗುಪ್ತರ ಈ ದೊರೆಯು ವಿಕ್ರಮಾದಿತ್ಯ ಎಂಬ ಬಿರುದನ್ನು ಪಡೆದಿದ್ದನು (ಸು)

A) ಶ್ರೀಗುಪ್ತ B) ಎರಡನೇ ಚಂದ್ರಗುಪ್ತ C) ಒಂದನೇ ಚಂದ್ರಗುಪ್ತ D) ಕುಮಾರ ಗುಪ್ತ

4. 'ಪಂಚ ಸಿದ್ಧಾಂತಿಕಾ' ಎಂಬ ಖಗೋಳ ಶಾಸ್ತ್ರ ಗ್ರಂಥದ ಕರ್ತೃ (ಸು)

A) ವರಹಾ ಮಿಹಿರ B) ಆರ್ಯಭಟ C) ವಾಗ್ಭಟ D) ಕಪಿಲ

5. ಅಣುವು ಪರಮಾಣುವಿನಿಂದ ಕೂಡಿದೆ ಎಂದು ಪ್ರತಿಪಾದಿಸಿದ ಪ್ರಾಚೀನ ಭಾರತೀಯ ವಿಜ್ಞಾನಿ (ಸು)

A) ಕಪಿಲ B) ಧನ್ವಂತರಿ C) ಸುಶ್ರುತ D) ಚರಕ

6. ದೆಹಲಿಯ ಮೆಹರೂಲಿಯಲ್ಲಿನ ಸ್ತಂಭ ಈ ಲೋಹದಿಂದ ಮಾಡಲ್ಪಟ್ಟಿದೆ (ಸು)

A) ಕಂಚು B) ಹಿತ್ತಾಳೆ C) ಕಬ್ಬಿಣ D) ತಾಮ್ರ

7. ಈ ವಿಜ್ಞಾನಿಯನ್ನು ಭಾರತದ ವೈದ್ಯಶಾಸ್ತ್ರದ ಪಿತಾಮಹ ಎಂದು ಕರೆಯುತ್ತಾರೆ (ಸು)

A) ಭಾಸ್ಕರ B) ಶುಶ್ರುತ C) ಧನ್ವಂತರಿ D) ಚರಕ

8. ರಾಜಶ್ರೀ ಇವರು ಈ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದರು (ಸು)

A) ನಳಂದ B) ವಾರಣಾಸಿ C) ಉಜ್ಜಯಿನಿ D) ಪ್ರಯಾಗ

II. **ಕೆಳಗಿನ ಪ್ರಶ್ನಗಳಿಗೆ** ಒಂದು ವಾಕ್ಯದಲ್ಲಿ ಉತ್ತರಿಸಿ

9. ಗುಪ್ತರ ಕಾಲದಲ್ಲಿ ಭಾರತಕ್ಕೆ ಭೇಟಿ ಕೊಟ್ಟ ಚೀನಾದ ಯಾತ್ರಿಕ ಯಾರು? (ಸು)

10. ಕಾಳಿದಾಸನು ಬರೆದ ಶ್ರೇಷ್ಠ ನಾಟಕ ಯಾವುದು? (ಸು)

11. ಹರ್ಷವರ್ಧನನ ಆಸ್ಥಾನದಲ್ಲಿದ್ದ ಇಬ್ಬರು ಪ್ರಸಿದ್ಧ ಕವಿಗಳನ್ನು ಹೆಸರಿಸಿ. (ಸು)

III. ಎರಡು - ಮೂರು ವಾಕ್ಯದಲ್ಲಿ ಉತ್ತರಿಸಿ

12. ಎರಡನೇ ಚಂದ್ರಗುಪ್ತನ ಕಾಲದಲ್ಲಿದ್ದ ಪ್ರಮುಖ ಕವಿಗಳನ್ನು ಹೆಸರಿಸಿ. (ಸು)

13. ವರ್ಧನರ ಆದಾಯದ ಮೂಲಗಳನ್ನು ತಿಳಿಸಿ (ಸು)

14. ಕಾಳಿದಾಸನು ಬರೆದ ಶ್ರೇಷ್ಠ ಕೃತಿಗಳನ್ನು ಹೆಸರಿಸಿ.. (ಸು)

IV. **ಕೆಳಗಿನ ಪ್ರಶ್ನೆಗಳಿಗೆ ಐದಾರು** ವಾಕ್ಯಗಳಲ್ಲಿ ಉತ್ತರಿಸಿ

15. ನಳಂದ ವಿಶ್ವವಿದ್ಯಾಲಯದ ಬಗ್ಗೆ ಟಿಪ್ಪಣಿ ಬರೆಯಿರಿ(ಸಾ)

16. ಗುಪ್ತರ ಸಾಮ್ರಾಜ್ಯದ ಪತನಕ್ಕೆ ಕಾರಣಗಳೇನು? (ಸಾ)

17. ಗುಪ್ತರ ಕಾಲವು ಸಾಹಿತ್ಯದ ಸುವರ್ಣ ಯುಗ. ಸಮರ್ಥಿಸಿ. (ಕ)

18. ವರ್ಧನರ ಕಾಲದ ಆಡಳಿತ ವ್ಯವಸ್ಥೆಯನ್ನು ವಿವರಿಸಿ. (ಸಾ)

## 18. ದಕ್ಷಿಣ ಭಾರತ

## ಶಾತವಾಹನರು, ಕದಂಬರು ಮತ್ತು ಗಂಗರು

**ಕಲಿಕಾ ಫಲ:**

- **ಶಾತವಾಹನ, ಕದಂಬರು, ಗಂಗರ ಆಡಳಿತ, ಮತ್ತು ಕಲೆ ವಾಸ್ತುಶಿಲ್ಪದ ಕೊಡುಗೆಗಳನ್ನು ವಿಶ್ಲೇಷಿಸುವರು**
- ಭೂಪಟದಲ್ಲಿ ಕದಂಬರು ಹಾಗೂ ಗಂಗರ ಸಾಮ್ರಾಜ್ಯದ ಎಲ್ಲೆಗಳನ್ನು ಗುರುತಿಸುವರು

I. ಬಹು ಆಯ್ಕೆ ಪ್ರಶ್ನೆಗಳು

1. ಶಾತವಾಹನರು ಉತ್ತರ ಭಾರತದ ಈ ರಾಜವಂಶದ ಸಾಮಂತ ರಾಜರಾಗಿದ್ದರು (ಸು)

A) ಮೌರ್ಯರು B) ಗುಪ್ತರು C) ಕುಶಾಣರು D) ನಂದರು

2. ಶಾತವಾಹನರ ಪ್ರಥಮ ಸ್ವತಂತ್ರ ದೊರೆ (ಸು)

A) ಸಿಮುಖ B) ಮಹಾಪದ್ಮ C) ಮಯೂರವರ್ಮ D) ನರಸಿಂಹವರ್ಮ

3. 'ಹಾಲ' ನು ಬರೆದ ಗಾಥ ಸಪ್ತಶತಿ ಗ್ರಂಥದ ಭಾಷೆ (ಸು)

A) ಸಂಸ್ಕೃತ B) ಒರಿಯ C) ಕನ್ನಡ D) ಪ್ರಾಕೃತ

4. ಶಾತವಾಹನರು ಅನುಸರಿಸುತ್ತಿದ್ದ ಧರ್ಮ (ಸು)

A) ಜೈನ B) ಬೌದ್ಧ C) ವೈದಿಕ D) ಸಿಖ್

5. ಮಯೂರವರ್ಮನು ಈ ಕೆರೆಯನ್ನು ಅಭಿವೃದ್ಧಿ ಪಡಿಸಿದನು (ಸು)

A) ಚಂದ್ರವಳ್ಳಿ ಕೆರೆ B) ಮಂಡ್ಯದ ಕೆರೆ C) ಕಡೂರು ಕೆರೆ D) ಲಕ್ಕವಳ್ಳಿ ಕೆರೆ

6. ಕದಂಬರ ಕಾಲದ ತಾಳಗುಂದ ಶಾಸನವು ಈ ಭಾಷೆಯಲ್ಲಿದೆ (ಸು)

A) ತಮಿಳು B) ತೆಲುಗು C) ಸಂಸ್ಕೃತ D) ಕನ್ನಡ

7. ಗಂಗರ ಪ್ರಸಿದ್ಧ ಅರಸನೆಂದರೆ (ಸು)

A) ದಡಿಗ B) ದುರ್ವಿನೀತ C) ರಾಚಮಲ್ಲ D) ಶ್ರೀ ಪುರುಷ

8. ಶ್ರವಣಬೆಳಗೊಳದ ಗೊಮ್ಮಟೇಶ್ವರ ಮೂರ್ತಿಯನ್ನು ಸ್ಥಾಪಿಸಿದವರು (ಸು)

A) ಬಾಣ ಭಟ್ಟ       B) ಚಾವುಂಡರಾಯ C) ಶಿವಕುಮಾರ       D) ಮಾಧವ

II. ಒಂದು ವಾಕ್ಯದಲ್ಲಿ ಉತ್ತರಿಸಿ

9. ಶಾತವಾಹನರ ರಾಜಧಾನಿಯನ್ನು ಹೆಸರಿಸಿ (ಸು)

10. ಶಾತವಾಹನರ ಪ್ರಸಿದ್ಧ ದೊರೆ ಯಾರು ? (ಸು)

11. ಶ್ರವಣಬೆಳಗೊಳದ ಗೊಮ್ಮಟ ಮೂರ್ತಿಗೆ ಎಷ್ಟು ವರ್ಷಕ್ಕೊಮ್ಮೆ ಮಹಾಮಸ್ತಕಾಭಿಷೇಕ ಜರುಗುವುದು? (ಸು)

12. ಗಂಗರ ರಾಜ್ಯದ ಮತ್ತೊಂದು ಹೆಸರೇನು? (ಸು)

13. ಶಾತವಾಹನರ ಸಾಮ್ರಾಜ್ಯ ಅವನತಿ ಹೊಂದಿತು, ಏಕೆ? (ಸು)

14. ಕದಂಬರ ಕಾಲದ ರಾಜಾಡಳಿತದ ಭಾಷೆಗಳು ಯಾವುವು? (ಸು)

III. ಎರಡು  ಮೂರು ವಾಕ್ಯಗಳಲ್ಲಿ ಉತ್ತರಿಸಿ

15. ಗಂಗರ ಕಾಲದ ನಾಲ್ಕು ಗ್ರಂಥಗಳನ್ನು ಹೆಸರಿಸಿ. (ಸು)

16. ದಕ್ಷಿಣ ಭಾರತವನ್ನು ಆಳಿದ ರಾಜ ವಂಶಗಳನ್ನು ಪಟ್ಟಿಮಾಡಿ. (ಸಾ)

17. ಶಾತವಾಹನರ ಕಾಲದ ಪ್ರಮುಖ ವ್ಯಾಪಾರ ಕೇಂದ್ರಗಳನ್ನು ಹೆಸರಿಸಿ. (ಸು)

IV. **ಆರು -ಏಳು** ವಾಕ್ಯಗಳಲ್ಲಿ ಉತ್ತರಿಸಿ

**18.** ಕರ್ನಾಟಕ ಮತ್ತು ಭಾರತದ ಸಂಸ್ಕೃತಿಗೆ ಕದಂಬರ ಕೊಡುಗೆ**ಯನ್ನು ವಿವರಿಸಿ**(ಸಾ)

**19.** ಗಂಗರ ಸಮಾಜವು ಅನೇಕ ಮೌಲ್ಯಗಳಿಂದ ಪ್ರಭಾವಿತವಾಗಿತ್ತು. ಈ ಹೇಳಿಕೆಯನ್ನು ಪುಷ್ಟೀಕರಿಸಿ. (ಕ)

## 19. ಬಾದಾಮಿಯ ಚಾಲುಕ್ಯರು ಮತ್ತು ಕಂಚಿಯ ಪಲ್ಲವರು

**ಕಲಿಕಾ ಫಲ: .**

- **ಬಾದಾಮಿ ಚಾಲುಕ್ಯರ ಇಮ್ಮಡಿ ಪುಲಿಕೇಶಿಯ ಸಾಮ್ರಾಜ್ಯ ವಿಸ್ತರಣೆಯನ್ನು ತಿಳಿಯುವರು**
- **ಕಂಚಿ ಪಲ್ಲವರ ಸಾಹಿತ್ಯ, ಧರ್ಮ, ಕಲೆ, ವಾಸ್ತುಶಿಲ್ಪ ಹಾಗೂ ಶಿಕ್ಷಣದ ಕೊಡುಗೆಗಳನ್ನು ಪ್ರಶಂಸಿಸುವರು**

I. ಬಹು ಆಯ್ಕೆ ಪ್ರಶ್ನೆಗಳು

1) ದಕ್ಷಿಣಪತೇಶ್ವರ ಎಂದು ಬಿರುದು ಪಡೆದ ಬಾದಾಮಿ ಚಾಲುಕ್ಯ ದೊರೆ.  (ಸು)

A) ವಿಷ್ಣುವರ್ಧನ   B) ರಾಜಾ ಜಯಸಿಂಹ       C) ಇಮ್ಮಡಿ ಪುಲಕೇಶಿ     D) ಹರ್ಷವರ್ಧನ.

2) 'ಕೌಮುದಿ ಮಹೋತ್ಸವ' ಎಂಬ ಸಂಸ್ಕೃತ ನಾಟಕದ ಕರ್ತೃ. (ಸು)

A) ಕಪ್ಪೆ ಆರ್ಯಭಟ B) ವಿಜ್ಜಿಕ C) ರವಿಕೀರ್ತಿ D) ಶಿವ ಭಟ್ಟಾಚಾರ್ಯ.

3) ಕಂಚಿಯ ಬಳಿ ಮಹಾಬಲಿಪುರಂ ಎಂಬ ಹೊಸನಗರ ಕಟ್ಟಿದವರು. (ಸು)

A) ಕೀರ್ತಿವರ್ಮ B) ಮಹೇಂದ್ರ ವರ್ಮ C) ನರಸಿಂಹ ವರ್ಮ D) ವಿಷ್ಣುವರ್ಧನ.

4) ದೇವಾಲಯಗಳ ತೊಟ್ಟಿಲು ಎಂದು ಈ ಸ್ಥಳವು ಹೆಸರುವಾಸಿಯಾಗಿದೆ. (ಸು)

A) ಐಹೊಳೆ B) ಪಟ್ಟದಕಲ್ಲು C) ಬಾದಾಮಿ D) ಹಂಪಿ.

5) ವಿಶ್ವಪರಂಪರೆಯ ಸ್ಮಾರಕವೆಂದು ಯುನೆಸ್ಕೋ ಘೋಷಿಸಿದ ಸ್ಥಳ (ಸು)

A) ಬಾದಾಮಿ B) ಮಹಾಕೂಟ C) ಪಟ್ಟದಕಲ್ಲು D) ಐಹೊಳೆ.

6) ಮಹಾಬಲಿಪುರಂ ನಲ್ಲಿರುವ ಪಲ್ಲವರ ಕಾಲದ ಪ್ರಸಿದ್ಧ ಶಿಲ್ಪಕಲಾಕೃತಿ (ಸು)

A) ಅರ್ಜುನ ತಪಸ್ಸು B) ಏಕಾಂಬರನಾಥ C) ಮಧುಕೇಶ್ವರ D) ತಾಜ್ ಮಹಲ್

7) ಪಲ್ಲವ ಸಂತತಿಯ ಪ್ರಥಮ ದೊರೆ. (ಸು)

A) ಮಹೇಂದ್ರ ವರ್ಮ B) ಶಿವಸ್ಕಂಧವರ್ಮ C) ಮಯೂರ ವರ್ಮ D) ನರಸಿಂಹ ವರ್ಮ.

8) ಪಲ್ಲವರ ಕಾಲದಲ್ಲಿ ಕಂಚಿಯನ್ನು ಸಂದರ್ಶಿಸಿದ ವಿದೇಶಿ ಪ್ರವಾಸಿಗ. (ಸು)

A) ಫಾಹಿಯಾನ್ B) ಅಲ್ಬೆರುನಿ C) ಮೆಗಾಸ್ತನೀಸ್ D) ಹ್ಯುಯೇನ್ ತ್ಸಾಂಗ್.

II. ಒಂದು ಅಂಕದ ಪ್ರಶ್ನೆಗಳು

9) ಇಮ್ಮಡಿ ಪುಲಕೇಶಿ ಹೊಂದಿರುವ ಬಿರುದುಗಳಾವುವು? (ಸು)

10) ಕಂಚಿಯಲ್ಲಿಳಿದ ಪಲ್ಲವ ಅರಸರುಗಳನ್ನು ಹೆಸರಿಸಿ. (ಸು)

11) ಕರ್ನಾಟಕ ಎಂಬ ಹೆಸರು ಕೊಟ್ಟ ರಾಜವಂಶ ಯಾವುದು? (ಸು)

12) ಇಮ್ಮಡಿ ಪುಲಕೇಶಿ ಮಹೇಂದ್ರವರ್ಮನನ್ನು ಏಕೆ ಸೋಲಿಸಿದನು? (ಸಾ)

III. ಎರಡು ಅಂಕದ ಪ್ರಶ್ನೆಗಳು

13) 'ಚಾಲುಕ್ಯರು ಸಾಹಿತ್ಯಪ್ರಿಯರು' ಈ ಹೇಳಿಕೆಯನ್ನು ಸಮರ್ಥಿಸಿ. (ಕ)

14) ಎರಡನೇ ಪುಲಕೇಶಿಯು ಚಾಲುಕ್ಯರ ಮಹಾನ್ ಅರಸ, ಸಮರ್ಥಿಸಿ. (ಕ)

15) ಕಂಚಿಯ ಪಲ್ಲವರು ವಾಸ್ತುಶಿಲ್ಪಕ್ಕೆ ನೀಡಿದ ಕೊಡುಗೆಯನ್ನು ವಿವರಿಸಿ. (ಸಾ)

## 20. ಮಾನ್ಯಖೇಟದ ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಲುಕ್ಯರು

**ಕಲಿಕಾ ಫಲ:**

- ರಾಷ್ಟ್ರಕೂಟರು ಆಡಳಿತ, ಸಾಹಿತ್ಯ ಹಾಗೂ ವಾಸ್ತುಶಿಲ್ಪದ ಕೊಡುಗೆಗಳನ್ನು ವಿವರಿಸುವರು
- ಕಲ್ಯಾಣದ ಚಾಲುಕ್ಯರ ಆಡಳಿತ, ಸಾಹಿತ್ಯ ಹಾಗೂ ವಾಸ್ತುಶಿಲ್ಪದ ಪ್ರಗತಿಯನ್ನು ತಿಳಿಯುವರು
- ಭೂಪಟದಲ್ಲಿ ರಾಷ್ಟ್ರಕೂಟರ ಸಾಮ್ರಾಜ್ಯದ ಗಡಿಗಳನ್ನು ಗುರುತಿಸುವರು
- ಆಡಳಿತ ವ್ಯವಸ್ಥೆಯನ್ನು ಪ್ರಸ್ತುತ ಆಡಳಿತ ವ್ಯವಸ್ಥೆಯೊಂದಿಗೆ ಹೋಲಿಸುವರು ಹಾಗೂ ಈ ಕಾಲದ ಐತಿಹಾಸಿಕ ಬೆಳವಣಿಗೆಯನ್ನು ವಿವರಿಸುತ್ತಾರೆ

I. ಬಹು ಆಯ್ಕೆ ಪ್ರಶ್ನೆಗಳು

1. ಎಲ್ಲೋರಾದಲ್ಲಿ ಕೈಲಾಸನಾಥ ದೇವಾಲಯ ನಿರ್ಮಿಸಿದ ರಾಷ್ಟ್ರಕೂಟ ದೊರೆ (ಸು)

   A) ಒಂದನೇ ಕೃಷ್ಣ B) ಮುಮ್ಮಡಿ ಗೋವಿಂದ C) ಅಮೋಘವರ್ಷ D) ಇಮ್ಮಡಿ ಕೃಷ್ಣ

2. ರಾಷ್ಟ್ರಕೂಟ ಸಾಮ್ರಾಜ್ಯದಲ್ಲಿ ವಿದೇಶಿ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದವರು (ಸು)

   A) ವಿದೇಶಾಂಗ ಸಚಿವ B) ಆಡಳಿತ ಸಚಿವ C) ಮಹಾ ಸಂಧಿ ವಿಗ್ರಹಿ D) ವಿಜಯಪತಿ

3. ಕನ್ನಡದ ಆದಿ ಕವಿ ಎಂದು ಕರೆಯಲ್ಪಟ್ಟ ಕವಿ (ಸು)

   A) ಪಂಪ B) ಪೊನ್ನ C) ಶ್ರೀ ವಿಜಯ D) ರನ್ನ

4. ಕವಿರಾಜ ಮಾರ್ಗವನ್ನು ರಚಿಸಿದ ಶ್ರೀವಿಜಯ ಇವರ ಆಸ್ಥಾನದಲ್ಲಿದ್ದನು (ಸು)

   A) ಧ್ರುವ B) ಅಮೋಘವರ್ಷ C) ಒಂದನೇ ಕೃಷ್ಣ D) ಎರಡನೇ ಕರ್ಕ

5. ಆದಿ ಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಗ್ರಂಥಗಳ ಕರ್ತೃ (ಸು)

   A) ರನ್ನ B) ಚಾವುಂಡರಾಯ C) ಪೊನ್ನ D) ಪಂಪ

6. ಆದಿಕವಿ ಪಂಪನ ಹೆಸರಿನಲ್ಲಿ ನಾಡಿನ ಸಾಧಕರಿಗೆ ನಾಡೋಜ ಪ್ರಶಸ್ತಿಯನ್ನು ನೀಡುತ್ತಿರುವ ವಿಶ್ವವಿದ್ಯಾಲಯ (ಸು)

   A) ಹಂಪಿ B) ಬೆಳಗಾವಿ C) ಮೈಸೂರು D) ಧಾರವಾಡ

7. 'ಕಲ್ಯಾಣ' ಎಂಬ ಹೊಸ ನಗರವನ್ನು ನಿರ್ಮಿಸಿ ರಾಜಧಾನಿಯನ್ನಾಗಿ ಮಾಡಿಕೊಂಡ ದೊರೆ (ಸು)

   A) ಎರಡನೇ ತೈಲಪ B) ಆರನೇ ವಿಕ್ರಮಾದಿತ್ಯ C) ಒಂದನೇ ಸೋಮೇಶ್ವರ D) ಜಗದೇಕಮಲ್ಲ

8. ವಿಜ್ಞಾನೇಶ್ವರನು 'ಮಿತಾಕ್ಷರ' ಎಂಬ ಗ್ರಂಥವನ್ನು ಸಂಸ್ಕೃತದಲ್ಲಿ ಈ ವಿಷಯವನ್ನು ಕುರಿತು ಬರೆದಿದ್ದಾನೆ. (ಸು)

   A) ವ್ಯಾಕರಣ B) ಅರ್ಥಶಾಸ್ತ್ರ C) ಕಾನೂನು D) ತತ್ವಶಾಸ್ತ್ರ.

II. **ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

9. ಕನ್ನಡದ ಮೊದಲ ಗ್ರಂಥ ಯಾವುದು? (ಸು)

10. ಉಭಯ ಕವಿ ಚಕ್ರವರ್ತಿ ಎಂಬ ಹೆಸರುಗಳಿಸಿದ ಕನ್ನಡದ ಕವಿ ಯಾರು? (ಸು)

11. ರನ್ನನು ಬರೆದ ಗದಾಯುದ್ಧದ ಮತ್ತೊಂದು ಹೆಸರೇನು? (ಸು)

12. ಕಲ್ಯಾಣದ ಚಾಲುಕ್ಯ ದೊರೆ ಮೂರನೇ ಸೋಮೇಶ್ವರ ಬರೆದ ಗ್ರಂಥವನ್ನು ಹೆಸರಿಸಿ. (ಸು)

**III. ಕೆಳಗಿನಿ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ**

13. ರಾಷ್ಟ್ರಕೂಟರ ಶೈಕ್ಷಣಿಕ ವ್ಯವಸ್ಥೆಯನ್ನು ವಿವರಿಸಿ. (ಸಾ)

14. ಎಲ್ಲೋರದ ಕೈಲಾಸ ದೇವಸ್ಥಾನ ಕುರಿತು ವಿವರಿಸಿ. (ಸಾ)

**IV. ಕೆಳಗಿನ ಪ್ರಶ್ನೆಗಳಿಗೆ ಏದಾರು ವಾಕ್ಯಗಳಲ್ಲಿ ಉತ್ತರಿಸಿ.**

15. ರಾಷ್ಟ್ರಕೂಟರ ಆಡಳಿತದ ವ್ಯವಸ್ಥೆಯನ್ನು ವಿವರಿಸಿ.. (ಸಾ)

16. ಕಲ್ಯಾಣ ಚಾಲುಕ್ಯರು ಸಾಹಿತ್ಯಕ್ಕೆ ನೀಡಿದ ಕೊಡುಗೆಗಳನ್ನು ವಿವರಿಸಿ. (ಸಾ)

17. ಕಲ್ಯಾಣ ಚಾಲುಕ್ಯರು ಕಲಾ ರಾಧಕರಾಗಿದ್ದರು ಈ ಹೇಳಿಕೆಯನ್ನು ಸಮರ್ಥಿಸಿ. (ಕ)

## 21. ಚೋಳರು ಮತ್ತು ದ್ವಾರಸಮುದ್ರದ ಹೊಯ್ಸಳರು

**ಕಲಿಕಾ ಫಲ:**

- ವಿವಿಧ ಕ್ಷೇತ್ರಗಳಲ್ಲಿ ಚೋಳ ಸಾಮ್ರಾಜ್ಯದ ಕೊಡುಗೆ ಹಾಗೂ ವಿಸ್ತರಣೆಯನ್ನು ಪಟ್ಟಿಮಾಡುವರು
- ಚೋಳರ ಸ್ವಯಮಾಡಳಿತ ವ್ಯವಸ್ಥೆಯನ್ನು ಪ್ರಸ್ತುತ ಆಡಳಿತ ವ್ಯವಸ್ಥೆಯೊಂದಿಗೆ ಹೋಲಿಸುವರು
- ಹೋಯ್ಸಳರ ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪದಹಾಗೂ ಬೆಳವಣಿಗೆಯನ್ನು ತಿಳಿಯುವರು

I. ಬಹು ಆಯ್ಕೆ ಪ್ರಶ್ನೆಗಳು

1. ಚೋಳ ಸಾಮ್ರಾಜ್ಯದ ರಾಜಧಾನಿ(ಸು)

A) ಕಂಚಿ B) ತಂಜಾವೂರು C) ಮಧುರೈ D) ಪಾಂಡಿಚರಿ

2. ಈ ರಾಜನನ್ನು ಚೋಳ ಸಾಮ್ರಾಜ್ಯದ ಶಿಲ್ಪಿ ಎಂದು ಕರೆಯಲಾಗಿದೆ. (ಸು)

A) ಕರಿಕಾಲ ಚೋಳ B) ವಿಜಯಾಲಯ

C) ಒಂದನೇ ರಾಜ ರಾಜ ಚೋಳ D) ಒಂದನೇ ರಾಜೇಂದ್ರ ಚೋಳ

3. ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ 'ಅಂಗಡಿ' ಗ್ರಾಮದ ಪುರಾತನ ಹೆಸರು (ಸು)

A) ಸೊಸೆವೂರು B) ಬೇಲೂರು C) ದ್ವಾರಸಮುದ್ರ D) ಸೋಮನಾಥಪುರ

4. ಹೊಯ್ಸಳ ಚಕ್ರವರ್ತಿ ವಿಷ್ಣುವರ್ಧನನ ಮೊದಲ ಹೆಸರು (ಸು)

A) ಎರೆಯಂಗ B) ನೃಪಕಾಮ C) ಬಲ್ಲಾಳ D) ಬಿಟ್ಟಿದೇವ

5. ಹರಿಶ್ಚಂದ್ರ ಕಾವ್ಯವನ್ನು ರಚಿಸಿದ ಕನ್ನಡದ ಕವಿ (ಸು)

A) ಹರಿಹರ B) ರಾಘವಾಂಕ C) ಕಲ್ಹಣ D) ಪಂಪ

6. ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯವನ್ನು ಕಟ್ಟಿಸಿದವರು (ಸು)

A) ಕೇತು ಮಲ್ಲ B) ಸೋಮದಂಡ ನಾಯಕ C) ಚಾವುಂಡರಾಯ D) ಸುಂದರಪಾಂಡ್ಯ

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

7) 'ಗಂಗೈಕೊಂಡ ಚೋಳಪುರಂ' ನಗರವನ್ನು ಕಟ್ಟಿಸಿದ ಚೋಳ ದೊರೆ ಯಾರು? (ಸು)

8) 'ಕವಿ ಚಕ್ರವರ್ತಿ' ಎಂಬ ಬಿರುದು ಪಡೆದ ಕನ್ನಡದ ಕವಿ ಯಾರು? (ಸು)

9) ರಾಮಾನುಜಾಚಾರ್ಯರು ಸ್ಥಾಪಿಸಿದ ಪಂಥ ಯಾವುದು? (ಸು)

10) ಒಂದನೇ ರಾಜರಾಜ ಚೋಳನು ತಂಜಾವೂರಿನಲ್ಲಿ ಕಟ್ಟಿಸಿದ ದೇವಸ್ಥಾನ ಯಾವುದು? (ಸು)

11) ಚೋಳ ಸಾಮ್ರಾಜ್ಯದ ಶಿಲ್ಪಿ ಯಾರು? (ಸು)

**III. ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯದಲ್ಲಿ ಉತ್ತರಿಸಿ**

12) ಚೋಳರ ಆಳ್ವಿಕೆಯ ಪ್ರಮುಖ ಲಕ್ಷಣಗಳನ್ನು ಪಟ್ಟಿಮಾಡಿ. (ಸಾ)

13) ಹೊಯ್ಸಳರು ಸಾಹಿತ್ಯವನ್ನು ಹೇಗೆ ಪ್ರೋತ್ಸಾಹಿಸಿದರು ವಿವರಿಸಿ. (ಸಾ)

**IV. ಕೆಳಗಿನ ಪ್ರಶ್ನೆಗಳಿಗೆ ಏಳು-ಎಂಟು ವಾಕ್ಯದಲ್ಲಿ ಉತ್ತರಿಸಿ.**

14) ಚೋಳರ ಒಂದನೇ ರಾಜರಾಜ ಪ್ರಸಿದ್ಧ ಅರಸನಾಗಿದ್ದಾನೆ ಸಮರ್ಥಿಸಿ. (ಕ)

15) ಹೊಯ್ಸಳ ರಾಜ ವಿಷ್ಣುವರ್ಧನನು ಒಬ್ಬ ಶ್ರೇಷ್ಠ ದೊರೆ ಈ ಹೇಳಿಕೆಯನ್ನು ಪುಷ್ಠೀಕರಿಸಿ. (ಕ)

## 22.ಪ್ರಜಾಪ್ರಭುತ್ವ

ಕಲಿಕಾಫಲ:

- 2005 ರ ಮಾಹಿತಿ ಹಕ್ಕು ಕಾಯ್ದೆಯ ಬಗ್ಗೆ ತಿಳಿಯುವರು
- ಪ್ರಜಾಪ್ರಭುತ್ವದ ಕಲ್ಪನೆಯನ್ನು ಅರಿಯುವರು
- ಪ್ರಜಾಪ್ರಭುತ್ವದ ವಿಧಗಳು ಹಾಗೂ ಅವುಗಳ ವ್ಯತ್ಯಾಸಗಳನ್ನು ಗುರುತಿಸುವರು
- ಪ್ರಜಾಪ್ರಭುತ್ವದ ಲಕ್ಷಣಗಳು, ಅದರ ಯಶಸ್ಸಿಗೆ ಕಾರಣವಾಗುವ ಅಂಶಗಳನ್ನು ಪಟ್ಟಿಮಾಡುವರು
- ಚುನಾವಣಾ ಪದ್ಧತಿಯನ್ನು ತಿಳಿಯುವರು
- ಪ್ರಜಾಪ್ರಭುತ್ವದಲ್ಲಿ ಸಮೂಹ ಮಾಧ್ಯಮಗಳ ಪಾತ್ರವನ್ನು ವಿಶ್ಲೇಸುವರು

**I. ಬಹು ಆಯ್ಕೆ ಪ್ರಶ್ನೆಗಳು.**

1) ಮಾಹಿತಿ ಹಕ್ಕು ಕಾಯಿದೆ ಜಾರಿಗೆ ಬಂದ ವರ್ಷ (ಸು)

A) 2006 B) 2008 C) 2005 D) 1973

2) ಭಾರತದಲ್ಲಿ ಮತ ಚಲಾಯಿಸಲು ಇರಬೇಕಾದ ಕನಿಷ್ಠ ವಯಸ್ಸು(ಸು)

A) 18 ವರ್ಷಗಳು B) 21 ವರ್ಷಗಳು C ) 16 ವರ್ಷಗಳು D) 14 ವರ್ಷಗಳು.

3) ಸಂವಿಧಾನದ ಈ ತಿದ್ದುಪಡಿಯು ಮತದಾನದ ವಯಸ್ಸನ್ನು ಹದಿನೆಂಟು ವರ್ಷಗಳಿಗೆ ಇಳಿಸಿದೆ. (ಸು)

A) 71ನೇ ತಿದ್ದುಪಡಿ B) 62ನೇ ತಿದ್ದುಪಡಿ C) 61ನೇ ತಿದ್ದುಪಡಿ D) 23ನೇ ತಿದ್ದುಪಡಿ

4). ಈ ಮುಂದಿನವುಗಲಲ್ಲಿ ಪ್ರತ್ಯಕ್ಷ ಪ್ರಜಾಪ್ರಭುತ್ವ ಜಾರಿಯಲ್ಲಿರುವ ದೇಶ ಯಾವುದೆಂದರೆ (ಸು)

A) ಭಾರತ B) ಸ್ವಿಡ್ಜರ್‌ಲ್ಯಾಂಡ್ C) ಇಂಗ್ಲೆಂಡ್ D) ಆಸ್ಟ್ರೇಲಿಯಾ

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

5) 'ಡೆಮಾಕ್ರಸಿ' ಪದದ ಉತ್ಪತ್ತಿಯನ್ನು ವ್ಯಾಖ್ಯಾನಿಸಿ. (ಸು)

6) ಪ್ರಜಾ ಪ್ರಭುತ್ವ ಕುರಿತು ಅಬ್ರಾಹಂ ಲಿಂಕನ್ ರವರ ವ್ಯಾಖ್ಯಾನ ತಿಳಿಸಿ. (ಸು)

7) ಸಾರ್ವತ್ರಿಕ ಚುನಆವಣೆಗಳು ಎಂದರೇನು? (ಸು)

8) ಪ್ರಜಾಪ್ರಭುತ್ವ ಒಂದು ಜೀವನ ವಿಧಾನವೂ ಆಗಿದೆ ಎಂದು ವ್ಯಾಖ್ಯಾನಿಸಿದವರು ಯಾರು ? (ಸು)

**III. ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯದಲ್ಲಿ ಉತ್ತರಿಸಿ**

9) ಪ್ರಜಾಪ್ರಭುತ್ವದ ವಿಧಗಳನ್ನು ವಿವರಿಸಿ. (ಸಾ)

10) ಪ್ರಜಾ ಪ್ರಭುತ್ವದ ಎರಡು ಲಕ್ಷಣಗಳನ್ನು ತಿಳಿಸಿ. (ಸಾ)

**IV. ಕೆಳಗಿನ ಪ್ರಶ್ನೆಗಳಿಗೆ ಐದರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿ.**

11)ಪ್ರಜಾಪ್ರಭುತ್ವದ ಯಶಸ್ಸಿಗೆ ಕಾರಣವಾಗುವ ಅಂಶಗಳು ಯಅವುವು? (ಸು)

12)ಪ್ರತ್ಯಕ್ಷ ಹಾಗೂ ಪರೋಕ್ಷ ಪ್ರಜಾಪ್ರಭುತ್ವಗಳ ನಡುವಿನ ವ್ಯತ್ಯಾಸಗಳನ್ನು ಪಟ್ಟಿ ಮಾಡಿರಿ. (ಸಾ)

**V. ಕೆಳಗಿನ ಪ್ರಶ್ನೆಗಳಿಗೆ ಏಳು-ಎಂಟು ವಾಕ್ಯಗಳಲ್ಲಿ ಉತ್ತರಿಸಿ.**

13) ಪ್ರಜಾಪ್ರಭುತ್ವ ಮಾದರಿ ಸರ್ಕಾರ ಇತರೆ ಮಾದರಿ ಸರ್ಕಾರ ಪದ್ಧತಿಗಳಿಗಿಂತ ಉತ್ತಮವಾಗಿದೆ, ಈ ಹೇಳಿಕೆಯನ್ನು ವಿಶ್ಲೇಷಿಸಿ(ಕ)

14) ಪ್ರಜಾ ಪ್ರಭುತ್ವ ವ್ಯವಸ್ಥೆಯ ಪ್ರಮುಖ ಲಕ್ಷಣಗಳನ್ನು ವಿವರಿಸಿ. (ಸಾ)

## 23. ಸ್ಥಳೀಯ ಸ್ವಯಂ ಸರ್ಕಾರಗಳು

**ಕಲಿಕಾ ಫಲ:**

- ವಿವಿಧ ಸ್ಥಳೀಯ ಸರ್ಕಾರಗಳ ರಚನೆ, ಆಡಳಿತ, ಜವಾಬ್ದಾರಿಗಳನ್ನು ತಿಳಿಯುವರು
- ಸ್ಥಳೀಯ ಸರ್ಕಾರದ ರಚನೆಯ ಹಿನ್ನಲೆಯನ್ನು ತಿಳಿಯುವರು
- ಸ್ಥಳೀಯ ಸರ್ಕಾರದ ಕಾರ್ಯಗಳು ಹಾಗೂ ಉದ್ದೇಶಗಳನ್ನು ತಿಳಿಯುವರು

**I. ಬಹು ಆಯ್ಕೆ ಪ್ರಶ್ನೆಗಳು.**

1) ಸಂವಿಧಾನದ ಈ ತಿದ್ದುಪಡಿಗಳು .ಪಂಚಾಯತ್ ರಾಜ್ ವ್ಯವಸ್ಥೆಯು ಇತಿಹಾಸದಲ್ಲಿಯೇ ಮೈಲುಗಲ್ಲು ಎನಿಸಿಕೊಂಡಿವೆ. (ಕ)

A) 63ನೇ ಮತ್ತು 64ನೇ ತಿದ್ದುಪಡಿ B) 73ನೇ ಮತ್ತು 74ನೇ ತಿದ್ದುಪಡಿ

C) 93ನೇ ಮತ್ತು 94ನೇ ತಿದ್ದುಪಡಿ D) 83ನೇ ಮತ್ತು 84ನೇ ತಿದ್ದುಪಡಿ

2) ಸ್ಥಳೀಯ ಸರ್ಕಾರಗಳ ಚುನಾವಣೆಯಲ್ಲಿ ಈ ವರ್ಗದವರು ವಿಶೇಷ ಮೀಸಲಾತಿ ಸೌಲಭ್ಯಗಳನ್ನು ಹೊಂದಿದ್ದಾರೆ. (ಸು)

A) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ B) ಹಿಂದುಳಿದ ವರ್ಗ

C) ಮಹಿಳೆಯರು D) ಮೇಲಿನ ಎಲ್ಲಾ ವರ್ಗಗಳಿಗೆ

3) ಕರ್ನಾಟಕದಲ್ಲಿಪ್ರಸ್ತುತ ಇರುವ ಬೃಹತ್ ಮಹಾನಗರ ಪಾಲಿಕೆ ಹಾಗೂ ಮಹಾನಗರ ಪಾಲಿಕೆಗಳು. (ಸು)

A) 1 ಹಾಗೂ 11 B) 1 ಹಾಗೂ 10 C) 2 ಹಾಗೂ 10 D) 2 ಹಾಗೂ 11

4) ಮಹಾನಗರ ಪಾಲಿಕೆ ಕಾರ್ಯ ನಿರ್ವಹಣೆಯನ್ನು ಈ ಅಧಿಕಾರಿ ನೋಡಿಕೊಳ್ಳುತ್ತಾರೆ. (ಸು)

A) ಮಹಾಪೌರರು B) ಮಹಾನಗರ ಪಾಲಿಕೆ ಆಯುಕ್ತರು

C) ರಾಜ್ಯಪಾಲರು D)ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು

II. ಒಂದು ಅಂಕದ ಪ್ರಶ್ನೆಗಳು

5) ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಯಾವಾಗ ಜಾರಿಗೆ ಬಂದಿತು? (ಸು)

6) ಗ್ರಾಮ ಸಭೆಯ ಅಧ್ಯಕ್ಷತೆಯನ್ನು ಯಾರು ವಹಿಸಿರುತ್ತಾರೆ ? (ಸು)

7) ಗ್ರಾಮ ಪಂಚಾಯಿತಿಯ ಆಡಳಿತಾವಧಿ ಎಷ್ಟು ? (ಸು)

8) ತಾಲ್ಲೂಕು ಪಂಚಾಯಿತಿ ಸಭೆಗಳ ಅವಧಿಯನ್ನು ತಿಳಿಸಿ(ಸು)

9) ಜಿಲ್ಲಾ ಪಂಚಾಯ್ತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅಧಿಕಾರಾವಧಿಯನ್ನು ತಿಳಿಸಿ. (ಸು)

10)ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ (CEO)ರವರನ್ನು ಯಾರು ನೇಮಿಸುತ್ತಾರೆ ? (ಸು)

III. ಎರಡು ಅಂಕದ ಪ್ರಶ್ನೆಗಳು

11)ಸ್ಥಳೀಯ ಸ್ವಯಂ ಸರ್ಕಾರಗಳ ಉದ್ದೇಶವನ್ನು ಬರೆಯಿರಿ. (ಸಾ)

12)ಸ್ಥಳೀಯ ಸ್ವಯಂ ಸರ್ಕಾರಗಳ ಆದಾಯದ ಮೂಲಗಳನ್ನು ತಿಳಿಸಿ. (ಸು)

13)ತಾಲ್ಲೂಕು ಪಂಚಾಯಿತಿಗಳು ನಿರ್ವಹಿಸುವ ಹೆಚ್ಚುವರಿ ಕಾರ್ಯಗಳಾವುವು? (ಸು)

14)ನಗರ ಸ್ಥಳೀಯ ಸಂಸ್ಥೆಯ ಪ್ರಮುಖ ವಿಧಗಳಾವುವು ? (ಸು)

IV. ಎರಡು ಅಂಕದ ಪ್ರಶ್ನೆಗಳು

15)ನಗರ ಸ್ಥಳೀಯ ಸಂಸ್ಥೆಗಳು ನಿರ್ವಹಿಸುವ ಪ್ರಮುಖ ಕಾರ್ಯಗಳನ್ನು ಪಟ್ಟಿ ಮಾಡಿರಿ. (ಸಾ)

## 24. ದಿನನಿತ್ಯದ ಜೀವನದಲ್ಲಿ ಸಮಾಜಶಾಸ್ತ್ರ

ಕಲಿಕಾ ಫಲ:

- ನಿತ್ಯಜೀವನದಲ್ಲಿ ವ್ಯಕ್ತಿಗಳ ಪಾತ್ರ ಮತ್ತು ಸಾಮಾಜಿಕ ಚಲನವಲನಗಳನ್ನು ತಿಳಿಯುವರು
- ಸಾಮಾಜೀಕರಣದ ಮಹತ್ವವನ್ನು ವಿಶ್ಲೇಷಿಸುತ್ತಾರೆ.

I. ಒಂದು ಅಂಕದ ಪ್ರಶ್ನೆಗಳು

1. ಸಾಮಾಜಿಕ ಅಂತಃಕ್ರಿಯೆ ಎಂದರೇನು? (ಸು)
2. ಪಾತ್ರ ಪ್ರಜ್ಞೆ ಎಂದರೇನು? (ಸು)
3. ಸಂಭಾಷಣೆ ನಡೆಸಲು ಯಾವುದರ ಅಗತ್ಯತೆ ಇದೆ? (ಸು)
4. ಸಾಮಾಜಿಕ ಒಡನಾಟ ಎಂದರೇನು? (ಸು)

II. **ಸಂಕ್ಷಿಪ್ತವಾಗಿ ಉತ್ತರಿಸಿ**

5. ಭಾಷೆಯ ಮಹತ್ವವನ್ನು ತಿಳಿಸಿ? (ಸು)

6. ಪಾತ್ರ ಪ್ರಜ್ಞೆಯನ್ನು ಉದಾಹರಣೆಯೊಂದಿಗೆ ವಿವರಿಸಿ. (ಸಾ)

## 25.ಸಮಾಜದ ಪ್ರಕಾರಗಳು

**ಕಲಿಕಾ ಫಲ:**

- **ವಿವಿಧ ಪ್ರಕಾರದ ಸಮಾಜಗಳನ್ನು ವರ್ಗೀಕರಿಸುವರು**
- ವಿವಿಧ ಪ್ರಕಾರದ ಸಮಾಜಗಳ ಲಕ್ಷಣಗಳನ್ನು ಪಟ್ಟಿಮಾಡುವರು
- **ವಿವಿಧ ಪ್ರಕಾರದ** ಸಮಾಜದ ಉಗಮ ಹಾಗೂ ಆಧುನಿಕ ಸಮಾಜದ ನಡುವೆ ಹೋಲಿಕೆಯನ್ನು ತಿಳಿಯುವರು

I. **ಒಂದು ಅಂಕದ ಪ್ರಶ್ನೆಗಳು**

1. ಕೃಷಿ ಸಮಾಜದಲ್ಲಿ ಉಳುಮೆಗೆ ಬಳಸುವ ಸಾಧನ ಯಾವುದು? (ಸು)

2. ಬೇಟೆಯಾಡುವ ಸಮಾಜದ ಲಕ್ಷಣವನ್ನು ತಿಳಿಸಿ? (ಸು)

3. ಪಶುಪಾಲನ ಸಮಾಜದ ಅರ್ಥ ತಿಳಿಸಿ. (ಸು)

4. ಬೇಸಾಯವನ್ನು ಅವಲಂಬಿಸಿ ಬದುಕುವ ಸಮಾಜ ಯಾವುದು? (ಸು)

5. ಸಮಾಜವನ್ನು ಯಾವುದರ ಆಧಾರದ ಮೇಲೆ ವರ್ಗೀಕರಿಸಿದೆ? (ಸಾ)

6. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಅವಲಂಬಿಸಿರುವ ಸಮಾಜ ಯಾವುದು? (ಸು)

II. **ಸಂಕ್ಷಿಪ್ತವಾಗಿ ಉತ್ತರಿಸಿರಿ**

7.ಸಮಾಜದ ವಿವಿಧ ಪ್ರಕಾರಗಳಾವುವು? (ಸು)

8. ಕೃಷಿ ಸಮಾಜದ ಲಕ್ಷಣಗಳನ್ನು ಪಟ್ಟಿ ಮಾಡಿರಿ. (ಸಾ)

## 26. ಜಲಗೋಳ

**ಕಲಿಕಾ ಫಲ:**

- ವಿವಿಧ ಜಲಮೂಲಗಳ ಬಗ್ಗೆ ತಿಳಿಯುವರು
- ಮೇಲ್ಮೈ ಲಕ್ಷಣಗಳ ಆಧಾರದ ಮೇಲೆ ಸಾಗರದ ತಳದ ಭೂಸ್ವರೂಪವನ್ನು ವರ್ಗೀಕರಿಸುವರು
- ಸಾಗರ ಪ್ರವಾಹಗಳು ಹಾಗೂ ಅವುಗಳ ವಿಧಗಳನ್ನು ಹೆಸರಿಸುವರು
- ಸಾಗರಗಳ ಸಂರಕ್ಷಣೆಯ ಮಹತ್ವವನ್ನು ತಿಳಿಯುವರು
- ಭಾರತದ ಭೂಪಟದಲ್ಲಿ ವಿವಿಧ ಜಲಮೂಲಗಳನ್ನು ಗುರುತಿಸುವರು

## I. ಬಹು ಆಯ್ಕೆ ಪ್ರಶ್ನೆಗಳು

1. ಭೂಭಾಗದಿಂದ ಸುತ್ತುವರೆಯಲ್ಪಟ್ಟ ಅರ್ಧ ವೃತ್ತಾಕಾರದ ಸಮುದ್ರ ಭಾಗವೇ(ಸು)

   A) ಖಾರಿ B)ಕೊಲ್ಲಿ C)ಭೂ ಸಂದಿ D)ಜಲ ಸಂಧಿ

2. ಅತಿ ಹೆಚ್ಚು ಲವಣ ಹೊಂದಿದ ಭಾರತದ ಸರೋವರ (ಸು)

   A) ಸಾಂಬಾರ್ ಸರೋವರ B)ದಾಲ್ ಸರೋವರ C)ಮೃತ ಸಮುದ್ರ D)ಕೆಂಪು ಸಮುದ್ರ

3. ಸಾಗರದ ನೀರಿನ ಸರಾಸರಿ ಲವಣತೆ ಪ್ರಮಾಣ (ಕ)

   A)1000 ಭಾಗದಲ್ಲಿ 50 ಭಾಗ B)1000 ಭಾಗದಲ್ಲಿ 45 ಭಾಗ

   C)1000 ಭಾಗದಲ್ಲಿ 35 ಭಾಗ D)1000 ಭಾಗದಲ್ಲಿ 60 ಭಾಗ

4. ಭೂ ಸಂದಿಗೆ ಒಂದು ಉದಾಹರಣೆ (ಸಾ)

   A)ಮನ್ನಾರ್ ಖಾರಿ B)ಸುಯೆಜ್ ಕಾಲುವೆ C)ಬಂಗಾಳ ಕೊಲ್ಲಿ D)ಬೇರಿಂಗ್ ಜಲಸಂಧಿ

5. ಖಂಡಾವರಣ ಪ್ರದೇಶದ ಸರಾಸರಿ ಆಳ (ಸು)

   A)100 ಫ್ಯಾದಮ್ B) 200 ಫ್ಯಾದಮ್ C)300 ಫ್ಯಾದಮ್ D)150 ಫ್ಯಾದಮ್

## II. ಒಂದು ಅಂಕದ ಪ್ರಶ್ನೆಗಳು

1. ಭೂಮಿಯನ್ನು ನೀಲಿ ಗ್ರಹ ಎಂದು ಏಕೆ ಕರೆಯಲಅಗಿದೆ? (ಸಾ)
2. ಜಲಸಂಧಿಗೆ ಒಂದು ಉದಾಹರಣೆ ಕೊಡಿ. (ಸಾ)
3. ಅತ್ಯಂತ ಆಳ ಸಾಗರ ತಗ್ಗು ಯಾವುದು? (ಸು)
4. ಪ್ರಪಂಚದಲ್ಲೇ ಅತಿ ಹೆಚ್ಚು ಲವಣತೆ ಹೊಂದಿರುವ ಜಲ ಭಾಗ ಯಾವುದು? (ಸು)
5. ಒಂದು ಅಧಿಕ ಉಬ್ಬರದಿಂದ ಮತ್ತೊಂದು ಅಧಿಕ ಒಬ್ಬರದ ನಡುವಿನ ವೇಳೆಯ ಅಂತರವನ್ನು ತಿಳಿಸಿ. (ಸು)
6. ಹುಣ್ಣಿಮೆಯ ದಿನಗಳಲ್ಲಿ ಕಂಡು ಬರುವ ಒಬ್ಬರದ ಬಗೆ ಯಾವುದು ? (ಸು)
7. ಸೂರ್ಯನ ಕಿರಣಗಳು ನೀರಿನಲ್ಲಿ ಎಷ್ಟು ಆಳದವರೆಗೆ ಪ್ರವೇಶಿಸುತ್ತವೆ ? (ಸು)
8. ಯಾವ ವಲಯದಲ್ಲಿ ಸಾಗರದ ಲವಣತೆ ಹೆಚ್ಚಿರುತ್ತದೆ.? (ಸು)

III. ಎರಡು ಅಂಕದ ಪ್ರಶ್ನೆಗಳು

1. ಸಾಗರ ತಳದ ನಾಲ್ಕು ಭಾಗಗಳಾವುವು? (ಸು)
2. ಸಾಗರದ ಪ್ರವಾಹಗಳೆಂದರೇನು ? ಪ್ರಮುಖ ವಿಧಗಳನ್ನು ಹೆಸರಿಸಿ. (ಸು)
3. ಹಿಂದೂ ಮಹಾಸಾಗರದ ಮುಖ್ಯ ಪ್ರವಾಹಗಳನ್ನು ಪಟ್ಟಿ ಮಾಡಿ. (ಸಾ)

IV. ಮೂರು ಅಂಕದ ಪ್ರಶ್ನೆಗಳು

1. ಸಾಗರದ ಕೊಲ್ಲಿ ಮತ್ತು ಖಾರಿಗಳ ವ್ಯತ್ಯಾಸ ತಿಳಿಸಿ (ಸಾ)
2. ಸಾಗರ ತಳದ ಖಂಡಾವರಣ ಪ್ರದೇಶದ ಪ್ರಾಮುಖ್ಯತೆಗಳನ್ನು ಪಟ್ಟಿ ಮಾಡಿ (ಸಾ)
3. ಗರಿಷ್ಠ ಹಾಗೂ ಕನಿಷ್ಠ ಉಬ್ಬರಗಳು ಸಂಭವಿಸುವ ಬಗೆಯನ್ನು ತಿಳಿಸಿ (ಸು)

V. ನಾಲ್ಕು ಅಂಕದ ಪ್ರಶ್ನೆಗಳು.

1. ಸಾಗರದ ಉಬ್ಬರ ವಿಳಿತಗಳು ಮಾನವನ ಜೀವನಕ್ಕೆ ಸಹಕಾರಿಯಾಗಿವೆ ,ಸಮರ್ಥಿಸಿರಿ (ಸಾ)
2. ಸಾಗರಗಳ ಸಂರಕ್ಷಣೆಗಾಗಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳಾವುವು? (ಕ)

## 27.ಜೀವಗೋಳ

**ಕಲಿಕಾ ಫಲ:**

- ಪರಿಸರ ಸಮತೋಲನದ ಅರ್ಥ ಹಾಗೂ ಪ್ರಾಮುಖ್ಯತೆ ತಿಳಿಯುವರು
- ಪರಿಸರ ಮಾಲಿನ್ಯದ ಕಾರಣ ಮತ್ತು ಪರಿಣಾಮಗಳನ್ನು ತಿಳಿಯುವರು
- ಪರಿಸರ ಮಾಲಿನ್ಯ ತಡೆಗಟ್ಟುವ ಕ್ರಮಗಳನ್ನು ವಿಶ್ಲೇಷಿಸುವರು

I. ಬಹು ಆಯ್ಕೆ ಪ್ರಶ್ನೆಗಳು

1. ಓಝೋನ್ ಪದರ ಕಂಡುಬರುವ ವಲಯ(ಸು)

   A) ಸಮೋಷ್ಣ ಮಂಡಲ B)ಶೀತವಲಯ C) ಉಷ್ಣವಲಯ D) ಬಾಹ್ಯವಲಯ

2. ಓಜೋನ್ ಪದರ ಸಂರಕ್ಷಿಸುವುದು ನಮ್ಮೆಲ್ಲರ ಹೊಣೆ ಇದಕ್ಕೆ ಪೂರಕವಾದ ಹೇಳಿಕೆ ಗುರುತಿಸಿ. (ಸು)

   A) ಜೀವಿಗಳ ನಾಶ ತಡೆಯಬಹುದು B) ಹಸಿರು ಮನೆ ಪರಿಣಾಮ ತಡೆಯಬಹುದು

   C) ವಾಯುಮಂಡಲದ ಸಮತೋಲನ ಕಾಪಾಡಬಹುದು D)ಆಮ್ಲ ಮಳೆ ತಡೆಯಬಹುದು

II. ಒಂದು ಅಂಕದ ಪ್ರಶ್ನೆಗಳು.

1. ಪರಿಸರ ಮಾಲಿನ್ಯ ಎಂದರೇನು? (ಸು)
2. ಓಜೋನ್ ಪದರದ ಮಹತ್ವವೇನು? (ಸು)
3. ಆಮ್ಲ ಮಳೆ ಎಂದರೇನು? (ಸು)
4. ಜೀವಿ ಪರಿಸರ ಶಾಸ್ತ್ರ ಎಂದರೇನು? (ಸು)
5. ಜೀವ ವೈವಿಧ್ಯತೆ ಎಂದರೇನು? (ಸು)
6. W.H.O ಪ್ರಕಾರ ವಾಯುಮಾಲಿನ್ಯವನ್ನು ಅರ್ಥೈಸಿರಿ (ಸಾ)

III. ಎರಡು ಅಂಕದ ಪ್ರಶ್ನೆಗಳು

1. ಜೈವಿಕ ಪರಿಸರ ಸಮತೋಲನ ಎಂದರೇನು? (ಸು)
2. ಪರಿಸರ ಮಾಲಿನ್ಯದ ವಿಧಗಳಾವುವು. ? (ಸು)
3. ಆಮ್ಲ ಮಳೆಯ ಪ್ರಭಾವಕ್ಕೆ ಒಳಗಾಗಿರುವ ಪ್ರದೇಶಗಳು ಯಾವುವು? (ಸು)
4. ಶಬ್ದ ಮಾಲಿನ್ಯದ ಮಾನವ ನಿರ್ಮಿತ ಮೂಲಗಳು ಯಾವುವು? (ಸು)

IV. ಮೂರು ಅಂಕದ ಪ್ರಶ್ನೆಗಳು

1. ಪರಿಸರ ಎಂದರೇನು? ಅದರ ವಿಧಗಳು ಯಾವುವು ? (ಸು)
2. ಜಲ ಮಾಲಿನ್ಯದ ದುಷ್ಪರಿಣಾಮಗಳನ್ನು ವಿವರಿಸಿ. (ಸಾ)
3. ಶಬ್ದ ಮಾಲಿನ್ಯ ನೇರವಾಗಿ ಮಾನವನಿಗೆ ಹಾನಿಕಾರಕವಾಗಿದೆ. ಕಾರಣ ತಿಳಿಸಿ (ಸಾ)
4. ಹಸಿರು ಮನೆ ಪರಿಣಾಮ ಎಂದರೇನು ? (ಸು)

V. ನಾಲ್ಕು ಅಂಕದ ಪ್ರಶ್ನೆಗಳು

1. ಜಲ ಮಾಲಿನ್ಯದ ಪ್ರಮುಖ ಮೂಲಗಳನ್ನು ಪಟ್ಟಿ ಮಾಡಿ (ಸಾ)
2. ಜಾಗತಿಕ ತಾಪಮಾನದ ದುಷ್ಪರಿಣಾಮಗಳನ್ನು ಪಟ್ಟಿ ಮಾಡಿರಿ. (ಸಾ)

## 28.ಅರ್ಥ ಶಾಸ್ತ್ರದ ಮೂಲ ಪರಿಕಲ್ಪನೆಗಳು

**ಕಲಿಕಾ ಫಲ:**

- ರಾಷ್ಟ್ರೀಯ ವರಮಾನ ಹಾಗೂ ತಲವರಮಾನಗಳನ್ನು ವ್ಯತ್ಯಾಸಿಸುವರು.
- ಅರ್ಥಶಾಸ್ತ್ರದ ಮೂಲ ಪರಿಕಲ್ಪನೆಗಳನ್ನು ಹೆಸರಿಸುವರು
- ಬೇಡಿಕೆ, ಪೂರೈಕೆ, ವಿತರಣೆ ಹಾಗೂ ಉತ್ಪಾದನೆಗಳ ನಡುವಿನ ಸಂಬಂಧಗಳನ್ನು ತಿಳಿಯುವರು

**I. ಬಹು ಆಯ್ಕೆ ಪ್ರಶ್ನೆಗಳು:**

1. ಬೇಡಿಕೆ ಹೆಚ್ಚಿದಾಗ ಉತ್ಪಾದನೆಯ ಸ್ಥಿತಿ. (ಸು)

   A) ಕಡಿಮೆಯಾಗುತ್ತದೆ B) ತಟಸ್ಥವಾಗುತ್ತದೆ C) ಸಮತೋಲನವಾಗಿರುತ್ತದೆ D) ಹೆಚ್ಚಾಗುತ್ತದೆ.

2. ಸರಕು ಸೇವೆಗಳನ್ನು ಬಯಕೆಯ ತೃಪ್ತಿಗಾಗಿ ಬಳಸುವುದು. (ಸು)

   A) ಅನುಭೋಗ B) ಉತ್ಪಾದನೆ C) ಬೇಡಿಕೆ D) ಪೂರೈಕೆ.

3. ದೈಹಿಕ ಶ್ರಮಕ್ಕೆ ಒಂದು ಉದಾಹರಣೆ (ಸಾ)

   A) ಅಧ್ಯಾಪಕ C) ವೈದ್ಯ C) ವಿಜ್ಞಾನಿ D) ಉಳುವುದು.

4. ನ್ಯಾಯವಾದಿಯು ಈ ರೀತಿಯ ಶ್ರಮಕ್ಕೆ ಉದಾಹರಣೆ (ಸಾ)

   A) ಮಾನಸಿಕ ಶ್ರಮ B) ದೈಹಿಕ ಶ್ರಮ C) ಮನೋ ದೈಹಿಕ ಶ್ರಮ D) ಸ್ವಯಂ ತೃಪ್ತಿ

**II. ಒಂದು ಅಂಕದ ಪ್ರಶ್ನೆಗಳು:**

1. ಬೇಡಿಕೆ ಎಂದರೇನು? (ಸು)
2. ತಲಾ ವರಮಾನ ಎಂದರೇನು? (ಸು)
3. ಮಾರುಕಟ್ಟೆಯಲ್ಲಿ ಗೊತ್ತಾದ ಬೆಲೆಗೆ ಮಾರಾಟಕ್ಕಾಗಿ ಸಿದ್ಧವಾಗಿರುವ ಸರಕು ಸೇವೆಗಳಪ್ರಮಾಣ ಯಾವುದು? (ಸು)
3. ಸಮಯೋಪಯುಕ್ತತೆ ಎಂದರೇನು? (ಸು)

**III. ಸಂಕ್ಷಿಪ್ತ ಉತ್ತರ ಬಯಸುವ ಪ್ರಶ್ನೆಗಳು:**

1) “ಬೇಡಿಕೆ ರಾಷ್ಟ್ರದ ಪ್ರಗತಿಯ ಪ್ರತೀಕ. ಸಮರ್ಥಿಸಿರಿ(ಕ)

2. “ಒಂದು ರಾಷ್ಟ್ರ ಕಟ್ಟುವಲ್ಲಿ ಶ್ರಮ ಮಹತ್ವದ್ದಾಗಿದೆ”. ಸಮರ್ಥಿಸಿರಿ. (ಕ)

3. ನಿಮ್ಮ ಕುಟುಂಬದ ಸದಸ್ಯರು ಮಾಡುವ ದೈಹಿಕ ಶ್ರಮದ ಚಟುವಟಿಕೆಗಳನ್ನು ಪಟ್ಟಿಮಾಡಿ (ಸು)

4) ಅನುಭೋಗ ಎಂದರೇನು? ವಿಧಗಳನ್ನು ತಿಳಿಸಿ. (ಸು)

## 29. ವಿವಿಧ ವ್ಯವಹಾರ ಸಂಘಟನೆಗಳ ಹುಟ್ಟು

**ಕಲಿಕಾ ಫಲ:**

- **ಪಾಲುದಾರಿಕೆ ಸಂಸ್ಥೆಗಳ ವಿಧಗಳು, ಅನುಕೂಲಗಳು ಹಾಗೂ ಅನಾನುಕೂಲಗಳನ್ನು ಪಟ್ಟಿ ಮಾಡುವರು**
- ವ್ಯವಹಾರದ ಸಂಘಟನೆಗಳನ್ನು ವರ್ಗೀಕರಿಸುವರು.

## I. ಬಹು ಆಯ್ಕೆ ಪ್ರಶ್ನೆಗಳು:

1) ಒಬ್ಬನೇ ಮಾಲೀಕನಿಂದ ನಡೆಸಲ್ಪಡುವ ಸಂಸ್ಥೆ (ಸು)

A) ಪಾಲುದಾರಿಕೆ ಸಂಸ್ಥೆ B) ಏಕವ್ಯಕ್ತಿ ಮಾಲೀಕತ್ವದ ಸಂಸ್ಥೆ.

C) ಹಿಂದೂ ಅವಿಭಕ್ತ ಕುಟುಂಬ ಸಂಸ್ಥೆ D) ತಟಸ್ಥಪಾಲುದಾರ ಸಂಸ್ಥೆ

2) ಪಾಲುದಾರಿಕೆ ಸಂಸ್ಥೆಗಳ ನೋಂದಣಿಗೆ ಅವಕಾಶ ನೀಡಿರುವ ಕಾಯ್ದೆ (ಸು)

A) ಭಾರತದ ಪಾಲುದಾರಿಕೆ ಸಂಸ್ಥೆಗಳ ಕಾಯ್ದೆ1932 B) ಭಾರತದ ಪಾಲುದಾರಿಕೆ ಸಂಸ್ಥೆಗಳ ಕಾಯ್ದೆ1947

C) ಭಾರತದ ಪಾಲುದಾರಿಕೆ ಸಂಸ್ಥೆಗಳ ಕಾಯ್ದೆ1986 D) ಭಾರತದ ಪಾಲುದಾರಿಕೆ ಸಂಸ್ಥೆಗಳ ಕಾಯ್ದೆ1956

3) ಪಾಲುದಾರಿಕೆ ವ್ಯವಹಾರದಲ್ಲಿ ಪಾಲುದಾರರಾಗಲು ಇರಬೇಕಾದ ಕನಿಷ್ಟ ವಯಸ್ಸು(ಸು)

A) 21 ವರ್ಷಗಳು B) 18 ವರ್ಷಗಳು C) 15 ವರ್ಷಗಳು D) 14 ವರ್ಷಗಳು.

4) ನೋಂದಣಿ ಹೊಂದಿದ ಸಂಸ್ಥೆಗಳು ಕನಿಷ್ಠ ಈ ಪ್ರಮಾಣದ ರೂಪಾಯಿ ಮೀರಿದ ಸಾಲ ವಸೂಲಾತಿಗೆ ಮೂರನೇ ವ್ಯಕ್ತಿ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಬಹುದು. (ಸು)

A) ರೂ. 1000/- B) ರೂ. 100/- C) ರೂ. 500/- D) ರೂ. 50/-

## II. ಒಂದು ಅಂಕದ ಪ್ರಶ್ನೆಗಳು:

1) ಹಣಕಾಸಿನ ವ್ಯವಹಾರ ಮಾಡುವ ಪಾಲುದಾರಿಕಾ ಸಂಸ್ಥೆಯಲ್ಲಿ ಗರಿಷ್ಠ ಎಷ್ಟು ಪಾಲುದಾರರಿಗೆ ಅವಕಾಶವಿದೆ? (ಸು)
2) ಹಿಂದೂ ಅವಿಭಕ್ತ ಕುಟುಂಬ ವ್ಯವಹಾರ ಸಂಸ್ಥೆಗಳ ಮೇಲ್ವಿಚಾರಣೆ ನೋಡಿಕೊಳ್ಳುವವರನ್ನು ಏನೆಂದು ಕರೆಯುತ್ತಾರೆ? (ಸು)
3) ಭಾರತದಲ್ಲಿ ಮಾತ್ರ ಅಸ್ತಿತ್ವದಲ್ಲಿರುವ ಸಣ್ಣ ಪ್ರಮಾಣದ ವ್ಯವಹಾರ ಸಂಸ್ಥೆ ಯಾವುದು? (ಸು)
4) ಹೊಸ ಸಂಸ್ಥೆಗಳು ಯಾವ ರೀತಿಯ ಪಾಲುದಾರರನ್ನು ಹೊಂದುವಂತಿಲ್ಲ? (ಸು)
5) ಏಕವ್ಯಕ್ತಿ ಮಾಲೀಕತ್ವ ವ್ಯವಹಾರ ಸಂಸ್ಥೆಯ ಅನುಕೂಲವನ್ನು ತಿಳಿಸಿ. (ಸು)
6) ಸರಳ ವಿಸರ್ಜನೆ ಎಂದರೇನು? (ಸು)

## III. ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1) ವಿವಿಧ ವಿಧದ ವ್ಯವಹಾರ ಸಂಘಟನೆಗಳನ್ನು ಹೆಸರಿಸಿ. (ಸು)
2) ಖಾಸಗಿ ರಂಗದ ಸಂಘಟನೆಗಳ ವಿಧಗಳಾವುವು? (ಸು)
3) ಪಾಲುದಾರಿಕೆ ವ್ಯವಹಾರ ಸಂಸ್ಥೆ ಎಂದರೇನು? ವಿಧಗಳಾವುವು? (ಸು)

4) ಪಾಲುದಾರಿಕೆ ಸಂಸ್ಥೆಯ ಅನುಕೂಲಗಳನ್ನು ತಿಳಿಸಿ. (ಸು)

5) ಏಕವ್ಯಕ್ತಿ ಮಾಲೀಕತ್ವ ಸಂಸ್ಥೆಗಳ ದೋಷಗಳನ್ನು ಪಟ್ಟಿ ಮಾಡಿರಿ. (ಸಾ)

6) ಸಂಸ್ಥೆಗಳ ನೊಂದಣಿಯಿಂದಾಗುವ ಉಪಯೋಗಗಳನ್ನು ವಿವರಿಸಿ. (ಸಾ)

## 30.ದೊಡ್ಡ ಪ್ರಮಾಣದ ವ್ಯವಹಾರ ಸಂಘಟನೆಗಳು

**ಕಲಿಕಾ ಫಲ:**

- ಸಹಕಾರಿ ಸಂಘಗಳ ಲಕ್ಷಣಗಳು, ವಿಧಗಳು, ಅನುಕೂಲಗಳು ಹಾಗೂ ಅನಾನೂಕೂಲಗಳನ್ನು ತಿಳಿಯುವರು
- ಜಂಟಿ ಪಾಲುದಾರಿಕೆ ಸಂಸ್ಥೆಗಳ ವಿದಗಳು, ಲಕ್ಷಣಗಳು, ಸ್ವರೂಪ, ಅನುಕೂಲಗಳು ಹಾಗೂ ಅನಾನುಕೂಲಗಳನ್ನು ಪಟ್ಟಿಮಾಡುವರು
- ಬೃಹತ್ ಪ್ರಮಾಣದ, ಸಣ್ಣ ಪ್ರಮಾಣದ ಮತ್ತು ಬಹು ರಾಷ್ಟ್ರೀಯ ಕಂಪನಿಗಳ ಕಾರ್ಯ ವಿಧಾನವನ್ನು ವಿವರಿಸುವರು.

**I. ಬಹು ಆಯ್ಕೆ ಪ್ರಶ್ನೆಗಳು**

1) ಕರ್ನಾಟಕದಲ್ಲಿ ಮೊದಲ ಸಹಕಾರಿ ಸಂಘ ಸ್ಥಾಪನೆಯಾದ ಸ್ಥಳ. (ಸು)

ಎ) ಬೆಂಗಳೂರು ನಗರ ಬಿ) ಧಾರವಾಡ ಸಿ) ಗದಗ ಜಿಲ್ಲೆಯ ಕಣಗಿನಹಾಳ ಡಿ) ಶಿವಮೊಗ್ಗ

2. ಕೂಡು ಬಂಡವಾಳ ಸಂಸ್ಥೆಯನ್ನು ನಿಯಂತ್ರಿಸುವ ಕಾಯ್ದೆ: (ಸು)

ಎ) ಭಾರತ ಕಂಪನಿ ಕಾಯಿದೆ 1956 ಬಿ) ಭಾರತ ಕಂಪನಿ ಕಾಯಿದೆ 1976

ಸಿ) ಭಾರತ ಕಂಪನಿ ಕಾಯಿದೆ 1947 ಡಿ) ಭಾರತ ಕಂಪನಿ ಕಾಯಿದೆ 1957

3.ಸಹಕಾರಿ ಸಂಘದ ಪ್ರಮುಖ ಧ್ಯೇಯ (ಸು)

ಎ) ಒಬ್ಬರಿಗಾಗಿ ಎಲ್ಲರು ಬಿ) ಕೆಲವರಿಗಾಗಿ ಒಬ್ಬರು

ಸಿ) ಎಲ್ಲರಿಗಾಗಿ ಒಬ್ಬನು ಮತ್ತು ಒಬ್ಬನಿಗಾಗಿ ಎಲ್ಲರು ಡಿ) ಸಂಘದ ಮುಖ್ಯಸ್ಥರಿಗಾಗಿ ಎಲ್ಲರು

4.ಪ್ರಪಂಚದಲ್ಲೇ ಮೊದಲು ಸಹಕಾರಿ ಸಂಘ ಸ್ಥಾಪಿಸಿದ ದೇಶ(ಸು)

ಎ) ಭಾರತ ಬಿ) ಅಮೇರಿಕ ಸಿ) ಕೆನಡಾ ಡಿ) ಇಂಗ್ಲೆಂಡ್

**II ಒಂದು ಅಂಕದ ಪ್ರಶ್ನೆಗಳು**

1.ಬಹು ರಾಷ್ಟ್ರೀಯ ಕಂಪನಿಗಳು ಮೊದಲ ಬಾರಿಗೆ ಯಾವ ದೇಶದಲ್ಲಿ ಪ್ರಾರಂಭವಾದವು? (ಸು)

2.ಭಾರತದಲ್ಲಿ ಮೊಟ್ಟ ಮೊದಲು ಷೇರುಮಾರುಕಟ್ಟೆ ಸ್ಥಾಪನೆಯಾದ ಸ್ಥಳ ಯಾವುದು? (ಸು)

3.ಜಂಟಿರಂಗದ ಸಂಸ್ಥೆಗಳು ಯಾರ ಮಾಲೀಕತ್ವದಲ್ಲಿ ಇರುತ್ತವೆ? (ಸು)

4. ಭಾರತದಲ್ಲಿ ಸಹಕಾರಿ ಸಂಘಗಳ ರಚನೆ ಯಾವು ನಿಬಂಧನಿಗಳಿಗೆ ಒಳಪಟ್ಟಿರುತ್ತದೆ? (ಸು)

5. ರೈತರ ವ್ಯವಸಾಯ ಸಹಕಾರಿ ಸಂಘದ ಅನುಕೂಲ ತಿಳಿಸಿ. (ಸು)

6. ಸಹಕಾರಿ ಮಾರುಕಟ್ಟೆಯಿಂದ ರೈತರಿಗಾಗುವ ಲಾಭ ತಿಳಿಸಿ(ಸು)

**III ಸಂಕ್ಷಿಪ್ತವಾಗಿ ಉತ್ತರಿಸಿ**

1. ಸಹಕಾರಿ ಸಂಘಗಳ ಸಾಮಾನ್ಯ ಲಕ್ಷಣಗಳನ್ನು ಪಟ್ಟಿ ಮಾಡಿರಿ(ಸಾ)
2. ಸಹಕಾರಿ ಸಂಘಗಳ ವಿಧಗಳಾವುವು? (ಸು)
3. ಸಹಕಾರಿ ಸಂಘಗಳು ಪ್ರಯೋಜನಕಾರಿಯಾಗಿವೆ. ಹೇಗೆ? (ಕ)
4. ಬಹು ರಾಷ್ಟ್ರೀಯ ಕಂಪನಿಗಳು ತವರು ದೇಶಕ್ಕೆ ವರದಾನವಾಗಿವೆ. ಸಮರ್ಥಿಸಿ. (ಕ)

**ವಿಶೇಷ ಸೂಚನೆ ; ಸು – ಸುಲಭ, ಸಾ – ಸಾಧಾರಣ, ಕ – ಕಠಿಣ**

# ಸಮಾಜ ವಿಜ್ಞಾನ

## ಕೀ ಉತ್ತರಗಳು

## ಅಧ್ಯಾಯ 1. ಆಧಾರಗಳು

**ಬಹು ಆಯ್ಕೆ ಪ್ರಶ್ನೆಗಳು**

1. A) ಸಿ-ಯು-ಕಿ
2. D) ನಾಣ್ಯಗಳು
3. B) ಹಲ್ಮಿಡಿ ಶಾಸನ
4. C) ಚೋಳರು
5. B) ಲಾವಣಿ
6. A) ಅಶೋಕ

**ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.**

7. ಇತಿಹಾಸ ರಚನೆ ಸಹಕಾರಿಯಾಗಿರುವ ಕಟ್ಟಡಗಳು, ಶಾಸನಗಳು, ನಾಣ್ಯಗಳು, ಕೃತಿಗಳು, ಅವಶೇಷಗಳು ಮತ್ತು ಮೌಖಿಕ ಪರಂಪರೆಗಳನ್ನು ಆಧಾರಗಳು ಎನ್ನುವರು.
8. ಚಾಂದ್ ಬರ್ದಾಯಿ ಬರೆದ ಕೃತಿ ಪೃಥ್ವಿರಾಜರಾಸೋ.
9. ಶ್ರೀವಿಜಯನಿಗೆ ಆಶ್ರಯ ನೀಡಿದ್ದ ಅರಸ ಅಮೋಘವರ್ಷ.
10. ಸಿಲೋನಿನ ಎರಡು ಪ್ರಸಿದ್ದ ಕೃತಿಗಳು ದೀಪವಂಶ ಮತ್ತು ಮಹಾವಂಶ.
11.ನಾಣ್ಯಗಳ ಸ್ವರೂಪ, ವಿಕಾಸ ಹಾಗೂ ಬೆಳವಣಿಗೆಯ ಬಗ್ಗೆ ಅಧ್ಯಯನ ಮಾಡುವ ನಾಣ್ಯಶಾಸ್ತ್ರ.
12. 'ತಾಜ್ ಮಹಲ್' ಆಗ್ರಾದಲ್ಲಿದೆ.
13, ಎರಡು ಸಾವಿರವರ್ಷಗಳ ಹಿಂದೆಯೇ ರೋಮ್ ದೇಶದೊಂದಿಗೆ ಭಾರತ ವ್ಯಾಪಾರ ಸಂಪರ್ಕ ಹೊಂದಿತ್ತು ಎಂಬುದನ್ನು ತಿಳಿಸುತ್ತವೆ.
14. ಜಿಯೋಗ್ರಾಫಿ ಕೃತಿ ರಚಿಸಿದವರು ಟಾಲೆಮಿ.

**ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

15. ಆಧಾರಗಳ ಪ್ರಕಾರಗಳು.
- ಸಾಹಿತ್ಯಕ ಆಧಾರಗಳು
- ಪ್ರಾಕ್ತನ ಆಧಾರಗಳು
- ಮೌಖಿಕ ಆಧಾರಗಳು
- ಐತಿಹ್ಯಗಳು

16. ಪ್ರಾಕ್ತನ ಆಧಾರಗಳ ವಿಂಗಡಣೆ.
- ಶಾಸನಗಳು
- ನಾಣ್ಯಗಳು
- ಸ್ಮಾರಕಗಳು
- ಭೂ ಉತ್ಖನನಗಳು

17. ವಿದೇಶಿ ಸಾಹಿತ್ಯಗಳು
- ಮೇಗಾಸ್ತನಿಸ್ - ಇಂಡಿಕಾ
- ಹ್ಯೂಯೆನ್ ತ್ಸಾಂಗ್ – ಸಿ-ಯು-ಕಿ
- ಫಾಹಿಯಾನ್ – ಫೋ-ಕೋ-ಕಿ
- ಟಾಲೆಮಿಯ - ಜಿಯೋಗ್ರಫಿ
- ಬರಾನಿ - ತಾರಿಖ್ –ಈ-ಫಿರೋಜ್ ಷಾಹಿ
- ಸಿಲೋನ್ - ದೀಪವಂಶ ಮತ್ತು ಮಹಾವಂಶ

18. ದೇಶಿಯ ಸಾಹಿತ್ಯ ರಚನೆಗೆ ಸಹಕಾರಿಯಾಗಿರುವ ಶಾಸನಗಳು.
- ಹಲ್ಮಿಡಿ ಶಾಸನ
- ಅಲಹಾಬಾದ್ ಸ್ತಂಭ ಶಾಸನ
- ಹಾಥಿಗುಂಫಾ ಶಾಸನ
- ಉತ್ತರ ಮೆರೂರು ಶಾಸನ
- ಐಹೊಳೆ ಶಾಸನ
- ತಾಳಗುಂದ ಶಾಸನ

19.

- ಮೌಖಿಕ ಪರಂಪರೆ ಮಾನವ ಸಮಾಜದ ನೆನಪುಗಳ ಚರಿತ್ರೆ.
- ಭಾರತದ ಬಹುಮುಖಿ ಪರಂಪರೆ ತಿಳಿಯಲು ಮೌಖಿಕ ಆಧಾರಗಳು ಸಹಾಯಕವಾಗಿದೆ.
- ಸ್ಥಳೀಯ ಇತಿಹಾಸ ತಿಳಿಯಲು ಸಹಾಯಕವಾಗಿದೆ.
- ತಲೆಮಾರಿನಿಂದ ತಲೆಮಾರಿನವರೆಗೆ ಮಾಹಿತಿಗಳನ್ನು ಮೌಖಿಕ ರೂಪದಲ್ಲಿ ಉಳಿಸಿಕೊಂಡು ಬಂದಿದೆ.
- ಉದಾಹರಣೆ ಕೆಂಪೇಗೌಡ, ಸಂಗೊಳ್ಳಿ ರಾಯಣ್ಣ, ಕಿತ್ತೂರು ರಾಣಿ ಚೆನ್ನಮ್ಮ, ಸಿಂಧೂರ ಲಕ್ಷ್ಮಣ ಇವರ ಬಗೆಗಿನ ಮಾಹಿತಿ ಮೌಖಿಕ ಸಾಹಿತ್ಯದಲ್ಲಿದೆ

20.

- ಇತಿಹಾಸ ಮಾನವನ ವಿಕಾಸದ ವಿವಿಧ ಹಂತಗಳು ರೂಪಗೊಳ್ಳುವುದರ ಹಿಂದಿನ ಸಂಕೀರ್ಣ
- ಪ್ರಕ್ರಿಯೆಗಳನ್ನು ಅಧ್ಯಯನ ಮಾಡುತ್ತದೆ.
- ಈ ಪ್ರಕ್ರಿಯೆ ಅರಿಯಲು ವಿವಿಧ ಬಗೆಯ ಆಕರಗಳನ್ನು ಇತಿಹಾಸಕಾರರು ಬಳಸಿಕೊಳ್ಳುತ್ತಾರೆ.
- ದಾಖಲೆಗಳನ್ನು ಕಲೆ ಹಾಕಿ ಅಧ್ಯಯನ ಮಾಡುತ್ತಾರೆ.
- ಅಧ್ಯಯನದಲ್ಲಿ ದೊರೆತ ಅಂಶಗಳನ್ನು ವಿಶ್ಲೇಷಣೆಗೊಳಪಡಿಸುತ್ತಾರೆ.
- ವಿಶ್ಲೇಷಣೆಯಿಂದ ದೊರೆತ ಸತ್ಯಕ್ಕೆ ಹತ್ತಿರವಾದ ವಸ್ತುನಿಷ್ಠ ಇತಿಹಾಸ ರಚಿಸುತ್ತಾರೆ.
- ಇತಿಹಾಸಕಾರರು ಸಾಕಷ್ಟು ತರಬೇತಿಯೊಂದಿಗೆ ಸಂಶೋಧನೆ ಕೈಗೊಳ್ಳುತ್ತಾರೆ.

**ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿ.**

21.

- ಲಿಖಿತ ರೂಪದ ಸಾಹಿತ್ಯವನ್ನು ದೇಶಿಯ ಮತ್ತು ವಿದೇಶಿ ಸಾಹಿತ್ಯ ಎಂಬುದಾಗಿ ವಿಂಗಡಿಸಲಾಗಿದೆ.
- ಆಯಾ ಕಾಲಘಟ್ಟದ ಚರಿತ್ರೆಯನ್ನು ಬಿಂಬಿಸುತ್ತದೆ.
- ಇತಿಹಾಸಕಾರರಿಗೆ ಐತಿಹಾಸಿಕ ಮಾಹಿತಿ ವಿಶ್ಲೇಷಣೆಗೆ ಸಹಕಾರಿಯಾಗಿದೆ.
- ದೇಶಿಯ ಸಾಹಿತ್ಯ ರಚಿಸುವಲ್ಲಿ ಕೌಟಿಲ್ಯನ ಅರ್ಥಶಾಸ್ತ್ರ, ಹಾಲನ ಗಾಥಸಪ್ತಶತಿ, ಬಾಣಭಟ್ಟನ ಹರ್ಷ ಚರಿತ್ರೆ, ಪಂಪನ ವಿಕ್ರಮಾರ್ಜುನ ವಿಜಯ, ಬೌದ್ಧ ತ್ರಿಪಿಟಕಗಳು ಶ್ರೀವಿಜಯನ 'ಕವಿರಾಜಮಾರ್ಗ' ಸಹಕಾರಿಯಾಗಿವೆ.
- ಹಾಗೆಯೇ ವಿದೇಶಿ ಸಾಹಿತ್ಯಗಳಾದ ಮೆಗಾಸ್ತನೀಸನ ಇಂಡಿಕಾ, ಹ್ಯೂಯೆನ್ ತ್ಸಾಂಗನ ಸಿ-ಯು-ಕಿ ಸಾಕಷ್ಟು ಮಾಹಿತಿ ಒದಗಿಸುತ್ತವೆ.
- ಟಾಲೆಮಿಯ ಜಿಯೋಗ್ರಫಿ, ಸಿಲೋನಿನ ದೀಪವಂಶ ಮಹಾವಂಶ ಇತ್ಯಾದಿ ಕೃತಿಗಳನ್ನು ಹೆಸರಿಸಬಹುದು.
- ಸಾಹಿತ್ಯಗಳು ಆಯಾ ಕಾಲದ ಇತಿಹಾಸ ರಚಿಸುವಲ್ಲಿ ರಾಜವಂಶಗಳು, ರಾಜರು, ಅವರ ಸಾಧನೆ, ಅಂದಿನ

- ಎಲ್ಲಾ ರೀತಿಯ ಪರಿಸ್ಥಿತಿ ಯುದ್ಧಗಳು ಹಾಗೂ ಅವುಗಳ ಪರಿಣಾಮಗಳ ಬಗ್ಗೆ ಬೆಳಕು ಚೆಲ್ಲುತ್ತವೆ.

## ಅಧ್ಯಾಯ 2.
## ಭರತವರ್ಷ : ಭಾರತದ ಭೌಗೋಳಿಕ ಲಕ್ಷಣಗಳು ಮತ್ತು ಪ್ರಾಗೈತಿಹಾಸಿಕ ಕಾಲ

I. ಬಹು ಆಯ್ಕೆ ಪ್ರಶ್ನೆಗಳು:

1. A) 7100 ಕಿಲೋ ಮೀಟರ್
2. D) ನರ್ಮದಾ ನದಿ
3. A) ಶ್ರೀಲಂಕಾ
4. B) ಸಮುದ್ರ ಮಾರ್ಗ
5. A) ದಕ್ಷಿಣ ಭಾಗ
6. B) ಕರ್ನೂಲ್

**ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.**

6. ಮಾನವನು ಲೇಖನ ಕಲೆಯನ್ನು ಕಂಡು ಹಿಡಿಯುವದಕ್ಕೂ ಮೊದಲಿನ ಕಾಲವನ್ನು ಚರಿತ್ರೆಯ ಪೂರ್ವ ಕಾಲ ಎನ್ನುವರು.
7. ಭಾರತದಲ್ಲಿ 28 ರಾಜ್ಯಗಳು ಹಾಗೂ ರಾಜಧಾನಿ ಪ್ರದೇಶ ದೆಹಲಿಯನ್ನು ಒಳಗೊಂಡಂತೆ 8 ಕೇಂದ್ರಾಡಳಿತ ಪ್ರದೇಶಗಳಿವೆ.
8. ಜಗತ್ತಿನಲ್ಲಿಯೇ ಅತ್ಯಂತ ಎತ್ತರದ ಶಿಖರಗಳನ್ನು ಹೊಂದಿರುವ ಪರ್ವತ ಶ್ರೇಣಿ ಹಿಮಾಲಯ ಪರ್ವತ ಶ್ರೇಣಿ.
9. ಪ್ರಾಚೀನ ವೇದಕಾಲದ ನಾಗರೀಕತೆಗಳು ಜನಿಸಿದ ನದಿದಂಡೆ ಸಿಂಧು - ಗಂಗಾ ನದಿ ಬಯಲು.
10. ರೇವು ಪಟ್ಟಣಗಳ ಅಭಿವೃದ್ಧಿ ಪಾಂಡ್ಯ, ಚೇರ, ಚೋಳರ ಉದಯಕ್ಕೆ ಕಾರಣವಾಯಿತು.

**ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ**

11. ಭಾರತವು ವಿಭಿನ್ನ ಬಗೆಯ ಭೌಗೋಳಿಕ ಲಕ್ಷಣಗಳು, ಸಂಸ್ಕೃತಿ. ಭಾಷೆ ಮತ್ತು ಧರ್ಮಗಳನ್ನು ಒಳಗೊಂಡಿರುವುದರಿಂದ ಇದನ್ನು ಉಪಖಂಡ ಎಂದು ಕರೆಯುತ್ತಾರೆ.
12. ಪಾಕಿಸ್ತಾನ, ಅಫ್ಘಾನಿಸ್ತಾನ, ಚೀನಾ, ನೇಪಾಳ, ಭೂತಾನ್, ಬಾಂಗ್ಲಾ, ಮಾಯನ್ಮಾರ್‌ನೊಂದಿಗೆ ಭಾರತವು ಭೂಗಡಿಯನ್ನು ಹಂಚಿಕೊಂಡಿದೆ.

13. ಮಾನವ ಲೇಖನ ಕಲೆಯನ್ನು ಕಂಡುಹಿಡಿಯುವುದಕ್ಕೆ ಮೊದಲಿನ ಕಾಲವನ್ನು ಪ್ರಾಗೈತಿಹಾಸಿಕ ಕಾಲ ಎನ್ನುವರು. ಈ ಅವಧಿಯಲ್ಲಿನ ಭಾಷೆಯ ಬೆಳವಣಿಗೆ ಹಾಗೂ ಲಿಪಿಯ ಬಳಕೆಯ ಬಗ್ಗೆ ನಮಗೆ ಆಧಾರಗಳು ಸಿಗದೇ ಇರುವುದರಿಂದ ಈ ಕಾಲವನ್ನು ಚರಿತ್ರೆಯ ಪೂರ್ವಕಾಲ ಎನ್ನುವರು.
14. ಅಂದಿನ ಮಾನವನ ಅಳಿವು - ಉಳಿವಿಗೆ ಶಿಲೆಗಳ ಪರಿಕರಗಳು ಅನಿವಾರ್ಯವಾಗಿದ್ದರಿಂದ ತಮ್ಮ ಅಗತ್ಯಕ್ಕೆ ಸೂಕ್ತವಾದ ಕಲ್ಲುಗಳು ದೊರೆಯುವ ಸ್ಥಳಗಳನ್ನು ವಾಸಕ್ಕೆ ಆಯ್ಕೆ ಮಾಡಿಕೊಂಡರು. ಮಾನವ ಕಲ್ಲುಗಳನ್ನು ಬಳಸಿ ಪರಿಕರಗಳನ್ನು ತಯಾರಿಸಿದನು. ಇಂತಹ ಪ್ರದೇಶಗಳನ್ನು ಕೈಗಾರಿಕಾ ನೆಲೆಗಳೆಂದು ಭಾವಿಸಲಾಗಿದೆ.
15. ಭಾರತದ ಮೇಲೆ ಹೆಚ್ಚಾಗಿ ಖೈಬರ್ ಮತ್ತು ಬೋಲಾನ್ ಕಣಿವೆಗಳ ಮೂಲಕ ದಾಳಿಗಳು ಸಂಭವಿಸಿವೆ.
    ಕಲ್ಲಿನಿಂದ ಆಯುಧಗಳನ್ನು ತಯಾರಿಸಿ ಬಳಸುತ್ತಿದ್ದ ಕಾಲವನ್ನು ಶಿಲಾಯುಗ ಎನ್ನುವರು

I. ಕೆಳಗಿನ ಪ್ರಶ್ನೆಗಳಿಗೆ ಐದು- ಆರು ವಾಕ್ಯಗಳಲ್ಲಿ ಉತ್ತರಿಸಿ.

II.

17.

- ಅತ್ಯಂತ ಪೂರ್ವದ ಘಟ್ಟವನ್ನು ಹಳೆಯ ಶಿಲಾಯುಗ ಎಂದು ಕರೆಯಲಾಗಿದೆ. ಹಳೆ ಶಿಲಾಯುಗ ಎರಡು ಮಿಲಿಯನ್ ವರ್ಷಗಳಷ್ಟು ಹಳೆಯದು.
- ಸುಮಾರು 12000 ವರ್ಷಗಳವರೆಗೂ ವಿಸ್ತರಿಸಿದೆ.
- ಈ ಕಾಲವನ್ನು ಮೂರು ಹಂತಗಳಾಗಿ ವಿಂಗಡಿಸಿದೆ.
- ಆದಿ ಶಿಲಾಯುಗ, ಮಧ್ಯ ಶಿಲಾಯುಗ ಹಾಗೂ ಅಂತ್ಯ ಶಿಲಾಯುಗ.

## ಅಧ್ಯಾಯ 3
## ಪ್ರಾಚೀನ ಭಾರತದ ನಾಗರಿಕತೆಗಳು: ಸಿಂಧು ಸರಸ್ವತಿ ನಾಗರಿಕತೆ ಮತ್ತು ವೇದಗಳ ಕಾಲದ ನಾಗರಿಕತೆ

**I. ಬಹು ಆಯ್ಕೆ ಪ್ರಶ್ನೆಗಳು**

1) A) 1920-1921
2) C) ಜಾನ್ ಮಾರ್ಷಲ್
3) A) ಕಾಲಿಬಂಗನ್
4) B) ಧೋಲವೀರ
5) B) ಲೋಥಾಲ್

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.**

6) ಮೊದಲ ಬಾರಿಗೆ ‘ಹರಪ್ಪ ನಾಗರಿಕತೆ’ ಎಂದು ಘೋಷಿಸಿದವರು ಜಾನ್ ಮಾರ್ಷಲ್.

7) ವೇದಗಳ ಕಾಲದ ನಾಗರಿಕತೆಯ ಅವಧಿ ಸಾ.ಶ.ಪೂ 1500 ರಿಂದ ಸಾ.ಶ.ಪೂ 700 ರ ನಡುವಿನ ಅವಧಿ.

8) ವೇದ ಎಂಬ ಪದದ ಅರ್ಥ ವಿದ್ (ಜ್ಞಾನ).

9) ಅತ್ಯಂತ ಪುರಾತನವಾದ ವೇದ ಋಗ್ವೇದ.

10) ಋಗ್ವೇದದ ಪುರುಷಸೂಕ್ತದಲ್ಲಿ ವರ್ಣ ವ್ಯವಸ್ಥೆ ಬಗ್ಗೆ ಉಲ್ಲೇಖಿಸಲಾಗಿದೆ.

11) ಉತ್ತರ ವೇದ ಕಾಲದ ಪ್ರಮುಖ ಉದ್ಯೋಗ ಕೃಷಿ.

12) ಋಗ್ವೇದದಲ್ಲಿ 1028 ಸ್ತೋತ್ರಗಳಿವೆ.

13) ಪ್ರಪಂಚದ ಪ್ರಮುಖ ನಾಗರಿಕತೆಗಳು

- ಈಜಿಪ್ಟ್ ನಾಗರೀಕತೆ.
- ಮೆಸಪೊಟೊಮಿಯಾ ನಾಗರಿಕತೆ.

14) ಸರಸ್ವತಿ ನದಿಯು ಗುಪ್ತಗಾಮಿನಿ ಎಂದು ಕರೆಯಲ್ಪಟ್ಟಿದೆ.

15) ಸಿಂಧೂ ಸರಸ್ವತಿ ನಾಗರಿಕತೆಯ ಕುರುಹುಗಳು ಹೆಚ್ಚಾಗಿ ಸಿಂಧ್ ಮತ್ತು ಪಂಜಾಬ್ ಪ್ರಾಂತ್ಯಗಳಲ್ಲಿ ಕಂಡುಬರುತ್ತವೆ.

**III. ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

16)

- ಸಿಂಧೂ ಬಯಲಿನ ನಾಗರಿಕತೆ.
- ಸಿಂಧು ಸರಸ್ವತಿ ನಾಗರಿಕತೆ,
- ಹರಪ್ಪ ನಾಗರಿಕತೆ,
- ಮೊಹೆಂಜೊದಾರೋ ನಾಗರಿಕತೆ.

17)

- ಋಗ್ವೇದ
- ಯಜುರ್ವೇದ
- ಸಾಮವೇದ
- ಅಥರ್ವಣ ವೇದ

18)

- ನಾಗರಿಕತೆಗಳ ಉಗಮ ಮತ್ತು ವಿಕಾಸ ಕುತೂಹಲವಾದದ್ದು.
- ಅಲೆಮಾರಿಯಾಗಿ ಬದುಕುತ್ತಿದ್ದ ಸಮುದಾಯಗಳು ಸ್ಥಿರ ಬದುಕು ಕಟ್ಟಿಕೊಂಡವು.
- ಮನೆಗಳನ್ನು ನಿರ್ಮಿಸಿದರು.
- ಆಹಾರ ಉತ್ಪಾದಿಸಿದರು.
- ಪ್ರಾಣಿ ಸಾಕಾಣಿಕೆ ಕಲಿತುಕೊಂಡರು.

19)

- ಹರಪ್ಪದಲ್ಲಿ ಎರಡು ಅಥವಾ ಹೆಚ್ಚಿನ ಭಾಗಗಳನ್ನು ಕಾಣಬಹುದು.
- ಪಶ್ಚಿಮದ ಭಾಗ ಕಿರಿದಾಗಿದ್ದು, ಎತ್ತರದಲ್ಲಿದೆ. ಇದನ್ನು ಕೋಟೆ ಎಂದು ಕರೆಯಲಾಗಿದೆ.
- ಪೂರ್ವದ ಭಾಗ ವಿಶಾಲವಾಗಿದ್ದು, ತಗ್ಗಿನಲ್ಲಿವೆ. ಇವುಗಳನ್ನು ಗ್ರಾಮ ಎಂದಿದ್ದಾರೆ.
- ಪ್ರತಿಯೊಂದು ಭಾಗದ ಸುತ್ತಲು ಸುಟ್ಟ ಇಟ್ಟಿಗೆಗಳ ಗೋಡೆ ಇದೆ.
- ಇದರಿಂದ ಗೋಡೆ ಭದ್ರವಾಗಿತ್ತು.

**IV. ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿ.**

20)

- ಸುಟ್ಟ ಇಟ್ಟಿಗೆಗಳಿಂದ ಕಟ್ಟಲಾಗಿದೆ.
- ಕೊಳದಿಂದ ನೀರಿನ ಸೋರಿಕೆ ಆಗದಂತೆ ಎಚ್ಚರ ವಹಿಸಿದ್ದರು.
- ಎರಡು ಬದಿಯಲ್ಲಿ ಇಳಿಯುವ ಮೆಟ್ಟಿಲುಗಳಿವೆ.
- ಸ್ನಾನ ಕೊಳದ ಸುತ್ತಲೂ ಕೊಠಡಿಗಳಿವೆ.
- ಈ ಕೊಳಕ್ಕೆ ಬಾವಿಯಿಂದ ನೀರನ್ನು ಪೂರೈಸಲಾಗುತ್ತಿತ್ತು.
- ಬಳಸಿದ ನೀರನ್ನು ಹೊರಬಿಡುವ ವ್ಯವಸ್ಥೆ ಇತ್ತು.
- ಈ ಕೊಳವನ್ನು ಮುಖ್ಯ ವ್ಯಕ್ತಿಗಳು ಸ್ನಾನ ಮಾಡಲು ಬಳಸುತ್ತಿದ್ದಿರಬಹುದು.

21)

- ಹತ್ತಿ ಮತ್ತು ರೇಷ್ಮೆಯನ್ನು ಬಳಸಿ ನೇಯ್ಗೆ ಮಾಡುತ್ತಿದ್ದರು.
- ಕಲ್ಲುಗಳ ಮೇಲೆ, ದಂತಗಳ ಮೇಲೆ ಕೆತ್ತನೆ ಮಾಡುತ್ತಿದ್ದರು.
- ಕಂಬಳಿ ತಯಾರಿಸುತ್ತಿದ್ದರು.
- ಪೀಠೋಪಕರಣಗಳನ್ನು ತಯಾರಿಸುತ್ತಿದ್ದರು.
- ಕಂಚಿನಿಂದ ಉಳಿ, ಕೊಡಲಿಯಂತಹ ಆಯುಧ ತಯಾರಿಸಿದರು.

V. **ಕೆಳಗಿನ ಪ್ರಶ್ನೆಗಳಿಗೆ ಏಳು- ಎಂಟು ವಾಕ್ಯಗಳಲ್ಲಿ ಉತ್ತರಿಸಿ**.

22)

- ತಗ್ಗಿನ ಪ್ರದೇಶ ಜನವಸತಿ ಪ್ರದೇಶವಾಗಿತ್ತು.
- ಮನೆಗಳನ್ನು ಕ್ರಮಬದ್ಧವಾಗಿ ನಿರ್ಮಿಸಿದರು.
- ರಸ್ತೆ ಮತ್ತು ಒಳಚರಂಡಿಗಳನ್ನು ನಿರ್ಮಿಸಿದರು.
- ಒಂದು ಅಥವಾ ಎರಡು ಅಂತಸ್ತಿನ ಮನೆಗಳನ್ನು ಹೊಂದಿದ್ದರು.
- ಕಟ್ಟಡ ಕಟ್ಟಲು ಸುಟ್ಟ ಇಟ್ಟಿಗೆಗಳನ್ನು ಬಳಸಿದ್ದರು.
- ಮನೆಯ ಬಾಗಿಲುಗಳು ರಸ್ತೆಯ ಮಗ್ಗುಲಿನಲ್ಲಿದ್ದು ಯಾವ ಕಿಟಕಿಯೂ ರಸ್ತೆಗೆ ಮುಖ ಮಾಡಿರಲಿಲ್ಲ.
- ಬಾವಿಗಳಿದ್ದು ಪ್ರತಿ ಮನೆಯಲ್ಲೂ ಸ್ನಾನದ ಕೊಠಡಿಗಳು ಇದ್ದವು.
- ಮನೆಬಳಕೆಯ ಕಲುಷಿತ ನೀರು ಒಳಚರಂಡಿಯನ್ನು ಸೇರುತ್ತಿತ್ತು.
- ಚರಂಡಿಗಳನ್ನು ಶುಚಿಗೊಳಿಸಲು ಅಲ್ಲಲ್ಲಿ ರಂಧ್ರಗಳನ್ನು ನಿರ್ಮಿಸಿದ್ದರು.
- ಇದನ್ನು ಗಮನಿಸಲು ಪ್ರತ್ಯೇಕ ಅಧಿಕಾರಿಗಳನ್ನು ನೇಮಿಸಿಕೊಂಡಿದ್ದರು.

23)

**ಪೂರ್ವ ವೇದಕಾಲ:**

- ಋಗ್ವೇದದ ಹತ್ತನೆಯ ಮಂಡಲದಲ್ಲಿ ವರ್ಣ ವ್ಯವಸ್ಥೆ ಬಗ್ಗೆ ಉಲ್ಲೇಖಿಸಲಾಗಿದೆ.
- ಸಮಾಜದಲ್ಲಿ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ಎಂಬ ನಾಲ್ಕು ವರ್ಣಗಳು ಅಸ್ತಿತ್ವದಲ್ಲಿದ್ದವು.
- ವ್ಯಕ್ತಿಯ ವೃತ್ತಿಯ ಮೇಲೆ ವರ್ಣ ನಿರ್ಣಯವಾಗುತ್ತಿತ್ತು.
- ಮಹಿಳೆಯರಿಗೆ ಉನ್ನತ ಸ್ಥಾನಮಾನವಿತ್ತು ಮತ್ತು ವಿವಾಹ ಜಾರಿಯಲ್ಲಿತ್ತು.

- ರಾಜನನ್ನು 'ರಾಜನ್' ಎಂದು ಕರೆಯುತ್ತಿದ್ದರು.
- ಈತನ ಸಹಾಯಕ್ಕೆ ಸಭಾ, ಸಮಿತಿ, ವಿಧಾತ, ಅಸ್ತಿತ್ವದಲ್ಲಿದ್ದವು.

**ಉತ್ತರ ವೇದಕಾಲ:**

- ಹುಟ್ಟಿನಿಂದ ಜಾತಿ ನಿರ್ಧಾರವಾಯಿತು.
- ಜಾತಿ ವ್ಯವಸ್ಥೆ ಜಟಿಲಗೊಂಡಿತು.
- ಮಹಿಳೆಯರಿಗೆ ಸಮಾಜದಲ್ಲಿ ಸ್ಥಾನಮಾನವಿರಲಿಲ್ಲ.
- ವಿಧವಾ ವಿವಾಹ ಪದ್ಧತಿ ನಿಷೇಧಿಸಲಾಯಿತು.
- ಬಾಲ್ಯ ವಿವಾಹ, ವರದಕ್ಷಿಣೆ ಪದ್ಧತಿ ಅಸ್ತಿತ್ವಕ್ಕೆ ಬಂದವು.
- ರಾಜನ ಸಹಾಯಕ್ಕಿದ್ದ ವಿಧಾತ ಕಣ್ಮರೆಯಾಯಿತು.

# ಅಧ್ಯಾಯ 4:
# ಜಗತ್ತಿನ ಕೆಲವು ಪ್ರಮುಖ ನಾಗರಿಕತೆಗಳು

**ಬಹು ಆಯ್ಕೆ ಪ್ರಶ್ನೆಗಳು**

1) A) ಈಜಿಪ್ಟ್ ನಾಗರಿಕತೆ
2) B) ಅಲೆಗ್ಸಾಂಡರ್
3) C) ಸುಮೇರಿಯನ್ನರು
4) B) ನೆಬುಕಡ್ನಿಜರ್
5) A) ಚೀನ
6) B) 5000 ಕಿಲೋಮೀಟರ್
7) C) ಸೂರ್ಯ
8) B) ಈಚಿಪ್ಟ್ ನಾಗರೀಕತೆ

**ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.**

9) ರೋಮನ್ನರ ಭಾಷೆ ಲ್ಯಾಟಿನ್.
10) ಮೆಸಪಟೋಮಿಯನನ್ನು ಎರಡು ನದಿಗಳ ನಾಡು ಎಂದು ಕರೆದವರು ಗ್ರೀಕರು.
11) ಈಜಿಪ್ಟಿನ ರಾಜರನ್ನು ಫ್ಯಾರೋ ಎಂದು ಕರೆಯಲಾಗುತ್ತಿತ್ತು.
12) ಸತ್ತವರ ದೇಹವನ್ನು ವಿವಿಧ ರಾಸಾಯನಿಕಗಳಿಂದ ಲೇಪಿಸಿ ತೆಳುವಾದ ಬಟ್ಟೆ ಸುತ್ತಿ ಸಂರಕ್ಷಿಸಿಡುವ ದೇಹವೇ ಮಮ್ಮಿ.
13) ಗ್ರೀಕ್ ರಾಜರ ಸಮಾಧಿಯ ಮೇಲೆ ಕಟ್ಟಿಸಿದ ಅತ್ಯಂತ ಎತ್ತರದ ಗೋಪುರವೇ ಪಿರಮಿಡ್.
14) ಅಲೆಗ್ಸಾಂಡ್ರಿಯ ನಗರ ನಿರ್ಮಿಸಿದ ಅರಸ ಟಾಲೆಮಿ.
15) ಮೆಸಪಟೋಮಿಯದ ನಾಗರಿಕತೆಯ ಕೇಂದ್ರ ಸ್ಥಳ ಯುಪ್ರಟಿಸ್ ಮತ್ತು ಟೈಗ್ರಿಸ್ ನದಿ
16) ಸುಮೇರಿಯನ್ನರ ಆರಾಧನಾ ಸ್ಥಳ ಜಿಗ್ಗುರಟ್.
17) ಬ್ಯಾಬಿಲೋನಿಯನ್ನರ ಪ್ರಸಿದ್ಧ ದೊರೆ ನೆಬುಕಡ್ನಿಜರ್.
18) ಚೀನಾದ ನಾಗರಿಕತೆಯ ಪ್ರಥಮ ರಾಜ ಮನೆತನ ಶಾಂಗ್ ಮನೆತನ.

**ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

19)

- ಪ್ರವಾಹದ ನಂತರ ತನ್ನ ಹಾದಿಯನ್ನು ಬದಲಿಸುತ್ತಿತ್ತು.
- ಪ್ರವಾಹದಿಂದ ಮನೆಗಳು ಹಾನಿಯಾಗಿ ಜನವಸತಿ ತೊಂದರೆ ಅನುಭವಿಸ ಬೇಕಾಗುತ್ತಿತ್ತು.
- ಕೃಷಿ ಭೂಮಿ ಪ್ರವಾಹದಿಂದ ಹಾಳಾಗುತ್ತಿತ್ತು.
- ಕಾಲುವೆಗಳು ಹಾನಿಗೊಳಗಾಗುತ್ತಿದ್ದವು.

20)

- ಹಮ್ಮುರಬಿಯ ಸಂಹಿತೆ "ಕಣ್ಣಿಗೆ ಬದಲು ಕಣ್ಣು ಹಲ್ಲಿಗೆ ಬದಲು ಹಲ್ಲು"
- ಯಾರಿಂದ ಯಾವ ಹಾನಿಯಾಗುವುದೋ ಅದೇ ಹಾನಿಯನ್ನು ಅವರಿಗೂ ಮಾಡುವುದು. ಕಣ್ಣು ಕಿತ್ತವರ ಕಣ್ಣನ್ನೇ ಕೀಳುವುದು.
- ಬ್ಯಾಬಿಲೋನ್ ಸಮಾಜ ರಕ್ಷಣೆಗಾಗಿ ರೂಪಿಸಿದ ನಿಯಮ.
- ಬ್ಯಾಬಿಲೋನ್ ಮಹಿಳೆಯರು ಮತ್ತು ಗುಲಾಮರ ರಕ್ಷಣೆಗಾಗಿ ರಚಿಸಲಾಗಿತ್ತು.

**ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿ.**

21)

- ಚೀನಾ ಹಲವು ಸಣ್ಣ ಪುಟ್ಟ ಸಂಸ್ಥಾನಗಳನ್ನು ಒಳಗೊಂಡಿತ್ತು.
- ನಂತರ ಎಲ್ಲವನ್ನು ಒಗ್ಗೂಡಿಸಿ ಏಳು ದೊಡ್ಡ ರಾಜ್ಯಗಳನ್ನು ನಿರ್ಮಿಸಲಾಯಿತು.
- ಹೀಗೆ ಸೃಷ್ಟಿಯಾದ ರಾಜ್ಯದ ರಕ್ಷಣೆಗೆ ಗಡಿಯುದ್ಧಕ್ಕೂ ರಕ್ಷಣೆಗಾಗಿ ಸ್ವತಂತ್ರವಾದ ಗೋಡೆಯನ್ನು ನಿರ್ಮಿಸಲಾಯಿತು.
- ಉತ್ತರ ಭಾಗದಿಂದ ಆಕ್ರಮಣ ಮಾಡುತ್ತಿದ್ದ ದಾಳಿಯನ್ನು ತಡೆಯಲು ಗೋಡೆಗಳನ್ನು ಒಂದು ಗೂಡಿಸಲಾಯಿತು.
- ಮಹಾಗೋಡೆಯನ್ನು ಸಾ.ಶ.ಪೂ. ಏಳನೇ ಶತಮಾನದಲ್ಲಿ ಕಟ್ಟಲು ಪ್ರಾರಂಭಿಸಲಾಯಿತು.
- ಸಾ,ಶ.ಪೂ. ಹದಿನಾರನೇ ಶತಮಾನದ ವರೆಗೂ ಕಟ್ಟಲಾಯಿತು.
- ಗೋಡೆಯ ಉದ್ದ 5000 ಕಿ.ಮೀ.
- ಜಗತ್ತಿನ ವಿಸ್ಮಯಗಳಲ್ಲಿ ಇದು ಒಂದಾಗಿದೆ.

22)

- ಶಾಂಗ್ ದೊರೆಗಳು ಸಾಕಷ್ಟು ಸಮಯ ಯುದ್ಧದಲ್ಲಿ ಮತ್ತು ಆಕ್ರಮಣಗಳಲ್ಲಿ ಕಳೆದಿದ್ದರು.
- ಇವರು ಸೇನೆಗೆ ಹೆಚ್ಚು ಪ್ರಾಮುಖ್ಯತೆ ನೀಡಿದ್ದರು.
- ಸೈನಿಕರಿಗೆ ಉತ್ತಮ ಸ್ಥಾನ ಮಾನ ನೀಡಿದ್ದರು.
- ಸೈನಿಕರು ಕಂಚಿನ ತಲೆರಕ್ಷಾ ಕವಚ ಹಾಗೂ ಲೋಹದ ದೇಹ ಕವಚವನ್ನು ಧರಿಸುತ್ತಿದ್ದರು.
- ಇವರು ಬಳಸುತ್ತಿದ್ದ ಕಂಚಿನ ಚೂರಿಗಳು, ಕೊಡಲಿಗಳು ಬಿಲ್ಲು ಹಾಗೂ ಲೋಹದ ತುದಿ ಹೊಂದಿದ ಬಾಣಗಳು ದೊರೆತಿವೆ.

23)

- ಪೆರು ಭಾಗದಲ್ಲಿ ಹೆಚ್ಚು ಅಭಿವೃದ್ಧಿ ಹೊಂದಿತ್ತು.
- ಎದೆಯ ಕವಚಗಳನ್ನು ಚಿನ್ನದಲ್ಲಿ ರಚಿಸಿದ್ದರು.
- ದೇವಾಲಯಗಳಲ್ಲಿ ಸೂರ್ಯನ ಚಿತ್ರಗಳನ್ನು ಚಿನ್ನದಲ್ಲಿ ರಚಿಸಿದ್ದರು.

- ಅರಮನೆಯ ಆಭರಣಗಳನ್ನು ಚಿನ್ನದಲ್ಲಿ ತಯಾರಿಸಿದ್ದರು.
- ವಿವಿಧ ರೀತಿಯ ಚಿನ್ನದ ಆಭರಣ ತಯಾರಿಸಿದ್ದರು. ಇದು ಚಿನ್ನದ ಆಭರಣ ತಯಾರಿಕೆಯಲ್ಲಿ ಇವರು ಹೊಂದಿದ್ದ ಕಲಾತ್ಮಕತೆಗೆ ಸಾಕ್ಷಿಯಾಗಿದೆ.

24)

- ಸೂರ್ಯ ಇಂಕನ್ನರ ಆರಾಧ್ಯ ದೈವ.
- ವೀರಕೂಚನೆಂಬ ದೇವರು ಸೃಷ್ಟಿಗೆ ಕಾರಣ ಎಂದು ನಂಬಿದ್ದರು.
- ಸೂರ್ಯ ವೀರಕೂಚ ಮತ್ತು ಜನರ ನಡುವಿನ ಸಂಪರ್ಕ ಕೊಂಡಿ ಎಂದು ನಂಬಿದ್ದರು.
- ಇಂಕನ್ನರ ಎಲ್ಲಾ ಕೇಂದ್ರದಲ್ಲೂ ಒಂದು ಸೂರ್ಯ ದೇವಾಲಯವಿತ್ತು.

## ಅಧ್ಯಾಯ 5: ಸನಾತನ ಧರ್ಮ

**ಬಹು ಅಂಶೀಯ ಆಯ್ಕೆ ಪ್ರಶ್ನೆಗಳು :**

1. D) ಅಷ್ಟಾಂಗಿಕ ಮಾರ್ಗಗಳು
2. D) ದರ್ಶನಗಳು
3. D) ಪ್ರಾಚೀನ ಕಾಲದಿಂದಲೂ ಆಚರಣೆಯಲ್ಲಿದೆ.

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಪದ / ವಾಕ್ಯದಲ್ಲಿ ಉತ್ತರಿಸಿ.**

4. ಬಿಳಿ ಉಡುಪು ಧರಿಸಿದ ಜೈನಮುನಿಗಳನ್ನು ಜೈನಧರ್ಮದ ಶ್ವೇತಾಂಬರ ಪಂಗಡದವರೆಂದು ಪರಿಗಣಿಸುತ್ತೇವೆ
5. ವೇದೋತ್ತರ ಕಾಲದ ರಚನೆಗಳು ಮತ್ತು ವೇದೋಪನಿಷತ್ತುಗಳನ್ನು ನೆನಪಿ**ಸಿ**ಕೊ**ಳ್ಳು**ವುದನ್ನು ಸ್ಮೃತಿ ಎನ್ನುವರು

**II** ಕೆಳಗಿನ ಪ್ರಶ್ನೆಗಳಿಗೆ ಎರಡು- ಮೂರು ವಾಕ್ಯಗಳಲ್ಲಿಉತ್ತರಿಸಿ.

6. ಋಗ್ವೇದ**,** ಯಜುರ್ವೇದ**,** ಸಾಮವೇದ**,** ಅಥರ್ವ**ಣ** ವೇದ.

**7.** ಪ್ರಸ್ತುತ ಬೌದ್ಧ ಧರ್ಮವು ಅಸ್ತಿತ್ವದಲ್ಲಿರುವ ದೇಶಗಳು : ಶ್ರೀಲಂಕ, ಬರ್ಮಾ, ಚೀನ, ಭೂತನ್,ಟಿಬೇಟ್, ಜಪಾನ್. ಕಾಂಬೋಡಿಯಾ

**III** ಕೆಳಗಿನ ಪ್ರಶ್ನೆಗಳಿಗೆ ಐದು- ಆರು ವಾಕ್ಯಗಳಲ್ಲಿ ಉತ್ತರಿಸಿ.

**8.** ಗೌತಮ ಬುದ್ಧನು ಬೋಧಿಸಿದ ಅಷ್ಟಾಂಗ ಮಾರ್ಗಗಳಿಂದ

- ದುಃಖವನ್ನು ಗೆಲ್ಲಬಹುದು.
- ಒತ್ತಡಗಳಿಂದ ಜೀವನವನ್ನುನಿಭಾಯಿಸುವುದನ್ನುಕಲಿಯಬಹುದು.
- ಒಳ್ಳೆಯಚಿಂತನೆಗಳು ಮತ್ತು ನಿರ್ಧಾರಗಳಿಂದ ಒತ್ತಡ ಜೀವನವನ್ನು ನಿಭಾಯಿಸಿಕೊಂಡು ಉತ್ತಮ ಬದುಕನ್ನು ಕಟ್ಟಿಕೊಳ್ಳಬಹುದು.

9. ವೇದಕಾಲದ ಸಮಾಜ ವ್ಯವಸ್ಥೆ ಹಾಗೂ ಇಂದಿನ ಸಮಾಜ ವ್ಯವಸ್ಥೆಗೂ ಇರುವ ವ್ಯತ್ಯಾಸ ಹೀಗಿದೆ.

| ವೇದಕಾಲದ ಸಮಾಜ | ಇಂದಿನ ಸಮಾಜ |
|---|---|
| * ಅವಿಭಕ್ತ ಕುಟುಂಬ | * ವಿಭಕ್ತ ಕುಟುಂಬ |

| | |
|---|---|
| * ವರ್ಣವ್ಯವಸ್ಥೆ | * ಜಾತಿ ವ್ಯವಸ್ಥೆ |
| * ಸಂಸ್ಕೃತ ಭಾಷೆ | * ವಿವಿಧ ಭಾಷೆಗಳ ಬಳಕೆ |
| * ಪಶುಪಾಲನೆ ಮತ್ತು ಕೃಷಿ | * ಕೃಷಿ, ಕೈಗಾರಿಕೆ, ವಾಣಿಜ್ಯ ಇತರೆ |
| * ವೈದಿಕ ಸಾಹಿತ್ಯ | * ಪ್ರಾದೇಶಿಕಭಾಷೆಗಳು |
| * ಆಸ್ತಿಯ ಹಕ್ಕು ಸಮುದಾಯಿಕವಾಗಿ | * ಆಸ್ತಿಯಹಕ್ಕು ಖಾಸಗಿ ಸ್ವರೂಪದ್ದಾಗಿದೆ. |

10. ಸನಾತನ ಧರ್ಮದ ವಿಶೇಷತೆಗಳೆಂದರೆ

- ಎಲ್ಲರೂ ಸುಖಿಗಳಾಗಿರಲಿ.
- ಎಲ್ಲರೂ ರೋಗಗಳ ಚಿಂತನೆಗಳಿಂದ ಮುಕ್ತರಾಗಿರಲಿ.
- ಎಲ್ಲರೂ ಶುಭವನ್ನೇ ಕಾಣುವಂತಾಗಲಿ.
- ಯಾರೂ ದುಃಖಿತರಾಗದೇ ಇರಲಿ.
- ಜಗತ್ತಿನ ಸರ್ವಜೀವ ರಾಶಿಗಳಿಗೂ ಸದಾ ಸುಖ, ಶಾಂತಿ ಹಾಗೂ ನೆಮ್ಮದಿಗಳು ಇರಲಿ.

11. ಬುದ್ಧ ಮತ್ತು ಮಹಾವೀರನ ಬೋಧನೆಗಳಿಂದ ಜೀವನದಲ್ಲಿ ಅಳವಡಿಡಿಕೊಳ್ಳಬಹುದಾದ ಮೌಲ್ಯಗಳೆಂದರೆ

- ದುಃಖವನ್ನು ಗೆಲ್ಲಬಹುದು.
- ಒತ್ತಡಗಳಿಂದ ಜೀವನವನ್ನು ನಿಭಾಯಿಸುವುದನ್ನು ಕಲಿಯಬಹುದು.
- ಒಳ್ಳೆಯ ಚಿಂತನೆಗಳು ಮತ್ತು ನಿರ್ಧಾರಗಳಿಂದ ಒತ್ತಡ ಜೀವನವನ್ನು ನಿಭಾಯಿಸಿಕೊಂಡು ಉತ್ತಮ ಬದುಕನ್ನು ಕಟ್ಟಿಕೊಳ್ಳಬಹುದು.
- ಅಹಿಂಸೆ, ಸರಳಜೀವನ, ಆತ್ಮಾವಲೋಕನ, ನೈತಿಕ ನಿಯಮಗಳ ಅನುಕರಣೆ,
- ಸಮಗ್ರತೆ, ಸ್ವಯಂ-ಶಿಸ್ತಿನ ಜೀವನಕ್ಕೆ ಮಾರ್ಗದರ್ಶನ,
- ಸಹಾನುಭೂತಿ, ಸಾಮರಸ್ಯ ಶಾಂತಿ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಉತ್ತೇಜನ.

IV **ಕೆಳಗಿನ ಪ್ರಶ್ನೆಗಳಿಗೆ ಏಳು- ಎಂಟು ವಾಕ್ಯಗಳಲ್ಲಿ ಉತ್ತರಿಸಿ**

12. ಬುದ್ಧನ ಬೋಧನೆಗಳು ಸಮಕಾಲೀನ ಜಾಗತಿಕ ಸಮಸ್ಯೆಗಳನ್ನು ಪರಿಹರಿಸ ಬಲ್ಲವು. ಹೇಗೆಂದರೆ...

ಯುದ್ಧ, ಆರ್ಥಿಕ ಬಿಕ್ಕಟ್ಟು, ಭಯೋತ್ಪಾದನೆ, ಹಿಂಸೆ ಮುಂತಾದ ಜಾಗತಿಕ ಸಮಸ್ಯೆಗೆ ಬೌದ್ಧ ಮತ್ತು ಜೈನ ಧರ್ಮದತತ್ವಗಳ ಪಾಲನೆ ಅಗತ್ಯ. ಆರ್ಥಿಕ ಅಸಮಾನತೆ ಹೋಗಲಾಡಿಲು ಸಾಧ್ಯ.

13. ಸನಾತನ ಧರ್ಮಕ್ಕೆ ಸಂಬಂಧಿಸಿದಂತೆ ವೇದಗಳಲ್ಲಿರುವ ಶಾಂತಿ ಮಂತ್ರದ ಟಿಪ್ಪಣಿ ಹೀಗಿದೆ

- ಎಲ್ಲರೂ ಸುಖಿಗಳಾಗಿರಲಿ.
- ಎಲ್ಲರೂ ರೋಗಗಳ ಚಿಂತನೆಗಳಿಂದ ಮುಕ್ತರಾಗಿರಲಿ.
- ಎಲ್ಲರೂ ಶುಭವನ್ನೇ ಕಾಣುವಂತಾಗಲಿ.
- ಯಾರೂ ದುಃಖಿತರಾಗದೇ ಇರಲಿ.

- ಜಗತ್ತಿನ ಸರ್ವಜೀವ ರಾಶಿಗಳಿಗೂ ಸದಾ ಸುಖ, ಶಾಂತಿ ಹಾಗೂ ನೆಮ್ಮದಿಗಳು ಇರಲಿ.

## ಅಧ್ಯಾಯ 7. ರಾಜ್ಯ ಶಾಸ್ತ್ರದ ಅರ್ಥ & ಪ್ರಾಮುಖ್ಯತೆ

**I. ಬಹು ಆಯ್ಕೆ ಪ್ರಶ್ನೆಗಳು**

1. A) ಅರಿಸ್ಟಾಟಲ್
2. C) ಪ್ಲೇಟೋ
3. A) ಅರ್ಥಶಾಸ್ತ್ರ

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.**

4. ಪಾಲಿಟಿಕ್ಸ್ ಎಂಬ ಪದದ ಮೂಲ <u>ಪೊಲಿಸ್</u> ಆಗಿದೆ
5. ರಾಜ್ಯ ಶಾಸ್ತ್ರಕ್ಕೆ ಸ್ವತಂತ್ರ ಅಧ್ಯಯನದ ಸ್ಥಾನಮಾನವನ್ನು <u>ಗ್ರೀಕರು</u> ನೀಡಿದರು
6. ರಾಜ್ಯ ಮತ್ತು ಮಾನವನ ರಾಜಕೀಯ ಚಟುವಟಿಕೆಗಳ ಕುರಿತು ಅಧ್ಯಯನ ಮಾಡುವ ವಿಷಯವೇ <u>ರಾಜ್ಯಶಾಸ್ತ್ರ</u>.
7. ರಾಜ್ಯಶಾಸ್ತ್ರದ ಅಧ್ಯಯನವನ್ನು ಕ್ರಮಬದ್ಧಗೊಳಿಸಿ ರಾಜ್ಯಶಾಸ್ತ್ರಕ್ಕೆ ತಳಪಾಯ
   ಹಾಕಿದ ಪ್ರಥಮ ಚಿಂತಕ ಅರಿಸ್ಟಾಟಲ್ ಆದ್ದರಿಂದ ಅವರನ್ನು ರಾಜ್ಯಶಾಸ್ತ್ರದ ಪಿತಾಮಹ ಎನ್ನಲಾಗಿದೆ..

**III. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ**

8.
   - ರಾಜ್ಯ ಒಂದರ ಉಗಮ ಮತ್ತು ಬೆಳವಣಿಗೆಯನ್ನು ಅರ್ಥ ಮಾಡಿಕೊಳ್ಳಲು ಸಹಕಾರಿಯಾಗಿದೆ .
   - ರಾಜ್ಯ ಮತ್ತು ಕೇಂದ್ರ ಸರ್ಕಾರದ ರಚನೆ ಮತ್ತು ಕಾರ್ಯಗಳ ಬಗ್ಗೆ ಮಾಹಿತಿ ನೀಡುತ್ತದೆ.
9. ಪಾಲಿಟಿಕ್ಸ್' ಗ್ರಂಥದಲ್ಲಿ ರಾಜ್ಯದ ಉಗಮ ಬೆಳವಣಿಗೆ ಹಾಗೂ ರಾಜ್ಯದ ಕಾರ್ಯಗಳ ಬಗ್ಗೆ ಚರ್ಚಿಸಲಾಗಿದೆ.

IV. **ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ**

10.
ರಾಜ್ಯ ಶಾಸ್ತ್ರದ ಅಧ್ಯಯನ ವಿಷಯಗಳೆಂದರೆ
   - ಮಾನವನ ರಾಜಕೀಯ ಜೀವನ.
   - ರಾಜ್ಯದ ರೂಪುರೇಷೆ .
   - ರಾಜ್ಯ ಮತ್ತು ಸರ್ಕಾರದ ನಡುವಿನ ಸಂಬಂಧ.
   - ರಾಜ್ಯದ ಉಗಮ ಮತ್ತು ಲಕ್ಷಣ.
   - ರಾಜಕೀಯ ಸಂಸ್ಥೆಗಳ ಅಧ್ಯಯನ.
   - ರಾಜ್ಯದ ಆಡಳಿತ ಮತ್ತು
   - ಪೌರರ ಹಕ್ಕು ಬಾಧ್ಯತೆಗಳು

11. ರಾಜ್ಯ ಶಾಸ್ತ್ರಕ್ಕೆ ಗ್ರೀಕರ ಕೊಡುಗೆಗಳು ಹೀಗಿವೆ

- ಗ್ರೀಕ್ ತತ್ವಜ್ಞಾನಿಗಳಾದ ಸಾಕ್ರೆಟಿಸ್, ಪ್ಲೇಟೋ, ಅರಿಸ್ಟಾಟಲ್, ರಾಜಕೀಯ ಚಿಂತಕರಾಗಿದ್ದರು.
- ಪ್ಲೇಟೋನ ರಿಪಬ್ಲಿಕ್ ಕೃತಿಯಲ್ಲಿ ರಾಜ್ಯಶಾಸ್ತ್ರದ ಉಲ್ಲೇಖವಿದೆ .
- ಅರಿಸ್ಟಾಟಲ್ ಪಾಲಿಟಿಕ್ಸ್ ಎಂಬ ಗ್ರಂಥವನ್ನು ರಚಿಸಿದ್ದಾರೆ.
- ಪಾಲಿಟಿಕ್ಸ್ ಗ್ರಂಥದಲ್ಲಿ ರಾಜ್ಯದ ಉಗಮ ಬೆಳವಣಿಗೆ ಮತ್ತು ಕಾರ್ಯಗಳ ಬಗ್ಗೆ ಉಲ್ಲೇಖವಿದೆ.
- ಅರಿಸ್ಟಾಟಲ್ ಇವರಿಗೆ ರಾಜ್ಯಶಾಸ್ತ್ರದ ಪಿತಾಮಹ ಎಂಬ ಗೌರವ ನೀಡಲಾಗಿದೆ .
- ರಾಜ್ಯಶಾಸ್ತ್ರಕ್ಕೆ  ಸ್ವತಂತ್ರ ವಿಜ್ಞಾನದ ಸ್ಥಾನಮಾನ ಕೊಟ್ಟವರೇ ಗ್ರೀಕರು.

**V. ಈ ಕೆಳಗಿನ ಪ್ರಶ್ನೆಗಳಿಗೆ ಏಳು-ಎಂಟು ವಾಕ್ಯಗಳಲ್ಲಿ ಉತ್ತರಿಸಿ.**

12.

ಪ್ರತಿಯೊಬ್ಬರಿಗೂ ರಾಜ್ಯ ಶಾಸ್ತ್ರದ ಜ್ಞಾನ  ಅತ್ಯವಶ್ಯಕ ಏಕೆಂದರೆ

- ರಾಜ್ಯದ ಉಗಮ ಮತ್ತು ಬೆಳವಣಿಗೆ ತಿಳಿಯಲು .
- ಚಕ್ರಾಧಿಪತ್ಯ, ಸ್ವಾತಂತ್ರ್ಯ, ಕಾನೂನು ,ಸಮಾನತೆ ತಿಳಿಯಲು.
- ಉತ್ತಮ ಸರ್ಕಾರ ,ಯುದ್ಧ ,ಶಾಂತಿ ಪರಿಕಲ್ಪನೆಗಳ ಬಗ್ಗೆ ತಿಳಿಯಲು .
- ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಬಗ್ಗೆ ತಿಳಿಯಲು.
- ಆಧುನಿಕ ಕಲ್ಯಾಣ ರಾಜ್ಯ ಸ್ಥಾಪನೆಗೆ ರಾಜಕೀಯ ಪ್ರಜ್ಞೆ ಬೆಳೆಸಿಕೊಳ್ಳಲು.
- ನಾಗರಿಕತ್ವ ಮತ್ತು ನಾಯಕತ್ವದ ಗುಣ ಬೆಳೆಸಿಕೊಳ್ಳಲು.
- ಅಂತರಾಷ್ಟ್ರೀಯ ಸಂಬಂಧಗಳ ಬಗ್ಗೆ ಅರಿಯಲು.

## ಅಧ್ಯಾಯ 8. ಪೌರ ಮತ್ತು ಪೌರತ್ವ.

.

**I. ಬಹು ಆಯ್ಕೆ ಪ್ರಶ್ನೆಗಳು**

1. C) 1955
2. A) ವಿದೇಶಿಯರು
3. C) 51ಎ
4. D) ಅಂತ್ಯಗೊಳಿಸುವಿಕೆ
5. B) ಅಮೆರಿಕ
6. A) ರಕ್ತ ಸಂಬಂಧ

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.**

7. ಭಾರತ ತನ್ನ ಪೌರರಿಗೆ ಏಕ ಪೌರತ್ವ ನೀಡಿದೆ

8. ಜನ್ಮದತ್ತ ಪೌರತ್ವ ಭಾರತದ ಪೌರತ್ವ ಪಡೆಯುವ ಒಂದು ವಿಧಾನವಾಗಿದೆ

9. ಪರಿತ್ಯಾಗ ಭಾರತದ ಪೌರತ್ವ ಕಳೆದುಕೊಳ್ಳುವ ಒಂದು ವಿಧಾನವಾಗಿದೆ

10. ಮೆಕ್ಸಿಕೋ ದೇಶವು ಆಸ್ತಿ ಸಂಪಾದನೆಯ ಮೂಲಕ ಪೌರತ್ವ ನೀಡುವ ನೀತಿ ಹೊಂದಿದೆ.

**III. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ**

11 ಪೌರ ಎಂದು ಕರೆಯಲು ಇರಬೇಕಾದ ಅಂಶಗಗಳೆಂದರೆ ಒಂದು ದೇಶದ ಸದಸ್ಯತ್ವ ಹೊಂದಿ ತಾನು ವಾಸಿಸುವ ದೇಶಕ್ಕೆ ನಿಷ್ಠೆಯಿಂದ ಇದ್ದು ಅಲ್ಲಿ ನೀಡುವ ನಾಗರಿಕ ಮತ್ತು ರಾಜಕೀಯ ಹಕ್ಕುಗಳನ್ನು ಅನುಭವಿಸುವ ಮೂಲಕ ದೇಶ ನೀಡುವ ಮೂಲಭೂತ ಕರ್ತವ್ಯಗಳನ್ನು ನಿರ್ವಹಿಸುವುದು.

14. ಪೌರರಾದವರು ಪಡೆಯುವ ಎರಡು ಸೌಲಭ್ಯಗಳು:

- ರಾಷ್ಟ್ರದಿಂದ ಭದ್ರತೆ ಮತ್ತು ರಕ್ಷಣೆ ಪಡೆಯುತ್ತಾರೆ .
- ಪೌರರಾದವರು ನಾಗರಿಕ ಮತ್ತು ರಾಜಕೀಯ ಹಕ್ಕುಗಳನ್ನು ಅನುಭವಿಸುತ್ತಾರೆ.

15. ಪೌರತ್ವ ಪಡೆಯುವ ಎರಡು ವಿಧಾನಗಳು

- ಸಹಜ ಪೌರತ್ವ
- ಸಹಜೀಕೃತ ಪೌರತ್ವ

14. ಪೌರತ್ವದ ಎರಡು ವಿಧಗಳು A) ಏಕ ಪೌರತ್ವ B) ದ್ವಿ ಪೌರತ್ವ

15. ಪೌರತ್ವ ಕಳೆದುಕೊಳ್ಳುವ ವಿಧಾನಗಳು :
ಪರಿತ್ಯಾಗ, ಅಂತ್ಯಗೊಳಿಸುವಿಕೆ, ನಿರಾಕರಣೆ .

**IV ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ**

16. ಭಾರತದ ಪೌರತ್ವ ಪಡೆಯುವ ವಿಧಾನಗಳು

- ಜನ್ಮದತ್ತ ಪೌರತ್ವ
- ರಕ್ತ ಸಂಬಂಧ
- ನೋಂದಣಿ ಪೌರತ್ವ
- ಸಹಜೀಕೃತ ಪೌರತ್ವ
- ನೂತನ ಭೂಪ್ರದೇಶ ಸೇರ್ಪಡೆಯಿಂದ ಸಿಗುವ ಪೌರತ್ವ

17. ಸಹಜೀಕೃತ ಪೌರತ್ವವೆಂದರೆ ಭಾರತದ ಪೌರತ್ವ ಪಡೆಯಲು ಅನ್ಯದೇಶಿಯರು ರಾಷ್ಟ್ರಪತಿಗಳಿಗೆ ಅರ್ಜಿ ಸಲ್ಲಿಸಿ ಪೌರತ್ವ ಪಡೆಯಬಹುದು. ಇಂತಹ ಸಂದರ್ಭದಲ್ಲಿಅರ್ಜಿದಾರರು ಭಾರತದಲ್ಲಿ ಕನಿಷ್ಠ ಐದು ವರ್ಷಗಳ ಕಾಲ ನೆಲೆಸಿರಬೇಕು ಹಾಗೂ ಭಾರತದ ನಿಬಂಧನೆಗಳನ್ನು ಪೂರೈಸಬೇಕು.

**V. ಕೆಳಗಿನ ಪ್ರಶ್ನೆಗಳಿಗೆ ಏಳು-ಎಂಟು ವಾಕ್ಯಗಳಲ್ಲಿ ಉತ್ತರಿಸಿ**

18. ಪೌರನ ಕರ್ತವ್ಯಗಳು

- ಸಂವಿಧಾನವನ್ನು ಪಾಲಿಸುವುದು.
- ರಾಷ್ಟ್ರಗೀತೆ ಮತ್ತು ರಾಷ್ಟ್ರಧ್ವಜ ಗೌರವಿಸುವುದು,
- ಸ್ವಾತಂತ್ರ ಹೋರಾಟಗಾರರ ಆದರ್ಶ ಪಾಲಿಸುವುದು.
- ಭಾರತದ ಸಾರ್ವಭೌಮತೆ ಮತ್ತು ಅಖಂಡತೆ ಎತ್ತಿ ಹಿಡಿಯುವುದು .
- ದೇಶದ ಸೇವೆಗೆ ಸಿದ್ಧರಿರುವುದು.
- ದೇಶ ರಕ್ಷಿಸುವುದು.
- ದೇಶದ ಸ್ವತ್ತನ್ನು ಕಾಪಾಡುವುದು .
- ಅಹಿಂಸಾ ನೀತಿಯನ್ನು ಅನುಸರಿಸುವುದು

20.

ಪೌರ ಮತ್ತು ವಿದೇಶಿ ನಡುವಿನ ವ್ಯತ್ಯಾಸಗಳು ಹೀಗಿವೆ.

- ಪೌರನು ತನ್ನ ದೇಶದ ಶಾಶ್ವತ ನಿವಾಸಿಯಾಗಿದ್ದು, ವಿದೇಶಿಗ ತಾತ್ಕಾಲಿಕ ನಿವಾಸಿಯಾಗಿರುತ್ತಾನೆ.
- ಪೌರನಿಗೆ ರಾಜಕೀಯ ಹಕ್ಕು ಲಭ್ಯವಿರುತ್ತದೆ. ವಿದೇಶಿಗರಿಗೆ ಈ ಹಕ್ಕು ಲಭ್ಯವಿಲ್ಲ .
- ಪೌರ ತನ್ನ ರಾಜ್ಯಕ್ಕೆ ನಿಷ್ಠೆ ತೋರಿಸುತ್ತಾನೆ. ವಿದೇಶಿಗ ತನ್ನ ರಾಷ್ಟ್ರಕ್ಕೆ ನಿಷ್ಠನಾಗಿರುತ್ತಾನೆ.
- ವಿದೇಶಿಗನಿಗೆ ಕಾನೂನುಬಾಹಿರ ಚಟುವಟಿಕೆಯಿಂದ ದೇಶ ಬಿಟ್ಟು ಹೋಗುವಂತೆ ಆದೇಶಿಸಬಹುದು. ಆದರೆ ಪೌರನಿಗೆ ಆಜ್ಞೆ ವಿಧಿಸುವಂತಿಲ್ಲ

## ಅಧ್ಯಾಯ 9.ಸಮಾಜಶಾಸ್ತ್ರ - ಮಾನವ ಮತ್ತು ಸಮಾಜ

**I. ಬಹು ಆಯ್ಕೆ ಪ್ರಶ್ನೆಗಳು**

1. B) ಆಗಸ್ಟ್ ಕಾಮ್ಟೆ
2. A) ಮುಂಬೈ ವಿಶ್ವವಿದ್ಯಾಲಯ.
3. A) ಶಾಲೆ
4. D) ಜರ್ಮನಿ

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.**

5. ಲ್ಯಾಟಿನ್ ಭಾಷೆಯ ಸೋಶಿಯಸ್ ಮತ್ತು ಗ್ರೀಕ್ ಭಾಷೆಯ ಲೋಗೋಸ್ ಪದಗಳಿಂದ ಉಗಮವಾಗಿದೆ.

6.ಸಾಮಾಜಿಕ ಕ್ರಮ ಮತ್ತು ಸಾಮಾಜಿಕ ಪ್ರಗತಿಗೆ ಸಂಬಂಧಿಸಿದ ವಿಷಯಗಳನ್ನು ಅಧ್ಯಯನ ಮಾಡುವ ವಿಜ್ಞಾನವೇ ,ಸಮಾಜ ಶಾಸ್ತ್ರ .

7. ಮಾನವ ಸಂಘ ಜೀವಿ.

8. ಮಾನವನ ಬೆಳವಣಿಗೆಗೆ ಸಮಾಜ ಅಗತ್ಯವಾಗಿದೆ. ಮಾನವನ ಅಸ್ತಿತ್ವಕ್ಕೆ ಸಾಮಾಜಿಕ ಸಂಬಂಧಗಳು ಅಗತ್ಯ.
ಆದ್ದರಿಂದ ಮಾನವ ಸಮಾಜವನ್ನು ಸಾಮಾಜಿಕ ಸಂಬಂಧಗಳ ಬಲೆ ಎಂದು ಕರೆಯಲಾಗುತ್ತದೆ.

9. ಮಾನವರು ತಮ್ಮ ಭಾವನೆಯನ್ನು ಭಾಷೆಯ ಮೂಲಕ ವ್ಯಕ್ತಪಡಿಸುತ್ತಾರೆ.

10."ಮಾನವ ಸಂಘಜೀವಿಯಾಗಿದ್ದಾನೆ" ಎಂಬ ಹೇಳಿಕೆಯಿಂದ ನಿರೂಪಿಸಿದ್ದಾನೆ.

11. ಕಾರ್ಲ್ ಮಾರ್ಕ್ಸ್ ಸಮಾಜವು ಆರ್ಥಿಕ ಅಸಮಾನತೆಯಿಂದ ಕೂಡಿದೆ ಎಂದು ಪ್ರತಿಪಾದಿಸಿದ್ದಾರೆ.

**III. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ**

16. ಸಮಾಜದ ಮೂಲಕ ಭಾಷೆ, ಓದು, ಆಟ, ಯೋಚನೆ ವಿಧಾನ ,ದೈಹಿಕ ಭಾಷೆ ಮೊದಲಾದವುಗಳನ್ನು ಕಲಿತುಕೊಳ್ಳುವ ಪ್ರಕ್ರಿಯೆಯನ್ನು ಸಾಮಾಜಿಕರಣ ಎನ್ನುವರು.

17. ನಮ್ಮ ಭಾವನೆಗಳಾದ ಹಸಿವು, ನಿದ್ರೆ, ಬಾಯಾರಿಕೆ, ಸಂತೋಷ, ದುಃಖವನ್ನು

ದೈಹಿಕ ಸಂಜ್ಞೆಯ ಮೂಲಕ ತಿಳಿಸಬಹುದು.ಆದರೆ ಆಂಗಿಕ ಭಾಷೆಯ ಮೂಲಕ ಎಲ್ಲವನ್ನು ತಿಳಿಸಲು ಸಾಧ್ಯವಿಲ್ಲ. ಎಲ್ಲಾ ರೀತಿಯ ಭಾವನೆಗಳನ್ನು ಅರ್ಥಮಾಡಿಕೊಳ್ಳಲು ಭಾಷೆ ಅನಿವಾರ್ಯವಾಗಿದೆ .

14.ಮಾನವನಿಗೆ ಆಲೋಚನೆ ಶಕ್ತಿ ಇದೆ, ಪ್ರಾಣಿಗಳಿಗೆ ಇಲ್ಲ.
ಮಾನವನಿಗೆ ಮಾತು ಭಾಷೆಗಳ ಅರಿವಿದೆ, ಪ್ರಾಣಿಗಳಿಗೆ ಮಾತನಾಡಲು ಬರುವುದಿಲ್ಲ.

**IV. ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ**

15.

- ವ್ಯಕ್ತಿತ್ವ ಬೆಳವಣಿಗೆಗೆ ಸಹಕಾರಿಯಾಗಿದೆ.
- ಸಾಮಾಜಿಕ ಸಮಸ್ಯೆಗೆ ಪರಿಹಾರ ನೀಡುತ್ತದೆ.
- ಆಧುನಿಕ ಬೆಳವಣಿಗೆಯ ಜ್ಞಾನ ನೀಡುತ್ತದೆ.
- ಹಿಂದುಳಿದ ಹಾಗೂ ದುರ್ಬಲ ವರ್ಗಗಳ ಏಳಿಗೆಗೆ ಸಹಕಾರಿಯಾಗಿದೆ.
- ಮಾನವನ ಮಾನಸಿಕ ದೈಹಿಕ ಆರೋಗ್ಯಕರ ಬೆಳವಣಿಗೆಗೆ ಸಹಕಾರಿಯಾಗಿದೆ.
- ಮಾನವ ಸಂಘ ಜೀವಿ ಎಂಬುದನ್ನು ಅರಿಯಲು ಸಹಾಯಕವಾಗಿದೆ.

16.

- 1920 ರಲ್ಲಿ ಮಿಡ್ನಾಪುರದಲ್ಲಿ ಕಮಲ ಎಂಬ ಹುಡುಗಿಯು 9 ವರ್ಷಗಳನ್ನು ಕಾಡಿನಲ್ಲಿ ಪ್ರಾಣಿಗಳೊಂದಿಗೆ ಕಳೆದಿದ್ದಳು.
- ಅಲ್ಲಿ ಹಸಿಮಾಂಸ ತಿನ್ನುತ್ತಾ ಪಶುಗಳಂತೆ ನಾಲ್ಕು ಕಾಲುಗಳಲ್ಲಿ ನಡೆಯುತ್ತಿದ್ದಳು.
- ಆನಂತರ ಮನುಷ್ಯ ಸಹವಾಸದಿಂದ ಪದಾರ್ಥಗಳನ್ನು ತಿನ್ನುವುದು ಮಾತನಾಡುವುದನ್ನು ಇತರೆ ಮಕ್ಕಳಂತೆ ವರ್ತಿಸುವುದನ್ನು ಕಲಿತಳು.
- ಈ ಉದಾಹರಣೆಯಿಂದ ಕಂಡುಬರುವುದೇನೆಂದರೆ ಮಾನವ ಸಮಾಜದಲ್ಲಿ ಇಲ್ಲದೆ ಹೋದರೆ ಪ್ರಾಣಿಯಂತೆ ಆಗುತ್ತಾನೆ. ಮಾನವನಿಗೆ ಸಾಮಾಜಿಕ ಪರಿಸರ ಅತ್ಯಗತ್ಯ

17.

- ಭಾವನೆಗಳನ್ನು ವ್ಯಕ್ತಪಡಿಸಲು ಸಾಧ್ಯವಾಗುತ್ತಿರಲಿಲ್ಲ .
- ಸಾಮಾಜಿಕ ಪರಿವರ್ತನೆ ಸಾಧ್ಯವಾಗುತ್ತಿರಲಿಲ್ಲ.
- ನೇರ ಸಂವಹನ ಸಾಧ್ಯವಾಗುತ್ತಿರಲಿಲ್ಲ.
- ಬದುಕು ಪ್ರಾಣಿಗಳಂತಾಗುತ್ತಿತ್ತು.
- ಅಭಿಪ್ರಾಯ ಹಂಚಿಕೆಗೆ ಅವಕಾಶ ಇರುತ್ತಿರಲಿಲ್ಲ .
- ಸಮಾಜ ಮೂಕವೇದನೆ ಅನುಭವಿಸುತ್ತಿತ್ತು

## ಅಧ್ಯಾಯ 10. ಮಾನವ ಮತ್ತು ಸಂಸ್ಕೃತಿ

**ಬಹು ಆಯ್ಕೆ ಪ್ರಶ್ನೆಗಳು**

1. A) ಲ್ಯಾಟಿನ್
2. C) ವೈವಿಧ್ಯಮಯ ಸಂಸ್ಕೃತಿ
3. B) ಲೋಕ ರೂಢಿಗಳು
4. C) ಸಂಸ್ಕೃತಿ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ವರ್ಗಾವಣೆಯಾಗುತ್ತದೆ.

**ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.**

5. ಮಾನವ ಸಮಾಜದ ಸದಸ್ಯನಾಗಿದ್ದುಕೊಂಡು ಕಲಿತುಕೊಳ್ಳುವ ಜ್ಞಾನ, ಕಲೆ, ನೈತಿಕ ನಿಯಮ, ಕಾನೂನು ಮತ್ತು ರೂಢಿ ನೈಪುಣ್ಯತೆಗಳೊಳಗೊಂಡ ಸಂಕೀರ್ಣ ವ್ಯವಸ್ಥೆಯೇ ಸಂಸ್ಕೃತಿ.
6. ವಿವಿಧ ಆಚಾರ- ವಿಚಾರ, ರೂಢಿ, ಸಂಪ್ರದಾಯ, ಉಡುಗೆ-ತೊಡುಗೆ, ನಂಬಿಕೆ, ಮೌಲ್ಯ ಮತ್ತು  ಭಾಷೆಯನ್ನು ಹೊಂದಿರುವ ಸಂಸ್ಕೃತಿಯನ್ನು  ವೈವಿಧ್ಯಮಯ ಸಂಸ್ಕೃತಿ ಎನ್ನುವರು.
7. ಊಟ ಮಾಡುವುದು ಹಾಗೂ  ನಿದ್ರಿಸುವುದು ಲೋಕರೂಢಿಗೆ ಎರಡು ಉದಾಹರಣೆಗಳಾಗಿವೆ.
8. ವಿಭಿನ್ನ ಭಾಷೆಯ ಬಳಕೆ, ವಿಭಿನ್ನ ರೀತಿಯ ಉಡುಗೆ ತೊಡುಗೆಗಳನ್ನು ಧರಿಸುವುದು ಹಾಗೂ ವಿವಿಧ ರೀತಿಯ ಹಬ್ಬಗಳನ್ನು ಆಚರಿಸುವುದು.

**ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

9.
   - ಪರಸ್ಪರ ಸಹಕಾರ ಕಷ್ಟದಲ್ಲಿರುವವರಿಗೆ ಸ್ಪಂದಿಸುವುದು.
   - ಸಹಬಾಳ್ವೆ .
   - ಗುರು ಹಿರಿಯರಿಗೆ ಗೌರವ.
   - ಸತ್ಯ ಮತ್ತು ಶಾಂತಿಯ ತತ್ವ.
   - ಪ್ರಾಮಾಣಿಕತೆ .

10.
   - ಭಾಷೆಯನ್ನು ಹಿರಿಯರಿಂದ ಕಲಿಯುತ್ತಾರೆ.
   - ಹಬ್ಬಗಳ ಆಚರಣೆಯನ್ನು ಅನುಕರಿಸುತ್ತಾರೆ.
   - ಹಿರಿಯರ ನಡೆ-ನುಡಿ ಆಚಾರ ವಿಚಾರಗಳನ್ನು  ಅನುಕರಿಸುತ್ತಾರೆ.
   - ಉಡುಗೆ ತೊಡುಗೆಗಳನ್ನು  ಹಿರಿಯರಿಂದ ನೋಡಿ ಕಲಿಯುತ್ತಾರೆ.
   - ಉತ್ತಮ ಮೌಲ್ಯ ಆದರ್ಶಗಳನ್ನು ಕಲಿಯುತ್ತಾರೆ .

11.
   - ಇತರರ ಸಂಸ್ಕೃತಿಯಲ್ಲಿ ಒಳ್ಳೆಯ ಅಂಶಗಳನ್ನು ಪ್ರಶಂಶಿಸುವುದು.
   - ಇತರರ ಒಳ್ಳೆಯ ಆಚಾರ ವಿಚಾರಗಳನ್ನು ಅಳವಡಿಸಿಕೊಳ್ಳುವುದು.
   - ಇತರರ ಆಚರಣೆಗಳಲ್ಲಿ ಪಾಲ್ಗೊಳ್ಳುವುದು.
   - ಇತರರ ಸಾಂಸ್ಕೃತಿಕ ಆಚರಣೆಗಳನ್ನು ಪ್ರೋತ್ಸಾಹಿಸುವುದು.
   - ನಮ್ಮ ಮನೆಯ ಆಚರಣೆಗೆ ಇತರರನ್ನು ಆಹ್ವಾನಿಸುವುದು.
   - ಪರಸ್ಪರ ಆಚರಣೆಯಲ್ಲಿನ ಸಾಮ್ಯತೆ ತಿಳಿಸುವುದು.

- ಧರ್ಮ ಜಾತಿ ಭೇದ ಮರೆತು ಊರಿನ ಜಾತ್ರೆ, ಉತ್ಸವಗಳಲ್ಲಿ ಪಾಲ್ಗೊಳ್ಳುವುದು

12.

- ಭಾರತದಲ್ಲಿ ವಿವಿಧ ಧರ್ಮದ ಜನರಿದ್ದು ಅವರಲ್ಲಿ ಏಕತೆ ಇದೆ.
- ಭಾರತದಲ್ಲಿ ವಿವಿಧ ಮತ ಭಾಷೆಯ ಜನರಿದ್ದು ಏಕತೆ ಇದೆ.
- ವಿವಿಧ ಪ್ರಾದೇಶಿಕ ಹಿನ್ನೆಲೆ ಇರುವ ಜನರಿದ್ದು ಏಕತೆ ಇದೆ.
- ವಿವಿಧ ಜನಾಂಗೀಯ ಹಿನ್ನಲೆಯುಳ್ಳ ಜನರಿದ್ದು ಏಕತೆ ಇದೆ.
- ವಿವಿಧ ಸಂಸ್ಕೃತಿ ಹಿನ್ನೆಲೆಯುಳ್ಳ ಜನರಿದ್ದು ಏಕತೆ ಇದೆ.
- ವಿವಿಧ ಸಂಪ್ರದಾಯದ ಜನರಿದ್ದು ಏಕತೆ ಇದೆ.
- ವಿವಿಧ ಬಣ್ಣದ ಜನರಿದ್ದು ಏಕತೆ ಇದೆ.
- ವಿವಿಧ ರೀತಿಯ ಭೌಗೋಳಿಕ ಪರಿಸರದಲ್ಲಿದ್ದರೂ ಏಕತೆ ಇದೆ.

## ಅಧ್ಯಾಯ 10-ಭೂಮಿ ನಮ್ಮ ಜೀವಂತ ಗ್ರಹ.

**ಬಹು ಆಯ್ಕೆ ಪ್ರಶ್ನೆಗಳು**

1. B) ಐದನೇ ದೊಡ್ಡ ಗ್ರಹ
2. A) ಪೆಸಿಫಿಕ್ ಸಾಗರ
3. A) ಶೇಕಡಾ 81 ಭಾಗ
4. B) 110.4 km
5. A) 0 ಡಿಗ್ರಿ ರೇಖಾಂಶ
6. C) 5 ಗಂಟೆ 30 ನಿಮಿಷಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.**

1. ಭೂಮಿಯ ವ್ಯಾಸವು ಸೂರ್ಯನಿಗಿಂತ 107 ಪಟ್ಟು ದೊಡ್ಡದಿದೆ
2. ಭೂಮಿಯ ಮೇಲೆ ಶೇಕಡ 70.78 ಭಾಗ ನೀರು ಆವರಿಸಿದೆ.
3. ಭೂ ಭಾಗವನ್ನು ಏಳು ಖಂಡಗಳಾಗಿ ವಿಂಗಡಿಸಲಾಗಿದೆ.
4. ಆರ್ಕಿಟೆಕ್ ಸಾಗರವು ಭೂಮಿಯ ಮೇಲಿನ ಚಿಕ್ಕ ಸಾಗರ.
5. ದಕ್ಷಿಣಾರ್ಧಗೋಳದಲ್ಲಿ 81% ಭಾಗ ಜಲರಾಶಿ ಇರುವುದರಿಂದ ಇದನ್ನು ಜಲಪ್ರಧಾನಗೋಳ ಎನ್ನುವರು.
6. ಭೂಮಿಯು ತನ್ನ ಅಕ್ಷದ ಸುತ್ತ ಒಂದು ಸುತ್ತು ಪೂರ್ಣಗೊಳಿಸಲು 24 ಗಂಟೆಗಳ ಸಮಯ ತೆಗೆದುಕೊಳ್ಳುತ್ತದೆ.
7. ರಷ್ಯಾ 11 ವೇಳಾ ವಲಯಗಳನ್ನು ಹೊಂದಿದೆ.
8. ಭಾರತದ ಪ್ರಮಾಣಿತ ವೇಳೆ $82.30^0$ ಡಿಗ್ರಿ ಪೂರ್ವ ರೇಖಾಂಶವನ್ನಾಧರಿಸಿದೆ.

**II. ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1. ಭೂಮಿಯನ್ನು ಜೀವಂತ ಗ್ರಹ, ಜಲಾವೃತ ಗ್ರಹ, ವಿಶಿಷ್ಟ ಗ್ರಹ, ನೀಲಿ ಗ್ರಹ ಎಂದು ಕರೆಯಲಾಗುತ್ತದೆ.
2. ಭೂಗೋಳದ ಮೇಲೆ ಪೂರ್ವ ಪಶ್ಚಿಮವಾಗಿ ಎಳೆದಿರುವ ಕಾಲ್ಪನಿಕ ರೇಖೆಗಳು

ಅಕ್ಷಾಂಶಗಳು.

ಭೂಗೋಳದ ಮೇಲೆ ಸಮಭಾಜಕ ವೃತ್ತವನ್ನು ಸಮಾನಾಂತರವಾಗಿ ಛೇದಿಸಿ ಉತ್ತರ ಮತ್ತು ದಕ್ಷಿಣ ಧ್ರುವಗಳನ್ನು ಸಂಧಿಸುವ ಕಾಲ್ಪನಿಕ ರೇಖೆಗಳು ರೇಖಾಂಶಗಳು.

3. ಏಕರೂಪ ವೇಳೆಯು ಆ ದೇಶದ ಮಧ್ಯದಲ್ಲಿ ಹಾದುಹೋಗುವ ರೇಖಾಂಶ ವೇಳೆಯನ್ನಾಧರಿಸುತ್ತದೆ. ಅಥವಾ ಆ ರೇಖಾಂಶದ ಮೇಲಿರುವ ಪ್ರಮುಖ ನಗರದ ವೇಳೆಯಾಗಿರುತ್ತದೆ. ಈ ವೇಳೆಯನ್ನು ದೇಶದ ಎಲ್ಲಾ ಭಾಗದಲ್ಲೂ ಅನುಸರಿಸು ವುದರಿಂದ ಇದನ್ನು ಪ್ರಮಾಣ ವೇಳೆ ಎನ್ನುವರು.

4 ಸೌರವ್ಯೂಹದಲ್ಲಿ ಜೀವಿಗಳನ್ನು ಹೊಂದಿರುವ ಏಕೈಕ ಗ್ರಹ ಭೂಮಿ. ಇದು ಎಲ್ಲಾ ಬಗೆಯ ಜೀವಿಗಳಿಗೆ ವಾಸಸ್ಥಾನವಾಗಿದೆ. ಸಸ್ಯಗಳು ಪ್ರಾಣಿಗಳು ಮಾನವ ಜೀವಿಗಳು ಇಲ್ಲಿವೆ. ಇದಕ್ಕೆ ಕಾರಣ ಭೂಮಿ ಮತ್ತು ಸೂರ್ಯನ ನಡುವಿನ ಅನುಕೂಲಕರ ಅಂತರವಾಗಿದೆ. ಆದ್ದರಿಂದ ಭೂಮಿಯು ಒಂದು ವಿಶಿಷ್ಟ ಗ್ರಹವಾಗಿದೆ.

**ಈ ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ.**

1. ಏಷ್ಯಾ ಖಂಡ, ಆಫ್ರಿಕಾ ಖಂಡ, ಉತ್ತರ ಅಮೆರಿಕ ಖಂಡ, ದಕ್ಷಿಣ ಅಮೆರಿಕ ಖಂಡ ಅಂಟಾರ್ಟಿಕಾ ಖಂಡ, ಯುರೋಪ್ ಖಂಡ ಮತ್ತು ಆಸ್ಟ್ರೇಲಿಯಾ ಖಂಡ.
2. ಭೂಮಿಯು ಗೋಳಾಕಾರವಾಗಿದೆ. ಆದ್ದರಿಂದ ಸ್ಥಳ ದಿಕ್ಕು ಮತ್ತು ಅಂತರವನ್ನು ಅಳೆಯುವುದು ಕಠಿಣ. ಆದ್ದರಿಂದ ನಿರ್ದಿಷ್ಟ ಸ್ಥಳ ದಿಕ್ಕು ಸನ್ನಿವೇಶ ಮತ್ತು ಅಂತರಗಳನ್ನು ಅಳೆಯಲು ಕಾಲ್ಪನಿಕ ರೇಖೆಗಳನ್ನು ಎಳೆಯಲಾಗಿದೆ. ಪೂರ್ವ ಪಶ್ಚಿಮವಾಗಿ ಅಕ್ಷಾಂಶಗಳನ್ನು ಹಾಗೂ ಉತ್ತರ ದಕ್ಷಿಣವಾಗಿ ರೇಖಾಂಶಗಳನ್ನು ಎಳೆಯಲಾಗಿದೆ. ಇವುಗಳು ಭೌಗೋಳಿಕ ನಿರ್ದೇಶಾಂಕಗಳಾಗಿದ್ದು ಇವುಗಳ ಮೂಲಕ ಗುರುತಿಸಲಾಗುತ್ತದೆ.
3. ಗ್ರೀನ್ ವಿಚ್ ರೇಖಾಂಶದ ವಿರುದ್ಧವಾದ 180 ಡಿಗ್ರಿ ರೇಖಾಂಶದ ಮೇಲೆ ಪ್ರಪಂಚ ಪರ್ಯಟನೆ ಮಾಡುವವರು ತಮ್ಮ ಅನುಕೂಲಕ್ಕೆ ದಿನ ಮತ್ತು ದಿನಾಂಕವನ್ನು ಸರಿದೂಗಿಸಿಕೊಳ್ಳಬೇಕಾಗುತ್ತದೆ. ಇದು ಪೆಸಿಫಿಕ್ ಸಾಗರದ ಮೂಲಕ ಹಾದುಹೋಗುವ 180 ಡಿಗ್ರಿ ರೇಖಾಂಶದ ಮೇಲೆ ಇದ್ದರೂ ಕೆಲವು ಭೂ ಭಾಗಗಳನ್ನು ತಪ್ಪಿಸಲು ಅಲ್ಲಲ್ಲಿ ಅಂಕು ಡೊಂಕಾಗಿ ಎಳೆಯಲಾಗಿದೆ. ಈ ಕಾಲ್ಪನಿಕ ರೇಖಾಂಶವನ್ನು ಅಂತರ ರಾಷ್ಟ್ರೀಯ ದಿನ ರೇಖೆ ಎನ್ನುವರು.
4.
   1. $0^0$ ಡಿಗ್ರಿ ಅಕ್ಷಾಂಶ ಸಮಭಾಜಕ ವೃತ್ತ
   2. $23.30^0$ ಡಿಗ್ರಿ ಉತ್ತರ ಅಕ್ಷಾಂಶ ಕರ್ಕಾಟಕ ಸಂಕ್ರಾಂತಿ ವೃತ್ತ
   3. $23.30^0$ ಡಿಗ್ರಿ ದಕ್ಷಿಣ ಅಕ್ಷಾಂಶ ಮಕರ ಸಂಕ್ರಾಂತಿ ವೃತ್ತ
   4. $66.30^0$ ಡಿಗ್ರಿ ಉತ್ತರ ಅಕ್ಷಾಂಶ ಆರ್ಕಟಿಕ್ ವೃತ್ತ
   5. $66.30^0$ ಡಿಗ್ರಿ ದಕ್ಷಿಣ ಅಕ್ಷಾಂಶ ಅಂಟಾರ್ಟಿಕಾ ವೃತ್ತ
   6. $90^0$ ಡಿಗ್ರಿ ಉತ್ತರ ಅಕ್ಷಾಂಶ ಉತ್ತರಧ್ರುವ
   7. $90^0$ ಡಿಗ್ರಿ ದಕ್ಷಿಣ ಅಕ್ಷಾಂಶ ದಕ್ಷಿಣ ಧ್ರುವ

**ಈ ಕೆಳಗಿನ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯಗಳಲ್ಲಿ ಉತ್ತರಿಸಿ.**

1.

- ಸಮಭಾಜಕ ವೃತ್ತದಿಂದ $23.30^0$ ಉತ್ತರ ಮತ್ತು ದಕ್ಷಿಣ ಅಕ್ಷಾಂಶಗಳು ಸೂರ್ಯನ ಶಾಖವನ್ನು

- ಅಧಿಕವಾಗಿ ಪಡೆಯುತ್ತವೆ.
- *ಈ ಭಾಗವನ್ನು ಉಷ್ಣವಲಯವೆಂದು ಪರಿಗಣಿಸಲಾಗಿದೆ.
- ಇಲ್ಲಿ ಉಷ್ಣಾಂಶ ಅಧಿಕವಾಗಿರುತ್ತದೆ. ಅದೇ ರೀತಿ $23.30^0$ ಡಿಗ್ರಿ ಇಂದ $66.30^0$ಡಿಗ್ರಿವರೆಗೆ ಸೂರ್ಯನ
- ಶಾಖವು ಸಮ ಉಷ್ಣವಾಗಿ ಪಡೆಯುವ ಪ್ರದೇಶಗಳಾಗಿವೆ.
- ಉತ್ತರ ಮತ್ತು ದಕ್ಷಿಣ ಗೋಳಾರ್ಧದ ಮೇಲೆ ಎರಡರಲ್ಲೂ ಈ ವಲಯವನ್ನು ಸಮಶೀತೋಷ್ಣ ವಲಯವೆಂದು ಪರಿಗಣಿಸುತ್ತೇವೆ .
- $66.30^0$ ಡಿಗ್ರಿ ಇಂದ $90^0$ ಡಿಗ್ರಿ ಉತ್ತರ ಮತ್ತು ದಕ್ಷಿಣದ ವರೆಗೆ ಶೀತ ವಲಯಗಳೆಂದು
- ಪರಿಗಣಿಸುತ್ತೇವೆ.
- ಇದರ ಆಧಾರದ ಮೇಲೆ ಒಂದು ಪ್ರದೇಶದ ವಾಯುಗುಣ ನಿರ್ಧರಿಸುವಲ್ಲಿ ಅಕ್ಷಾಂಶ ಮತ್ತು ರೇಖಾಂಶಗಳು ಸಹಕಾರಿಯಾಗಿವೆ.

2.

- $180^0$ ಡಿಗ್ರಿ ರೇಖಾಂಶವನ್ನು ಅಂತರ ರಾಷ್ಟ್ರೀಯ ದಿನಾಂಕ ರೇಖೆ ಎಂದು ಪರಿಗಣಿಸಲಾಗಿದೆ.
- ಅದು $0^0$ ಡಿಗ್ರಿ ರೇಖಾಂಶದ ವಿರುದ್ಧವಾಗಿ ಭೂಮಿಯ ಪೆಸಿಫಿಕ್ ಸಾಗರದ ಮಧ್ಯಭಾಗದಲ್ಲಿ ಹಾದು ಹೋಗುತ್ತದೆ.
- ಕೆಲವು ಭೂಭಾಗಗಳನ್ನು ತಪ್ಪಿಸಲು ಅಲ್ಲಲ್ಲಿ ಇದನ್ನು ಅಂಕುಡೊಂಕಾಗಿ ಎಳೆಯಲಾಗಿದೆ.
- ಅದರ ಪೂರ್ವದಿಂದ ಪಶ್ಚಿಮಕ್ಕೆ ಹೋದಂತೆ ಒಂದು ದಿನ ವನ್ನು ಕಳೆದುಕೊಳ್ಳಬೇಕಾಗುತ್ತದೆ.
- ಅದೇ ರೀತಿ ಈ ರೇಖೆಯನ್ನು ಪಶ್ಚಿಮದಿಂದ ಪೂರ್ವಕ್ಕೆ ದಾಟಿದಾಗ ಒಂದೇ ದಿನವನ್ನು ಎರಡು ಬಾರಿ ಪಡೆಯುತ್ತದೆ .
- ಆದ್ದರಿಂದ ಈ ರೇಖೆಯ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಹಾದು ಹೋಗುವಾಗ ಸಮಯ ಮತ್ತು ದಿನಾಂಕವನ್ನು ಸರಿಪಡಿಸಿಕೊಳ್ಳಲು ಸಹಾಯಕವಾಗಿದೆ.

## ಅಧ್ಯಾಯ 12. ಶಿಲಾಗೋಳ

**ಬಹು ಆಯ್ಕೆ ಪ್ರಶ್ನೆಗಳು**

1. A) ನಾಯಿಕೊಡೆ, ಶಿಲಾಪೀಠ, ಮರಳುದಿಣ್ಣೆ ,ಲೋಯಿಸ್ ಮೈದಾನ.
2. A) ಕರ್ನಾಟಕ
3. C) ಜಿಪ್ಸಂ
4. C)ಮೌಂಟ್ ವೆಸುವಿಯಸ್
5. D)ಗೌರಿಬಿದನೂರು
6. B) ಆಂಧ್ರಪ್ರದೇಶ

**I. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.**

7. ಭೂಮಿಯ ಅತ್ಯಂತ ಮೇಲ್ಭಾಗದ ಘನ ಪದರವನ್ನು ಶಿಲಾಗೋಳ ಎನ್ನುವರು.
8. ಭೂಮಿಯು 460 ಕೋಟಿ ವರ್ಷ ಹಳೆಯದಾಗಿದೆ.
9. ಭೂಕವಚವು ಸಿಲಿಕ, ಅಲ್ಯೂಮಿನಿಯಂ, ಮೆಗ್ನೀಷಿಯಂ ಗಳಿಂದ ಕೂಡಿದೆ

10. ಭೂಕವಚ ಮತ್ತು ಮ್ಯಾಂಟಲ್ ಸೇರುವ ವಲಯವನ್ನು ಮೋಹೋ ವಲಯ ಎನ್ನುವರು.

11. ಅಂತಸ್ಸರಣ ಶಿಲೆಗೆ ಒಂದು ಉದಾಹರಣೆ ಗ್ರಾನೈಟ್.

12. ಭೂಮಿಯ ಒಳಭಾಗದಲ್ಲಿ ಶಿಲಾವಸ್ತುಗಳು ಕರಗಿ ದ್ರವ ಅಥವಾ ಅರೆ ದ್ರವ ರೂಪದಲ್ಲಿರುವುದನ್ನು ಮ್ಯಾಗ್ಮಾ ಎನ್ನುವರು

13. ನದಿ ಹರಿಯುವ ಮಾರ್ಗವನ್ನು ನದಿ ಪಾತ್ರ ಎನ್ನುವರು.

14. ನೀರು ಕಲುಷಿತಗೊಳ್ಳುವುದನ್ನು ಜಲಮಾಲಿನ್ಯ ಎನ್ನುವರು.

15. ಅಲಿಕೆಯಾಕಾರದ ಜ್ವಾಲಾಮುಖಿಯ ಬಾಯಿಯನ್ನು ಜ್ವಾಲಾಮುಖಿ ಕುಂಡ ಎನ್ನುವರು

16. ಭೂಕಂಪನದ ತೀವ್ರತೆ ಅಳೆಯುವ ಮಾಪನವನ್ನು ರಿಕ್ಟರ್ ಮಾಪನ ಎನ್ನುವರು.

II. **ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

16. ಭೂಮಿಯ ಅಂತರಾಳದ ವಿವಿಧ ಪದರಗಳು ಭೂಕವಚ, ಮ್ಯಾಂಟಲ್ ಮತ್ತು ಕೇಂದ್ರಗೋಳ.

17. ಭೂಮಿಯ ಅಂತರಾಳದ ಎರಡನೇ ಪದರ ಮ್ಯಾಂಟಲ್. ಇದರ ಎರಡು ಭಾಗಗಳು ಏಸ್ತನೋ ಸ್ಪಿಯರ್ ಮತ್ತು ಮೆಸೋಸ್ಪಿಯರ್ .

19. ಶಿಲೆಗಳನ್ನು ಮೂರು ವಿಧಗಳಾಗಿ ವಿಂಗಡಿಸಲಾಗಿದೆ
ಅಗ್ನಿಶಿಲೆಗಳು, ಕಣ ಶಿಲೆಗಳು, ರೂಪಾಂತರ ಶಿಲೆಗಳು.

20. ಭೂಕವಚದ ಎರಡು ಶಕ್ತಿಗಳು ಅಂತರ್ಜನಿತ ಶಕ್ತಿ ಮತ್ತು ಬಹಿರ್ಜನಿತ ಶಕ್ತಿ

21. ಮೇಲಿಂದ ಮೇಲೆ ಪದೇ ಪದೇ ಸ್ಪೋಟಿಸುವ ಜ್ವಾಲಾಮುಖಿಗಳು ಜಾಗೃತ ಜ್ವಾಲಾಮುಖಿಗಳು. ಉದಾಹರಣೆ -ಹವಾಯಿ ದ್ವೀಪದ ಮೌನ ಲೋವ.

22. ಶಿಲೆಗಳು ಒಡೆದು ಚೂರಾಗುವ ಹಾಗೂ ಶಿಲೆಗಳು ಕ್ಷೀಣಿಸುವ ಸ್ವಾಭಾವಿಕ ಪ್ರಕ್ರಿಯೆಗೆ ಶಿಥಿಲೀಕರಣ ಎನ್ನುವರು.

III. **ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿ.**

23. ಮಳೆಯ ನೀರು ವಾಯುಮಂಡಲದ ಅನಿಲಗಳೊಡನೆ ಸೇರಿ ಶಿಲೆಗಳನ್ನು ಒಡೆಯುವ ಪ್ರಕ್ರಿಯೆಯನ್ನು ರಾಸಾಯನಿಕ ಶಿಥಲೀಕರಣ ಎನ್ನುವರು.
ಇದರ ನಾಲ್ಕು ವಿಧಗಳು ಆಕ್ಸಿಡೇಶನ್, ಹೈಡ್ರೇಶನ್, ಸಲ್ಯೂಷನ್ ಮತ್ತು ಕಾರ್ಬೋನೇಶನ್.

24.ಪರ್ವತದ ಅತಿ ಎತ್ತರದ ಭಾಗಗಳಲ್ಲಿ ಮತ್ತು ಧ್ರುವ ಪ್ರದೇಶದ ಮಂಜುಗಡ್ಡೆ ಇಳಿಜಾರಿನವರೆಗೆ ಜಾರುವುದನ್ನು ಹಿಮನದಿ ಎನ್ನುವರು.
ಹಿಮನದಿಯ ಮುಖ್ಯ ವಿಧಗಳು ಖಂಡಾಂತರ ಹಿಮ ನದಿ ಮತ್ತು ಕಣಿವೆ ಹಿಮ ನದಿ.

25.

- ನಿರಂತರ ಚಿಲುಮೆ
- ನಿಯತಕಾಲಿಕ ಚಿಲುಮೆ
- ಬಿಸಿ ನೀರಿನ ಚೆಲುವೆಗಳು
- ಆರ್ಟೆಸಿಯನ್ ಬಾವಿ.

26.

- ಸಸ್ಯವರ್ಗ, ಪ್ರಾಣಿ ವರ್ಗ ಮತ್ತು ಮಾನವನಿಂದ ಶಿಲೆಗಳು ಒಡೆದು ಚೂರಾಗುವುದೇ ಜೈವಿಕ
- ಶಿಥಿಲೀಕರಣ.
- ಇದರಲ್ಲಿ ಭೌತಿಕ ಮತ್ತು ರಾಸಾಯನಿಕ ಕ್ರಿಯೆಗಳೆರಡರಿಂದಲೂ ಜೈವಿಕ ಶಿತಿಲೀಕರಣವಾಗುತ್ತದೆ .
- ಸಸ್ಯಗಳ ಬೇರುಗಳು ಬೆಳೆದು ದಪ್ಪವಾಗುವುದರಿಂದ ಬಿಲದಲ್ಲಿ ವಾಸಿಸುವ ಪ್ರಾಣಿಗಳಿಂದ ಗಣಿಗಾರಿಕೆ ಕಟ್ಟಡ ನಿರ್ಮಾಣಗಳಿಂದ ಜೈವಿಕ ಶಿಥಿಲೀಕರಣವಾಗುತ್ತದೆ .

**ಈ ಕೆಳಗಿನ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯಗಳಲ್ಲಿ ಉತ್ತರಿಸಿ.**

**27.**

- ಜನಸಂಖ್ಯೆ ಹೆಚ್ಚಳ
- ಕೈಗಾರಿಕೀಕರಣ
- ನಗರೀಕರಣ
- ಅರಣ್ಯ ನಾಶ ,ಅತಿವೃಷ್ಟಿ, ಅನಾವೃಷ್ಟಿ
- ಗಣಿಗಾರಿಕೆ
- ಪರಿಸರ ಮಾಲಿನ್ಯ, ಭೂಮಾಲಿನ್ಯ, ಜಲಮಾಲಿನ್ಯ ಮತ್ತು ವಾಯುಮಾಲಿನ್ಯ
- ಭೂ ಸ್ವರೂಪ ಬದಲಿಸುತ್ತಿರುವುದು
- ಈ ಮೇಲಿನ ಮಾನವನ ಕೃತ್ಯಗಳಿಂದ ನೈಸರ್ಗಿಕ ವಿಪತ್ತುಗಳು ಹೆಚ್ಚು ಸಂಭವಿಸುತ್ತದೆ.

28.

- ಈ ಬಗ್ಗೆ ಮುನ್ಸೂಚನೆ ನೀಡುವುದು.
- ಭೂಕಂಪನ ವಲಯಗಳಿಂದ ವಸತಿ ಪ್ರದೇಶಗಳನ್ನು ದೂರ ಇರಿಸುವುದು.
- ಭೂಕಂಪನ ನಿರೋಧಕ ಕಟ್ಟಡಗಳನ್ನು ನಿರ್ಮಿಸುವುದು .
- ಭೂಕಂಪ ಸಂಭವಿಸಿದ ಸಂದರ್ಭದಲ್ಲಿ ಮನೆಯಲ್ಲಿಯೇ ಸುರಕ್ಷತೆ ಪಡೆದುಕೊಳ್ಳುವುದು .
- ಪಾಯಕಾರಿ ಪ್ರದೇಶಗಳಲ್ಲಿ ವಾಸ ವಿರದಿರುವುದು
- ಭೂಕಂಪನ ಸಂಭವಿಸಿದಾಗ ಕಿಟಕಿ ಗಾಜು ಗೋಡೆಗಳ ಹತ್ತಿರ ವಿರದಂತೆ ಜಾಗೃತಿ ವಹಿಸುವುದು .
- ಭೂಕಂಪನದಿಂದ ಹಾನಿಗೊಳಗಾದ ಸೇತುವೆ ಮತ್ತು ರಸ್ತೆಗಳ ಬದಿ ಹೋಗದಿರುವುದು.

## ಅಧ್ಯಾಯ 13.ವಾಯುಗೋಳ

**I. ಬಹು ಆಯ್ಕೆ ಪ್ರಶ್ನೆಗಳು**

1. B)ರಾಜಸ್ಥಾನದ ಗಂಗಾ ನಗರ
2. A)ವಾಯುಭಾರ ಮಾಪಕ
3. C)40ರ ಅಬ್ಬರದ ಗಾಳಿ
4. A)ಸೈಕ್ಲೋನ್,
5. B)ಪವನ ದಿಕ್ಸೂಚಿ
6. B)ಲೂ
7. B)ಚಿತ್ರದುರ್ಗ
8. A)ಮೇಘಾಲಯದ ಮೌಸಿನ್ ರಾಮ್

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.**

1. ವಾಯುಗೋಳದ ದಪ್ಪ ಸುಮಾರು ಒಂದು ಸಾವಿರ ಕಿಲೋಮೀಟರ್ ಇದೆ.
2. ವಾಯುಮಂಡಲದಲ್ಲಿ ನೈಟ್ರೋಜನ್ ಅನಿಲದ ಪ್ರಮಾಣ ಶೇಕಡ 78.08.
3. ವಾಯುಮಂಡಲದ ಬಾಹ್ಯ ಮಂಡಲದಲ್ಲಿ ವಾಯುವಿನ ಒತ್ತಡ ಕಡಿಮೆ ಇರುತ್ತದೆ.
4. ಭೂಮಿಯು ಸೂರ್ಯನಿಂದ ಪಡೆಯುವ ಶಾಖವನ್ನು ಸೂರ್ಯಜನ್ಯ ಶಾಖವೆಂದು ಕರೆಯುವರು.
5. ಉಷ್ಣವಲಯ.
6. ಒಂದೇ ಪ್ರಮಾಣದ ಒತ್ತಡ ಹೊಂದಿರುವ ಸ್ಥಳಗಳನ್ನು ಸೇರಿಸುವಂತೆ ಎಳೆಯಬಹುದಾದ ರೇಖೆಗಳು.
7. ಪವನ ವೇಗ ಮಾಪಕ /ಅನಿಮೋ ಮೀಟರ್.
8. ಭಾರತದಲ್ಲಿ ಬೀಸುವ ಮಾರುತಗಳು ಮಾರುತಗಳಿಗೆ ಉದಾಹರಣೆ ನಿಯತಕಾಲಿಕ ಮಾರುತಗಳು.
9. ಹೆಚ್ಚು ಒತ್ತಡ ವಲಯದಿಂದ ಕಡಿಮೆ ಒತ್ತಡ ಕೇಂದ್ರದ ಕಡೆಗೆ ಬೀಸುವ ಮಾರುತಗಳೇ ಚಂಡಮಾರುತಗಳು
10. ವಾತಾವರಣದಲ್ಲಿನ ತೇವಾಂಶ ಆರ್ದ್ರತೆ ಎನ್ನುವರು.

**III ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1. ವಾಯುಮಂಡಲವನ್ನು ಅದರ ಲಕ್ಷಣವನ್ನಾ ಧರಿಸಿ ಐದು ಪದರಗಳನ್ನಾಗಿ ವಿಂಗಡಿಸಲಾಗಿದೆ.
    - ಪರಿವರ್ತನಾ ಮಂಡಲ,
    - ಸಮೋಷ್ಣ ಮಂಡಲ,
    - ಮಧ್ಯಂತರ ಮಂಡಲ,
    - ಅಯಾನು ಮಂಡಲ,
    - ಬಾಹ್ಯ ಮಂಡಲ

3. ಹವಾಮಾನದ ಪರಿಸ್ಥಿತಿ ಉಷ್ಣಾಂಶ, ಒತ್ತಡ, ಮಾರುತಗಳು, ತೇವಾಂಶ, ಮಳೆ, ಮಾರುತ.

3. ಅಕ್ಷಾಂಶ, ಎತ್ತರ, ಸಮುದ್ರದಿಂದಿರುವ ದೂರ, ಮಾರುತಗಳು, ಸಾಗರ, ಪ್ರವಾಹಗಳು, ಮೋಡ ,ಮಳೆ.

4. ಗಾಳಿಯು ತೂಕವನ್ನು ಹೊಂದಿದೆ. ಆದ್ದರಿಂದ ಇದು ಭೂಮಿಯ ಮೇಲೆ ಒತ್ತಡ ಉಂಟು ಮಾಡುತ್ತದೆ. ಇದನ್ನೇ ವಾಯುಮಂಡಲದ ಒತ್ತಡ ಎನ್ನುವರು.

5. ನಿರಂತರ ಮಾರುತಗಳು.
   ನಿಯತಕಾಲಿಕ ಮಾರುತಗಳು .
   ಸ್ಥಳೀಯ ಮಾರುತಗಳು.
   ಆವರ್ತ ಮತ್ತು ಪ್ರತ್ಯಾವರ್ತ ಮಾರುತಗಳು.

**IV ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿ.**

1. ಕೆಲವು ವಿಶೇಷ ಸನ್ನಿವೇಶಗಳಲ್ಲಿ ವಾಯುಮಂಡಲದಲ್ಲಿ ಎತ್ತರಕ್ಕೆ ಹೋದಂತೆ ಉಷ್ಣಾಂಶ ಕಡಿಮೆಯಾಗುತ್ತದೆ ಇದನ್ನು ಉಷ್ಣ ವಿಪರ್ಯಯ ಎನ್ನುತ್ತಾರೆ. ಇದು ಪರ್ವತದ ಕಣಿವೆ ಪ್ರದೇಶಗಳಲ್ಲಿ ಕಂಡುಬರುತ್ತದೆ. ಇದಕ್ಕೆ ಕಾರಣ ದೀರ್ಘಾವಧಿಯ ರಾತ್ರಿ, ಮೋಡ ರಹಿತ ಶುಭ್ರ ಆಕಾಶ, ಒಣ ಗಾಳಿ ,ಮಾರುತ ರಹಿತ ಮತ್ತು ಹಿಮಾವೃತ ಪರ್ವತದ ಮೇಲ್ಭಾಗವಾಗಿದೆ.
2. ವಾಯುಮಂಡಲದ ಉಷ್ಣಾಂಶವು ಕಡಿಮೆಯಾದಾಗ ಅದರಲ್ಲಿನ ಜಲಾಂಶವು ಘನೀಕರಣಗೊಂಡು ನಿರ್ಮಾಣವಾಗುವ ಸಣ್ಣ ಸಣ್ಣ ನೀರಿನ ಹನಿಗಳನ್ನು ಮೋಡಗಳನ್ನುವರು. ಮೋಡಗಳನ್ನು ಅವುಗಳ ಲಕ್ಷಣಗಳ ಆಧಾರದ ಮೇಲೆ ಮೂರು ವಿಧಗಳಾಗಿ ವಿಂಗಡಿಸಲಾಗಿದೆ.
   ಪದರ ಮೋಡಗಳು ,ರಾಶಿ ಮೋಡಗಳು, ಹಿಮಕಣ ಮೋಡಗಳು ,ರಾಶಿ ದೃಷ್ಟಿ ಮೋಡಗಳು.
3. ಹವಾಮಾನ ಒಂದು ಸ್ಥಳದ ಅಲ್ಪಾವಧಿಯ ವಾಯುಮಂಡಲದ ಪರಿಸ್ಥಿತಿಯನ್ನು ಹವಾಮಾನ ಎನ್ನುವರು.
   ಉದಾಹರಣೆ- ಮೋಡಯುಕ್ತ ಪ್ರಖರ ಬಿಸಿಲು ಶುಭ್ರ ಹವಾಮಾನ.
   ಹವಾಮಾನದ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಶಾಸ್ತ್ರವನ್ನು ಪವನ ವಿಜ್ಞಾನ ಶಾಸ್ತ್ರ ಎನ್ನುವರು.
   ವಾಯುಗುಣ ಒಂದು ಪ್ರದೇಶದ ದೀರ್ಘಾವಧಿಯ ಹವಾಮಾನದ ಸ್ಥಿತಿಯನ್ನು ವಾಯುಗುಣವೆನ್ನುವರು.
   ಉದಾಹರಣೆ -ಸಮಭಾಜಕ ವೃತ್ತದ ವಾಯುಗುಣ, ಮರುಭೂಮಿ ವಾಯುಗುಣ.
   ವಾಯುಗುಣದ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಶಾಸ್ತ್ರವನ್ನು ವಾಯುಗುಣ ಶಾಸ್ತ್ರ ಎನ್ನುವರು.

**IV. ಈ ಕೆಳಗಿನ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯಗಳಲ್ಲಿ ಉತ್ತರಿಸಿ.**

1.
   - ವಾಯುಗೋಳವು ವಿವಿಧ ಬಗೆಯ ಅನಿಲಗಳು. ಧೂಳಿನ ಕಣಗಳು. ನೀರಾವಿಯ ಮಿಶ್ರಣವಾಗಿದೆ.
   - ವಾಯುಮಂಡಲದ ಮುಖ್ಯ ಅನಿಲಗಳೆಂದರೆ ನೈಟ್ರೋಜನ್, ಆಕ್ಸಿಜನ್ ,ಆರ್ಗಾನ್, ಇಂಗಾಲದ ಡೈಯಾಕ್ಸೈಡ್, ಓಝೋನ್.
   - ವಾಯುಮಂಡಲವನ್ನು ಐದು ಪದರಗಳಾಗಿ ವಿಂಗಡಿಸಲಾಗಿದೆ.
   - ಪರಿವರ್ತನಾ ಮಂಡಲ-. ಇದು ವಾಯುಮಂಡಲದ ಅತ್ಯಂತ ಕೆಳ ಪದರ ಈ ವಲಯದಲ್ಲಿ ಹವಾಮಾನದ ಎಲ್ಲಾ ಬದಲಾವಣೆಗಳು ಕಂಡುಬರುತ್ತವೆ.
   - ಈ ವಲಯದಲ್ಲಿ ಎತ್ತರಕ್ಕೆ ಹೋದಂತೆ ಉಷ್ಣಾಂಶ ಮತ್ತು ಒತ್ತಡ ಕಡಿಮೆಯಾಗುತ್ತದೆ.

- ಸಮೋಷ್ಣ ಮಂಡಲ- ವಾಯುಗೋಳದ ಎರಡನೇ ಪದರ. ಈ ಪದರದಲ್ಲಿ ಓಝೋನ್ ಅನಿಲವಿದೆ. ಇದು ಸೂರ್ಯನಿಂದ ಬರುವ ಅತಿ ನೇರಳೆ ಕಿರಣಗಳನ್ನು ಹೀರಿಕೊಂಡು ಎಲ್ಲಾ ಜೀವರಾಶಿಗಳನ್ನು ರಕ್ಷಿಸಿದೆ.
- ಮಧ್ಯಂತರ ಮಂಡಲ- ವಾಯುಮಂಡಲದ ಮೂರನೇ ಪದರ. ಈ ವಲಯದಲ್ಲಿ ಎತ್ತರಕ್ಕೆ ಹೋದಂತೆ ಉಷ್ಣಾಂಶ ಕಡಿಮೆಯಾಗುತ್ತದೆ. ಇದು ಅತಿ ಶೀತ ಉಷ್ಣಾಂಶವನ್ನು ಹೊಂದಿದೆ.
- ಉಷ್ಣತಾ ಮಂಡಲ- ಈ ಪದರದಲ್ಲಿ ಉಷ್ಣಾಂಶ ಹೆಚ್ಚು ಇರುತ್ತದೆ. ಇಲ್ಲಿ ಅನಿಲದ ಅಣುಗಳು ಅಯಾನುಗಳಾಗಿ ಪರಿವರ್ತನೆ ಹೊಂದುವುದರಿಂದ ಇದನ್ನು ಅಯಾನುಮಂಡಲವೆಂದು ಕರೆಯುವರು.
- ಬಾಹ್ಯ ಮಂಡಲ -ವಾಯುಮಂಡಲದ ಅತ್ಯಂತ ಮೇಲಿನ ಪದರ ಇಲ್ಲಿ ಒತ್ತಡ ಕಡಿಮೆ ಇರುತ್ತದೆ.

2.

- ಗಾಳಿಯು ತೂಕವನ್ನು ಹೊಂದಿದ್ದು ಭೂಮಿಯ ಮೇಲೆ ಒತ್ತಡವನ್ನುಂಟು ಮಾಡುತ್ತದೆ. ಇದನ್ನೇ ವಾಯುಮಂಡಲದ ಒತ್ತಡ ಎನ್ನುವರು .
  ಪ್ರಪಂಚದ ಮುಖ್ಯ ಒತ್ತಡ ಪಟ್ಟಿಗಳೆಂದರೆ
- ಸಮಭಾಜಕ ವೃತ್ತದ ಕಡಿಮೆ ಒತ್ತಡದ ಪಟ್ಟಿ
- ಉತ್ತರ ಉಷ್ಣವಲಯದ ಅಧಿಕ ಒತ್ತಡದ ಪಟ್ಟಿ
- ದಕ್ಷಿಣದ ಉಪ ಉಷ್ಣವಲಯದ ಅಧಿಕ ಒತ್ತಡದ ಪಟ್ಟಿ
- ಉತ್ತರ ಉಪದ್ರುವೀಯ ಕಡಿಮೆ ಒತ್ತಡದ ಪಟ್ಟಿ
- ದಕ್ಷಿಣ ಉಪದ್ರುವೀಯ ಕಡಿಮೆ ಒತ್ತಡದ ಪಟ್ಟಿ
- ಉತ್ತರ ದ್ರುವೀಯ ಅಧಿಕ ಒತ್ತಡದ ಪಟ್ಟಿ
- ದಕ್ಷಿಣ ಧ್ರುವೀಯ ಅಧಿಕ ಒತ್ತಡದ ಪಟ್ಟಿ

## ಅಧ್ಯಾಯ 14.ಅರ್ಥಶಾಸ್ತ್ರದ ಅರ್ಥ ಮತ್ತು ಮಹತ್ವ

**I. ಬಹು ಆಯ್ಕೆಯ ಪ್ರಶ್ನೆಗಳು**

1. B) ತುಷ್ಟಿಗುಣ
2. A) ಸಾಮಾಜಿಕ ಚಟುವಟಿಕೆ
3. B) ಅರ್ಥಶಾಸ್ತ್ರ
4. A) ಗ್ರೀಕ್

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.**

1. ಅರ್ಥಶಾಸ್ತ್ರದ ಪಿತಾಮಹ ಆಡಂ ಸ್ಮಿತ್.
2. ಸಂಪತ್ತನ್ನು ಕುರಿತು ಅಧ್ಯಯನ ಮಾಡುವ ಶಾಸ್ತ್ರವೇ ಅರ್ಥಶಾಸ್ತ್ರ.
3. ಎಲ್ಲಾ ಆರ್ಥಿಕ ಚಟುವಟಿಕೆಗಳ ಮೂಲ ಮಾನವನ ಬಯಕೆ.

4. ಅರ್ಥಶಾಸ್ತ್ರ ಒಕೋಸ್ ಮತ್ತು ನೋಮೋಸ್ ಪದಗಳಿಂದ ಬಂದಿದೆ.
5 ಸರ್ಕಾರ ತಾನು ಒದಗಿಸುವ ಸರಕು ಮತ್ತು ಸೇವೆಗಳಿಗೆ ತೆರಿಗೆಯನ್ನು ವಿಧಿಸುತ್ತದೆ.
6. ಸರಕು ಮತ್ತು ಸೇವೆಗಳನ್ನು ಉತ್ಪಾದಿಸಲು ಕೈಗೊಳ್ಳುವ ಚಟುವಟಿಕೆಗಳೇ ಉತ್ಪಾದಕ ಚಟುವಟಿಕೆಗಳು.

**II. ಕೆಳಗಿನ ಪ್ರಶ್ನೆಗಳಿಗೆ ಐದರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿ.**

1. ಮಾನವ ತನ್ನ ಬಯಕೆಯನ್ನು ಈಡೇರಿಸಿಕೊಳ್ಳಲು ಹಣ ಸಂಪಾದನೆಗೆ ಅನೇಕ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾನೆ. ಇಂತಹ ಆರ್ಥಿಕ ಚಟುವಟಿಕೆಗಳನ್ನು ಮುಖ್ಯವಾಗಿ ನಾಲ್ಕು ಗುಂಪುಗಳಾಗಿ ವರ್ಗೀಕರಿಸಲಾಗಿದೆ.
   - ಉತ್ಪಾದಕ ಚಟುವಟಿಕೆಗಳು... ಸರಕು ಸೇವೆಗಳನ್ನು ಉತ್ಪಾದಿಸಲು ಕೈಗೊಳ್ಳುವ ಚಟುವಟಿಕೆಗಳು. ಉದಾಹರಣೆ. ವ್ಯವಸಾಯ, ಕೈಗಾರಿಕೆ, ಮೀನುಗಾರಿಕೆ ಇತ್ಯಾದಿ
   - ಅನುಭೋಗಿ ಚಟುವಟಿಕೆಗಳು... ಸರಕು ಸೇವೆಗಳನ್ನು ಬಳಸಿಕೊಳ್ಳುವ ಮೂಲಕ ಮಾನವ ತನ್ನ ಬಯಕೆಗಳನ್ನು ಈಡೇರಿಸಿಕೊಳ್ಳುವ ಚಟುವಟಿಕೆಗಳು
   - ವಿನಿಮಯ ಚಟುವಟಿಕೆಗಳು... ಸರಕುಗಳ ಸಂಗ್ರಹಣೆ ಸಾಗಾಟ ಹಾಗೂ ಮಾರುವ ಮತ್ತು ಕೊಳ್ಳುವ ಚಟುವಟಿಕೆಗಳು
   - ವಿತರಣೆ ಚಟುವಟಿಕೆಗಳು... ಉತ್ಪಾದನಾಂಗಗಳ ಬೆಲೆಯನ್ನು ನಿರ್ಧರಿಸುವ ಚಟುವಟಿಕೆಗಳಾಗಿವೆ.

**2.**

- ನಮ್ಮ ಸುತ್ತಮುತ್ತಲಿನ ಬಡತನ ನಿರುದ್ಯೋಗ ಸಮಸ್ಯೆ ತಿಳಿಯಲು ಪರಿಹಾರ ಕಂಡುಕೊಳ್ಳಲು.
- ಆರ್ಥಿಕ ಅಸಮಾನತೆಗೆ ಕಾರಣ ತಿಳಿದು ಪರಿಹಾರ ಸೂಚಿಸಲು.
- ಮಿತ ಸಂಪನ್ಮೂಲಗಳಲ್ಲಿ ಅಪರಿಮಿತ ಬಯಕೆ ಈಡೇರಿಕೆಯ ಸನ್ನಿವೇಶಗಳಲ್ಲಿ ಪರಿಹಾರ ಪಡೆಯಲು .
- ಏನನ್ನು ಉತ್ಪಾದಿಸಬೇಕು ಹೇಗೆ ಉತ್ಪಾದಿಸಬೇಕು ಯಾರಿಂದ ಉತ್ಪಾದಿಸಬೇಕೆಂಬುದನ್ನ ತಿಳಿಯಲು .
- ಬೆಲೆಗಳ ಏರಿಳಿತಕ್ಕೆ ಕಾರಣ ತಿಳಿದು ಪರಿಹಾರ ಕಂಡುಕೊಳ್ಳಲು.
- ಸಂಪನ್ಮೂಲಗಳ ರಕ್ಷಣೆ ಮತ್ತು ಮಿತ ಬಳಕೆಯ ಅವಶ್ಯಕತೆ ಅರಿಯಲು ಅರ್ಥಶಾಸ್ತ್ರದ ಅಧ್ಯಯನ ಅವಶ್ಯಕ.

******

## ಅಧ್ಯಾಯ 15. ವ್ಯವಹಾರ ಅರ್ಥ ಮತ್ತು ಪ್ರಾಮುಖ್ಯತೆ

**I. ಬಹು ಆಯ್ಕೆ ಪ್ರಶ್ನೆಗಳು**

1) C) ಗ್ರಾಮ
2) A) ಆಮದು
3) B) ಚಿಲ್ಲರೆ ವ್ಯಾಪಾರಿ,

4 D) ಸಾರಿಗೆ ಸಂಪರ್ಕ.

5) B) ರಫ್ತು

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ..**

1) ಸರಕುಗಳನ್ನು ತಲೆಯ ಮೇಲೆ ಹೊತ್ತು ಬೀದಿ ಬೀದಿ ಸುತ್ತಿ ಮನೆ ಬಾಗಿಲುಗಳಿಗೆ ಬಂದು ಮಾರುವವರು.
2) ಆಂತರಿಕ ವ್ಯಾಪಾರವೆಂದರೆ ದೇಶದ ಒಳಗೆ ನಡೆಯುವ ವ್ಯಾಪಾರ
3) ಪುನರ್ ರಫ್ತು ವ್ಯಾಪಾರ ನಡೆಸುವ ದೇಶಕ್ಕೆ ಒಂದು ಉದಾಹರಣೆ ಸಿಂಗಾಪುರ.
4) ಗುಡಿ ಕೈಗಾರಿಕೆಗೆ ಒಂದು ಉದಾಹರಣೆ ಮಡಿಕೆ ಮಾಡುವುದು.
5) ವ್ಯಾಪಾರದ ಮುಖ್ಯ ಉದ್ದೇಶ ನ್ಯಾಯಯುಕ್ತ ಲಾಭಗಳಿಕೆಯಾಗಿದೆ.
6) ವ್ಯವಸಾಯ ಉತ್ಪನ್ನಗಳ ಗುಣಮಟ್ಟ ತಿಳಿಯಲು ಮುದ್ರಿಸುವ ಚಿಹ್ನೆ ಆಗ್ಮಾರ್ಕ್.
7) ಭಾರತೀಯ ಮಾನಕ ಸಂಸ್ಥೆ (Indian Standards Institution)
8) ಹೊಸ ವಸ್ತುಗಳನ್ನು ಗ್ರಾಹಕರಿಗೆ ಪರಿಚಯಿಸುವುದು.

**III. ಸಂಕ್ಷಿಪ್ತವಾಗಿ ಉತ್ತರಿಸಿರಿ:**

1) ಸರಕುಗಳನ್ನು ಕೊಳ್ಳುವುದು ಮತ್ತು ಗ್ರಾಹಕರಿಗೆ ಮಾರುವುದನ್ನು ವ್ಯಾಪಾವೆನ್ನುವರು.
   a) ದೇಶಿಯ ವ್ಯಾಪಾರ,
   B) ಅಂತರಾಷ್ಟ್ರೀಯ ವ್ಯಾಪಾರ,

2)
- ಸಗಟು ವ್ಯಾಪಾರಿಗಳಿಂದ ವಸ್ತುಗಳನ್ನು ಕೊಂಡು ಗ್ರಾಹಕರಿಗೆ ಒದಗಿಸುತ್ತದೆ.
- ವ್ಯಾಪಾರದ ನಷ್ಟ ತಾವೇ ಭರಿಸುತ್ತಾರೆ.
- ಗ್ರಾಹಕರ ಇಷ್ಟದಂತೆ ವಸ್ತುಗಳನ್ನು ಒದಗಿಸುತ್ತಾರೆ.
- ಗ್ರಾಹಕರಿಗೆ ಸಾಲ ಸೌಲಭ್ಯ ಒದಗಿಸುತ್ತಾರೆ.
- ಪರ್ಯಾಯ ವಸ್ತುಗಳ ಬಗ್ಗೆ ಮಾಹಿತಿ ನೀಡಿ ಒದಗಿಸುತ್ತಾರೆ.
- ಹೊಸ ವಸ್ತುಗಳ ಬಗ್ಗೆ ಗ್ರಾಹಕರಿಗೆ ಮಾಹಿತಿ ನೀಡುತ್ತಾರೆ.
- ಗ್ರಾಹಕರು ಬಯಸುವ ವಸ್ತುಗಳನ್ನು ಅವರು ಬಯಸುವ ಪ್ರಮಾಣದಲ್ಲಿಯೇ ಒದಗಿಸುತ್ತಾರೆ.

3)
- ಚಿಲ್ಲರೆ ವ್ಯಾಪಾರಿಗಳಿಗೆ ಸಹಕರಿಸುತ್ತಾರೆ.
- ಚಿಲ್ಲರೆ ವ್ಯಾಪಾರಿಗಳಿಗೆ ಸಾಲ ಸೌಲಭ್ಯ ಒದಗಿಸುತ್ತಾರೆ.
- ಚಿಲ್ಲರೆ ವ್ಯಾಪಾರಿಗಳ ಪರವಾಗಿ ಜಾಹೀರಾತು ಮಾಡುತ್ತಾರೆ.
- ಮಾರುಕಟ್ಟೆ ವಿವರ ನೀಡುತ್ತಾರೆ.
- ಹೆಚ್ಚು ಲಾಭದ ಪ್ರಮಾಣ ಇಟ್ಟಿರುವುದಿಲ್ಲ.
- ಉತ್ಪಾದಕರ ಪರವಾಗಿ ಜಾಹೀರಾತು ಮಾಡುತ್ತಾರೆ.
- ಉತ್ಪಾದನಾ ವಸ್ತುಗಳನ್ನು ಶೇಖರಿಸಿಡಲು ಸಹಕರಿಸುತ್ತಾರೆ.
- ಉತ್ಪಾದಕರಿಗೆ ಮಾರುಕಟ್ಟೆಯ ಮಾಹಿತಿ ನೀಡುತ್ತಾರೆ.

3) ಎರಡು ದೇಶಗಳ ನಡುವೆ ನಡೆಯುವ ವ್ಯಾಪಾರವನ್ನು ವಿದೇಶಿ ವ್ಯಾಪಾರ ಎನ್ನುವರು, ಇದರ 3 ಭಾಗಗಳು
   a) ಆಮದು B) ರಫ್ತು C) ಪುನರ್ ರಫ್ತು

4) A) ಪ್ರಾಥಮಿಕ ಉದ್ಯಮಗಳು.

- ತಳಿ ವೈಜ್ಞಾನಿಕ ಉದ್ಯಮಗಳು,
- ಗಣಿ ಉದ್ಯಮಗಳು,

B) ದ್ವಿತೀಯ ಉದ್ಯಮಗಳು,

- ಉತ್ಪಾದಕ ಉದ್ಯಮಗಳು,
- ನಿರ್ಮಾಣ ಉದ್ಯಮಗಳು.

5)

- ಬಿದಿರಿನ ಬುಟ್ಟಿಗಳು,
- ಚಾಪೆಗಳು,
- ಮಡಿಕೆಗಳು,
- ಕಲ್ಲಿನ ಕೆತ್ತನೆಗಳು,
- ಮರದ ಕೆತ್ತನೆಗಳು,
- ಕಮ್ಮಾರಿಕೆಯ ವಸ್ತುಗಳು.

6)

- ಸರಕುಗಳ ಉತ್ಪಾದನೆ ಬೇರೆ ಬೇರೆ ಸಮಯದಲ್ಲಾಗುತ್ತದೆ.
- ಉಪಭೋಗವು ಬೇರೆ ಬೇರೆ ಸಮಯದಲ್ಲಾಗುತ್ತದೆ.
- ಇವುಗಳನ್ನು ಕಾಲ ಕಾಲಕ್ಕೆ ಗ್ರಾಹಕರಿಗೆ ಒದಗಿಸಲು ಶೇಖರಿಸಿಡಬೇಕಾಗುತ್ತದೆ.
- ಇದಕ್ಕಾಗಿ ಉಗ್ರಾಣ ವ್ಯವಸ್ಥೆ ಒದಗಿಸಿದೆ.
- ವೈಜ್ಞಾನಿಕ ರೀತಿಯಲ್ಲಿ ನಿರ್ವಹಿಸುವ ಉಗ್ರಾಣಗಳಲ್ಲಿ ಶೈತ್ಯಾಗಾರದ ವ್ಯವಸ್ಥೆಯು ಇರುತ್ತದೆ.

## ಅಧ್ಯಾಯ 16. ಮೌರ್ಯರು ಮತ್ತು ಕುಶಾಣರು

I. **ಬಹು ಆಯ್ಕೆ ಉತ್ತರಗಳು**

1. C) ಚಂದ್ರಗುಪ್ತ ಮೌರ್ಯ
2. C) ಅರ್ಥಶಾಸ್ತ್ರ
3. B)ಕಳಿಂಗ ಯುದ್ಧ
4. C) ಪ್ರಾಕೃತ
5. A) ಕಾನಿಷ್ಕ
6. C)ಬೌದ್ಧ ಶಿಲ್ಪ ಕಲೆ
7. B) ಮಹಾಯಾನ
8. C) ಜೈನ ಧರ್ಮ

II. **ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.**

9. ಚಾಣಕ್ಯನ ಇತರ ಹೆಸರುಗಳು ವಿಷ್ಣುಗುಪ್ತ ಮತ್ತು ಕೌಟಿಲ್ಯ.
10. ಅಶೋಕನ ಶಿಲಾ ಶಾಸನಗಳ ಭಾಷೆ ಪ್ರಾಕೃತ.

11. ಕುಶಾನರ ರಾಜಧಾನಿ ಪುರುಷಪುರ.
12. ಅಶೋಕನು ಧರ್ಮಪ್ರಚಾರಕ್ಕಾಗಿ ಸಿಂಹಳಕ್ಕೆ ಮಗ ರಾಹುಲ ಮತ್ತು ಮಗಳು ಸಂಗ್ರಮಿತ್ರಳನ್ನು ಕಳುಹಿಸಿದನು.
13. ಚಂದ್ರಗುಪ್ತ ಮೌರ್ಯನ ರಾಜ್ಯಪಾಲನಾದ ಪುಷ್ಯಗುಪ್ತ

**III. ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

18. ಮೆಗಾಸ್ತನೀಸನ ಇಂಡಿಕಾ, ಕೌಟಿಲ್ಯನ ಅರ್ಥಶಾಸ್ತ್ರ, ವಿಶಾಕದತ್ತನ ಮುದ್ರ ರಾಕ್ಷಸ, ಅಶೋಕನ ಶಿಲಾ ಶಾಸನಗಳು, ಸ್ತಂಭಗಳು ಮತ್ತು ಸ್ತೂಪಗಳು.
19. ಅಶೋಕನ ಕಾಲದ ಪ್ರಮುಖ ನಗರಗಳು ಪಾಟಲಿಪುತ್ರ ,ತಕ್ಷಶಿಲಾ ,ಉಜ್ಜಯಿನಿ ಕಳಿಂಗ ಹಾಗೂ ಸುವರ್ಣ ಗಿರಿ.

**IV. ಈ ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ.**

16.
- ಶಾಂತಿ ಸ್ಥಾಪಕ
- ಬೌದ್ಧ ಧರ್ಮದ ರಕ್ಷಕ
- ಅಹಿಂಸಾ ವಾದಿ
- ಉತ್ತಮ ರಾಜ
- ಮೌಲ್ಯಾಧಾರಿತ ಜೀವನ ನಡೆಸಿದ ರಾಜ
- ಬೌದ್ಧ ಧರ್ಮದ ಪ್ರಚಾರಕ
- ಕಲೆ ಮತ್ತು ವಾಸ್ತು ಶಿಲ್ಪಕ್ಕೆ ಮಹತ್ವ ಶಾಸನಗಳ ಪಿತಾಮಹ
- ಭಾರತದಂತಹ ದೊಡ್ಡ ದೇಶವನ್ನು ಒಗ್ಗೂಡಿಸಿ ಆಳಿದ್ದನು.
- ಕರುಣೆ ಯಂತಹ ಮಾನವೀಯ ಮೌಲ್ಯಗಳ ರಕ್ಷಕ

17. ಮೌರ್ಯ ಸಾಮ್ರಾಜ್ಯವು ಕೇಂದ್ರೀಕೃತ ಆಡಳಿತ ವ್ಯವಸ್ಥೆ
- ಅಧಿಕಾರವು ರಾಜನಲ್ಲಿ ಕೇಂದ್ರೀಕೃತವಾಗಿತ್ತು.
- ಆಡಳಿತದ ಸಲುವಾಗಿ ಅಧಿಕಾರಿ ವರ್ಗವು ಅಸ್ತಿತ್ವಕ್ಕೆ ಬಂದಿತ್ತು .
- ಬಲಿಷ್ಠ ಗೂಡಾಚಾರ ವ್ಯವಸ್ಥೆ.
- ಸಾಮ್ರಾಜ್ಯವನ್ನು ಪ್ರಾಂತ್ಯಗಳಾಗಿ ವಿಭಾಗಿಸಿ ಯುವರಾಜರನ್ನು ನೇಮಕ ಮಾಡಿದರು.
- ರಾಜನ ಅಧೀನದಲ್ಲಿ ಮಂತ್ರಿ ಪುರೋಹಿತ ಸೇನಾಪತಿ ಯುವರಾಜರಿದ್ದರು.
- ತಕ್ಷಣ ಶಿಲೆ ಉಜ್ಜಯಿನಿ ಡೌಲಿ ಸುವರ್ಣಗಿರಿ ಮತ್ತು ಗಿರ್ನಾರ್ ಆಡಳಿತ ಕೇಂದ್ರಗಳು.
- ರಜುಕ ಮತ್ತು ಯುಕ್ತ ಎಂಬ ಅಧಿಕಾರಿಗಳಿದ್ದರು.
- ಪಾಟಲಿಪುತ್ರ ರಾಜಧಾನಿಯಾಗಿದ್ದು ಇತರ ಆರು ಸಮಿತಿಗಳಿದ್ದವು.

18. ಕಾನಿಷ್ಕನ ಕಾಲದಲ್ಲಿ ಕುಶಾಣರ ಸಾಮ್ರಾಜ್ಯ ವಿಸ್ತಾರವಾಗಿ ಬೆಳೆಯಿತು.
- ಸ.ಶಿ.78 ರಲ್ಲಿ ಪ್ರಾರಂಭವಾಗಿ ಶಕ ಯುಗಕ್ಕೆ ನಾಂದಿ ಹಾಡಿದನು.
- ಪುರುಷಪುರ ಕಾನಿಷ್ಕನ ರಾಜಧಾನಿ ಮತ್ತೊಂದು ನಗರ ಮಥುರಾ.
- ಬೌದ್ಧ ಧರ್ಮವು ಸಮ್ರುದ್ಧವಾಗಿ ಬೆಳೆಯಿತು.
- ಅಶ್ವಘೋಷ ವಸುಮಿತ್ರ ಸಂಗರಕ್ಷ ವಿದ್ವಾಂಸರಾಗಿದ್ದರು.
- ನಾಲ್ಕನೇ ಬೌದ್ಧ ಸಮಾವೇಶ ಕಾಶ್ಮೀರದಲ್ಲಿ ಕಾನಿಷ್ಕನ ನೇತೃತ್ವದಲ್ಲಿ ನಡೆಯಿತು.

- ಅಶೋಕನಂತೆಯೇ ಬೌದ್ಧ ಧರ್ಮ ಪ್ರಚಾರಕ್ಕಾಗಿ ಮಧ್ಯ ಏಷ್ಯಾ ಹಾಗೂ ಚೀನಾ ಗಳಿಗೆ ನಿಯೋಗಗಳನ್ನು ಕಳುಹಿಸಿದ್ದನು.
- ಕಲೆ ಮತ್ತು ವಾಸ್ತು ಶಿಲ್ಪಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದನು.

## ಅಧ್ಯಾಯ 17. ಗುಪ್ತರು ಮತ್ತು ವರ್ಧನರು

**ಬಹು ಆಯ್ಕೆ ಉತ್ತರಗಳು**

1. C) ಸಮುದ್ರಗುಪ್ತ
2. C) ನರಸಿಂಹ ಗುಪ್ತ
3. B) ಎರಡನೇ ಚಂದ್ರಗುಪ್ತ
4. A) ವರಹಾ ಮಿಹಿರ
5. A) ಕಪಿಲ
6. C) ಕಬ್ಬಿಣ
7. C) ಧನ್ವಂತರಿ
8. A) ನಳಂದ

**ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

9. ಗುಪ್ತರ ಕಾಲದಲ್ಲಿ ಭಾರತಕ್ಕೆ ಭೇಟಿ ಕೊಟ್ಟ ಚೀನಾದ ಯಾತ್ರಿಕ ಫಾಹಿಯಾನ್.
10. ಕಾಳಿದಾಸನು ಬರೆದ ಶ್ರೇಷ್ಠ ನಾಟಕ ಅಭಿಜ್ಞಾನ ಶಾಕುಂತಲ
11. ಹರ್ಷವರ್ಧನನ ಆಸ್ಥಾನದಲ್ಲಿದ್ದ ಇಬ್ಬರು ಪ್ರಸಿದ್ಧ ಕವಿಗಳ ಪುಷ್ಯಭೂತಿ ಮತ್ತು ಬಾಣ

**I. ಎರಡು ಅಂಕದ ಉತ್ತರಗಳು**

10. ಎರಡನೇ ಚಂದ್ರಗುಪ್ತನ ಕಾಲದಲ್ಲಿದ್ದ ಪ್ರಮುಖ ಕವಿಗಳು ಕಾಳಿದಾಸ ,ಶೂದ್ರಕ, ವಿಶಾಖದತ್ತ.
11. ವರ್ಧನರ ಆದಾಯದ ಮೂಲಗಳು ಭೂಕಂದಾಯ, ವೃತ್ತಿತರಿಗೆ ,ಮಾರಾಟ ತೆರಿಗೆ, ಆದಾಯದ ಮೂಲಗಳು .
12. ಮೇಘದೂತ, ರಘುವಂಶ, ಕುಮಾರಸ್ವಾಮಿ, ಋತುಸಂಹಾರ, ಅಭಿಜ್ಞಾನ ಶಾಕುಂತಲ.

**II. ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿ.**

15.

- ಗುಪ್ತ ದೊರೆ ನರಸಿಂಹ ಗುಪ್ತನಿಂದ ಪ್ರಾರಂಭವಾಯಿತು.
- ಹರ್ಷವರ್ಧನ ಕಾಲದಲ್ಲಿ ವಿಶ್ವವಿಖ್ಯಾತಿ ಪಡೆಯಿತು.
- ಹರ್ಷವರ್ಧನ ತಂಗಿ ರಾಜಶ್ರೀಯು ಇದರ ಉಪಕುಲಪತಿಗಳಾಗಿದ್ದಳು .
- ವಿಶ್ವವಿಖ್ಯಾತ ವಿದ್ವಾಂಸರು ಮತ್ತು ಶಿಕ್ಷಕರು ಕಾರ್ಯನಿರ್ವಹಿಸಿದ್ದಾರೆ.
- ಉತ್ತಮ ಕಟ್ಟಡವಿದ್ದು ಹತ್ತು ಸಾವಿರ ವಿದ್ಯಾರ್ಥಿಗಳಿದ್ದರು.
- ವಿದೇಶಿ ಪ್ರವಾಸಿಗ ಹ್ಯೂಯೆನ್ ತ್ಸಾಂಗ್ ಇಲ್ಲಿ ವಿದ್ಯಾರ್ಥಿಯಾಗಿದ್ದನು,
- ನಂತರ ಶಿಕ್ಷಕನಾಗಿ ಕಾರ್ಯನಿರ್ವಹಿಸಿದ್ದ ಬಗ್ಗೆ ಸಿ ಯು ಕಿ ಗ್ರಂಥದಿಂದ ತಿಳಿದು ಬರುತ್ತದೆ.

- ಈಗಲೂ ವಿಶ್ವದ ಶ್ರೇಷ್ಠ ವಿದ್ಯಾಲಯಗಳಲ್ಲಿ ಒಂದಾಗಿದೆ.

16.

- ಹೂಣರ ದಾಳಿಗೆ ನಿರಂತರವಾಗಿ ಒಳಗಾಗಿ ಪತನ ಕಂಡಿತು.
- ಬೃಹತ್ ಸುಸಜ್ಜಿತ ಸೇನೆಯನ್ನು ಹೊಂದಿರಲಿಲ್ಲ.
- ಅಧಿಕಾರದ ದುರುಪಯೋಗ.
- ಪುರೋಹಿತರು ದಾನ ದತ್ತಿ ಪಡೆದು ಆರ್ಥಿಕ ವಿನಾಯಿತಿ ಪಡೆದರು.
- ಕೃಷಿಕರು ನಿವಾಸಿಗರು ಕುಶಲ ಕಾರ್ಮಿಕರು ಭೂಮಾಲೀಕರ ಕಟ್ಟುಪಾಡಿಗೆ ಅಧೀನರಾದರು .

17.

- ಗುಪ್ತರು ಹಲವಾರು ಕವಿಗಳಿಗೆ ಆಶ್ರಯದಾತ ರಾಗಿದ್ದರು.
- ಸಮುದ್ರಗುಪ್ತನು ಸ್ವತಹ ಕವಿಯಾಗಿದ್ದನು.
- ಎರಡನೇ ಚಂದ್ರಗುಪ್ತನು ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದನು.
- ಕಾಳಿದಾಸ ಕವಿ ಮತ್ತು ನಾಟಕಕಾರನಾಗಿದ್ದು ಅನೇಕ ಕೃತಿಗಳನ್ನು ರಚಿಸಿದ್ದಾನೆ .
- ಅಭಿಜ್ಞಾನ ಶಾಕುಂತಲ, ಶೂದ್ರಕ, ಮೃಚ್ಚಕಟಿಕ, ವಿಶಾಖದತ್ತನ ಮುದ್ರ ರಾಕ್ಷಸ ,ಧರ್ಮಶಾಸ್ತ್ರಗಳು ಮತ್ತು ಪುರಾಣಗಳು ಸೃಷ್ಟಿಯಾದವು.
- ಶ್ರೇಷ್ಠ ವಿಜ್ಞಾನಿಗಳಾದ ವರಹಮಿಹಿರ, ಭಾಸ್ಕರ, ಆರ್ಯಭಟ, ಚರಕ ಮತ್ತು ಸುಶ್ರುತ ಅನೇಕ ಕೊಡುಗೆಗಳನ್ನು ನೀಡಿದ್ದಾರೆ.
- ಚರಕ ಸಂಹಿತೆ ಮತ್ತು ಸುಶ್ರುತ ಸಂಹಿತೆ ರಚಿಸಿದ್ದಾರೆ .

18.

- ರಾಜನ ಆಡಳಿತದಲ್ಲಿ ಮಂತ್ರಿಮಂಡಲವು ಸಹಕರಿಸುತ್ತಿತ್ತು,
- ಮಹಾ ಸಂಧಿ ವಿಗ್ರಹ ,ಮಹಾಬಲಾಧಿಕೃತ, ಭೋಗ ಪತಿ, ದೂತ ಎಂಬ ಅಧಿಕಾರಿ ವರ್ಗವಿತ್ತು.
- ರಾಜ್ಯವನ್ನು ಪ್ರಾಂತ್ಯಗಳಾಗಿ ವಿಂಗಡಿಸಲಾಗಿತ್ತು .
- ಭೂಕಂದಾಯ ರಾಜ್ಯದ ಮುಖ್ಯ ಆದಾಯವಾಗಿತ್ತು.
- ಸಾಮಂತ ಅರಸರು ಆಡಳಿತದಲ್ಲಿ ತೊಂದರೆ ಕೊಡುತ್ತಿದ್ದರು.
- ಅರಸನ ದುರ್ಬಲಗೊಂಡಾಗ ಸಾಮಂತರು ಸ್ವತಂತ್ರರಾದರು.

## ಅಧ್ಯಾಯ 18. ದಕ್ಷಿಣ ಭಾರತ
## ಶಾತವಾಹನರು, ಕದಂಬರು ಮತ್ತು ಗಂಗರು

**ಬಹು ಆಯ್ಕೆ ಪ್ರಶ್ನೆಗಳು**

1. A) ಮೌರ್ಯರು
2. A) ಸಿಮುಖ
3. D) ಪ್ರಾಕೃತ

4. C) ವೈದಿಕ
5. A) ಚಂದ್ರುವಳ್ಳಿ ಕೆರೆ
6. C) ಸಂಸ್ಕೃತ
7. B) ದುರ್ವಿನೀತ
8. B) ಚಾವುಂಡರಾಯ

**ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.**

9. ಶಾತವಾಹನರ ರಾಜಧಾನಿ ಶ್ರೀಕಾಕುಲಂ.
10. ಶಾತವಾಹನರ ಪ್ರಸಿದ್ಧ ದೊರೆ ಗೌತಮಿಪುತ್ರ ಶಾತಕರ್ಣಿ.
11. ಶ್ರವಣಬೆಳಗೊಳದ ಗೊಮ್ಮಟ ಮೂರ್ತಿಗೆ ಹನ್ನೆರಡು ವರ್ಷಗಳಿಗೊಮ್ಮೆ ಮಹಾಮಸ್ತಕಾಭಿಷೇಕ ಜರುಗುವುದು
12. ಗಂಗರ ರಾಜ್ಯದ ಮತ್ತೊಂದು ಹೆಸರು ಗಂಗವಾಡಿ.
13. ಶಾತವಾಹನರ ಸಾಮ್ರಾಜ್ಯ ನಿರಂತರ ದಾಳಿಯಿಂದ ಅವನತಿ ಹೊಂದಿತು.
14. ಕದಂಬರ ಕಾಲದ ರಾಜಾಡಳಿತದ ಭಾಷೆಗಳು ಸಂಸ್ಕೃತ ಮತ್ತು ಪ್ರಾಕೃತ.

**ಎರಡು ಅಂಕದ ಪ್ರಶ್ನೆಗಳಿಗೆ ಉತ್ತರಗಳು**

15. ಗಂಗರ ಕಾಲದ ನಾಲ್ಕು ಗ್ರಂಥಗಳು ದತ್ತಕ ಸೂತ್ರ, ಶಬ್ದಾವತಾರ, ವಡ್ಡಕಥಾ, ಗಜಾಷ್ಟಕ.
20. ದಕ್ಷಿಣ ಭಾರತವನ್ನು ಆಳಿದ ರಾಜ ವಂಶಗಳು ಶಾತವಾಹನರು, ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಪಲ್ಲವರು
21. ಶಾತವಾಹನರ ಕಾಲದ ಪ್ರಮುಖ ವ್ಯಾಪಾರ ಕೇಂದ್ರಗಳು ನಾಸಿಕ್, ಕಲ್ಯಾಣ, ಬ್ರೋಚ್ ಮತ್ತು ಭಟ್ಕಳ

**ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿ.**

**17.**

- ಭಾರತದ ಸಂಸ್ಕೃತಿಗೆ ಕದಂಬರ ಕೊಡುಗೆ ವೈಶಿಷ್ಟ್ಯ ಪೂರ್ಣವಾಗಿದೆ.
- ಉತ್ತಮ ಆಡಳಿತ ವ್ಯವಸ್ಥೆ ಧಾರ್ಮಿಕ ಸಹಮತ ಸಾಹಿತ್ಯ ಕಲೆ ಮತ್ತು ವಾಸ್ತು ಶಿಲ್ಪಕ್ಕೆ ಕೊಡುಗೆ.
- ಕನ್ನಡ ಪ್ರಾಚೀನ ಹಲ್ಮಿಡಿ ಶಾಸನ ಈ ಕಾಲದ್ದಾಗಿದೆ.
- ಉತ್ತಮ ಶಿಕ್ಷಣ ವ್ಯವಸ್ಥೆ ಅಗ್ರಹಾರಗಳು ಶಿಕ್ಷಣ ಕೇಂದ್ರಗಳಾಗಿದ್ದವು.
- ಆಡಳಿತದಲ್ಲಿ ಮಾಂಡಲೀಕರು ರಾಜ ಪುರೋಹಿತರು ಮಂತ್ರಿಗಳು ಸೇನಾಧಿಪತಿಗಳ ಪ್ರಮುಖ ಪಾತ್ರ ವಹಿಸಿದ್ದರು.
- ರಾಜ್ಯವನ್ನು ಪ್ರಾಂತ್ಯಗಳನ್ನು ನೋಡಿಕೊಳ್ಳಲು ಪ್ರಾಂತ್ಯಾಧಿಕಾರಿಗಳನ್ನು ನೇಮಿಸಿದ್ದರು.

22. ಗಂಗರ ಸಮಾಜದಲ್ಲಿ ಸತ್ಯಶೀಲತೆ, ಸ್ವಾಮಿನಿಷ್ಠೆ, ಶೌರ್ಯ ಮತ್ತು ತಾಳ್ಮೆ ಎಂಬ ಮೌಲ್ಯಗಳಿದ್ದವು.

- ಸಮಾಜದಲ್ಲಿ ಹಲವಾರು ಜಾತಿ ಪಂಗಡಗಳಿದ್ದರೂ ಪರಸ್ಪರ ಅವಲಂಬಿಗಳಾಗಿದ್ದರು
- ಪಿತೃ ಪ್ರಧಾನ ಅವಿಭಕ್ತ ಕುಟುಂಬ ಪದ್ಧತಿ ಇತ್ತು .

- ಯುವ ಸೇನಾನಿಗಳು ಹಾಗೂ ಅಧಿಕಾರ ವರ್ಗ ಶೌರ್ಯ ಮತ್ತು ತಾಳ್ಮೆಗೆ ಹೆಸರಾಗಿದ್ದರು.
- ಇದರಿಂದ ಒಳ್ಳೆಯ ಆಡಳಿತ ನೀಡಲು ಸಾಧ್ಯವಾಯಿತು.

## ಅಧ್ಯಾಯ 19. ಬಾದಾಮಿಯ ಚಾಲುಕ್ಯರು ಮತ್ತು ಕಂಚಿಯ ಪಲ್ಲವರು

I. ಬಹು ಆಯ್ಕೆ ಉತ್ತರಗಳು

(1) C) ಇಮ್ಮಡಿ ಪುಲಕೇಶಿ
(2) B) ವಿಜ್ಜಿಕ
(3) C) ನರಸಿಂಹವರ್ಮ
(4) A) ಐಹೊಳೆ
(5) C) ಪಟ್ಟದ ಕಲ್ಲು
(6) A) ಅರ್ಜುನನ ತಪಸ್ಸು
(7) B) ಶಿವಸ್ಕಂದ ವರ್ಮ
(8) D) ಹ್ಯೂಯೆನ್ ತ್ಸಾಂಗ್

**II ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ**

9) ಇಮ್ಮಡಿ ಪುಲಕೇಶಿ ಹೊಂದಿರುವ ಬಿರುದುಗಳು ದಕ್ಷಿಣಾಪಥೇಶ್ವರ. ತ್ರಿಸಾಗರ ಗಳಿಂದಾವೃತವಾದ ಪ್ರದೇಶದ ಅಧಿಪತಿ.

10) ಕಂಚಿಯನ್ನಾಳಿದ ಪಲ್ಲವ ಅರಸರುಗಳು ಶಿವಸ್ಕಂದವರ್ಮ, ಮಹೇಂದ್ರವರ್ಮ, ಪ್ರಥಮ ನರಸಿಂಹವರ್ಮ, ಅಪರಾಜಿತ

11) ಕರ್ನಾಟಕ ಎಂಬ ಹೆಸರು ಕೊಟ್ಟ ರಾಜವಂಶ ಚಾಲುಕ್ಯರು

12) ಪುಲಕೇಶಿಯ ಪರಮಾಧಿಕಾರತ್ವವನ್ನು ಒಪ್ಪಿಕೊಳ್ಳದ ಕಾರಣ ಅವನನ್ನು ಸೋಲಿಸಿದನು

III. **ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿ.**

13.

- ಸಾಹಿತ್ಯಕ್ಕೆ ಪ್ರೋತ್ಸಾಹ ಮಾಡಿದನು
- ಕನ್ನಡ ಹಾಗೂ ಸಂಸ್ಕೃತ ಭಾಷೆಗಳು ಚೆನ್ನಾಗಿ ಬೆಳೆದವು
- ಕನ್ನಡವು ಅವರ ದೇಶ ಭಾಷೆಯಾಗಿತ್ತು
- ಈ ಕಾಲದ ಕಾವ್ಯದಲ್ಲಿ ತ್ರಿಪದಿ ಶೈಲಿಯ ಬೆಳವಣಿಗೆಯಾಯಿತು
- ಅನೇಕ ಶಾಸನಗಳು ಕನ್ನಡದಲ್ಲಿ ಬರೆಯಲ್ಪಟ್ಟಿವೆ
- ಕಪೆಅರಭಟ್ಟನ ಶಾಸನದ ಹಿಂದು ಪದವು ತ್ರಿಪದಿಯಲ್ಲಿದೆ
- ಸಂಸ್ಕೃತ ವಿದ್ವಾಂಸರಳೆಂದರೆ ಕವಿಶೇಲೆ, ವಿಜ್ಜಿಕ & ಅಕಳಂಕರು
- ಕೌಮುದೀಮಹೋತ್ಸವ & ಹರ ಪಾರ್ವತೀಯ ನಾಟಕಗಳು

14.

- ಬಾದಮಿ ಚಾಲುಕ್ಯರ ಅತ್ಯಂತ ಶಕ್ತಿಶಾಲಿ ಚಕ್ರವರ್ತಿಯಾಗಿದ್ದು ತಮ್ಮ ಚಕ್ರಾಧಿಪತ್ಯವನ್ನು ವಿಸ್ತರಿಸಿದನು
- ಪಲ್ಲವರ ಅರಸ ಮಹೇಂದ್ರವರ್ಮನನ್ನು ಸೋಲಿಸಿದನು
- ವರ್ಧನರ ಪ್ರಸಿದ್ಧ ಅರಸ ಹರ್ಷವರ್ಧನನ್ನು ಸೋಲಿಸಿ, ದಕ್ಷಿಣ ಪಥೇಶ್ವರ & ತ್ರಿಸಾಗರಗಳಿಂದಾವೃತಾವಾದ ಪ್ರದೇಶದ ಅಧಿಪತಿ ಎಂದು ಬಿರುದಾಂಕಿತನಾದನು
- ತನ್ನ ರಾಜ್ಯವನ್ನು ಪ್ರಾಂತ್ಯಗಳನ್ನಾಗಿಸಿ ತನ್ನ ಸಹೋದರರನ್ನು ಅಧಿಕಾರಿಗಳನ್ನಾಗಿ ನೇಮಿಸಿದನು
- ಹ್ಯೂಯೆನ್ ತ್ಸಾಂಗ್ ನು ಚಾಳುಕ್ಯ ರಾಜಧಾನಿಗೆ ಭೇಟಿ ನೀಡಿದ್ದನು
- ದೊರೆಯು ನ್ಯಾಯವಾದಿ ಹಾಗೂ ಕರುಣಳುವಾಗಿದ್ದನು
- ರಾಜನಿಗೆ ಪ್ರಜೆಗಳಲ್ಲಿ ಅಪಾರ ಪ್ರೀತಿ ಇದ್ದಿತು.
- ಆಶಾವಾದಿ ರಾಜನಾಗಿದ್ದನು, ವಿದೇಶಿ ದೊರೆಗಳೊಂದಿಗೆ ಸ್ನೇಹ ಸಂಬಂಧಗಳನ್ನು ಹೊಂದಿದ್ದನು
- ಪರ್ಶಿಯನ್ ದೊರೆಯಾದ ಇಮ್ಮಡಿ ಖುಸ್ರುವಿನೊಡನೆ ರಾಯಭಾರಿ ಸಂಬಂಧಗಳನ್ನು ಹೊಂದಿದ್ದನೆಮದು ಅರಬ್ ಇತಿಹಾಸಕಾರಾರು ತಿಳಿಸುತ್ತಾರೆ.

15)

- ಪಲ್ಲವ ದೊರೆಗಳು ಉತ್ತಮ ಆಡಳಿತ ಜೊತೆಗೆ ವಾಸ್ತು ಶಿಲ್ಪಕಲೆಗೆ ಪ್ರೋತ್ಸಾಹ ನೀಡಿದರು.
- ಅನೇಕ ಅರಮನೆಗಳನ್ನು ಕಲ್ಲಿನ ದೇವಾಲಯಗಳನ್ನು ಕಟ್ಟಿಸಿದರು
- ಏಕ ಶಿಲೆಗಳಲ್ಲಿ ಅದ್ಭುತವಾದ ವಿಗ್ರಹಗಳನ್ನು ಕೆತ್ತಿಸಲಾಗಿದೆ
- ಮಹಾಭಾರತ ಮತ್ತು ಭಾಗವತ ಕಥೆಗಳನ್ನು ಬಿಡಿಸಲಾಗಿದೆ
- ಅರ್ಜುನನ ತಪಸ್ಸು ಎನ್ನುವ ಕೆತ್ತನೆ ದೃಶ್ಯ ಅತ್ಯುತ್ತಮವಾಗಿದೆ
- ವೈಕುಂಠ ಪೆರುಮಾಳರ ದೇವಾಲಯಗಳು ಸುಪ್ರಸಿದ್ಧವಾಗವೆ
- ಮಹಾಬಲಿಪುರಂ ಕಡಲ ದಂಡೆಯ ದೇವಾಲಯ ಪ್ರಾಚೀನ ಭಾರತದ ವಾಸ್ತು ಶಿಲ್ಪದ ಉತ್ತಮ ಉದಾಹರಣೆಯಾಗಿದೆ

## ಅಧ್ಯಾಯ 20. ಮಾನ್ಯಕೇಟದ ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಲುಕ್ಯರು

### I. ಬಹು ಆಯ್ಕೆ ಉತ್ತರಗಳು

1. A) ಒಂದನೇ ಕೃಷ್ಣ
2. C) ಮಹಾ ಸಂಧಿ ವಿಗ್ರಹಿ
3. A) ಪಂಪ
4. B) ಅಮೋಘವರ್ಷ
5. A) ರನ್ನ
6. A)ಹಂಪಿ
7. C)ಒಂದನೇ ಸೋಮೇಶ್ವರ
8. C) ಕಾನೂನು

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.**

9 ಕನ್ನಡದ ಮೊದಲ ಗ್ರಂಥ ಕವಿರಾಜ ಮಾರ್ಗ.

10. ಉಭಯ ಕವಿ ಚಕ್ರವರ್ತಿ ಎಂಬ ಹೆಸರುಗಳಿಸಿದ ಕನ್ನಡದ ಕವಿ ಪೊನ್ನ.

11. ರನ್ನನು ಬರೆದ ಗದಾಯುದ್ದದ ಮತ್ತೊಂದು ಹೆಸರು ಸಾಹಸ ಭೀಮ ವಿಜಯ

12. ಕಲ್ಯಾಣದ ಚಾಲುಕ್ಯ ದೊರೆ ಮೂರನೇ ಸೋಮೇಶ್ವರ ಬರೆದ ಗ್ರಂಥ ಮಾನಸೋಲ್ಲಾಸ

**III. ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

13.

- ಅಗ್ರಹಾರಗಳು,ಮಠಗಳು ಪ್ರಮುಖ ಶೈಕ್ಷಣಿಕ ಕೇಂದ್ರಗಳಾಗಿದ್ದವು,
- ಸಂಸ್ಕೃತ, ವೇದ,ಜ್ಯೋತಿಷ್ಯ, ತರ್ಕಶಾಸ್ತ್ರ, ಪುರಾಣಗಳಲ್ಲಿಶಿಕ್ಷಣ ನೀಡುತ್ತಿದ್ದರು.
- ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಸಾಲೊಟಗಿ ಪ್ರಮುಖ ವಿದ್ಯಾ ಕೇಂದ್ರವಾಗಿತ್ತು.

14.

- ಎಲ್ಲೋರಾದಲ್ಲಿ ಕಲ್ಲಿನಲ್ಲಿ ಕೊರೆದು ಮಾಡಿರುವ ದೇವಾಲಯಗಳು ಭಾರತೀಯ ಕಲೆಗೆ ನೀಡಿದ ಮಹಾನ್ ಕೊಡುಗೆಗಳಾಗಿವೆ.
- ಒಂದನೇ ಕೃಷ್ಣನು ಕೊರೆಸಿದ ಎಲ್ಲೋರಾದ ಏಕಶಲಾ ಕೈಲಾಸ ಮಂದಿರವು ಅದ್ಭುತ ರಚನೆಯಾಗಿದೆ.
- 100 ಅಡಿ ಎತ್ತರದ ಬೃಹತ್  ಬಂಡೆಯನ್ನು ಕೊರೆದು ನಿರ್ಮಿಸಲಾಗಿದೆ.
- ಇಲ್ಲಿಯೇ ಪ್ರಸಿದ್ದ ದಶಾವತಾರ ಗುಹಾಲಯವಿದೆ.

**IV. ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿ.**

15.

- ರಾಜ ಪ್ರಭುತ್ವ ವಂಶಪಾರಣಪರ್ಯವಾಗಿತ್ತು.
- ಅರಸರಿಗೆ ಸಹಾಯ ಮಾಡಲು ಮಂತ್ರಿಮಂಡಲವಿರುತ್ತಿತ್ತು.
- ಮಹಾಸಂಧಿ ವಿಗ್ರಹಿ ವಿದೇಶಿ ವ್ಯಾಪಾರ ನೋಡಿಕೊಳ್ಳುತ್ತಿದ್ದನು.
- ಸಾಮ್ರಾಜ್ಯವನ್ನು ಮಂಡಲ, ವಿಷಯ,ನಾಡು, ಗ್ರಾಮಗಳಾಗಿ ವಿಂಗಡಿಸಲಾಗಿತ್ತು.
- ಗ್ರಾಮದ ಮುಖ್ಯಸ್ಥನಿಗೆ ಗ್ರಾಮಪತಿ ಅಥವಾ ಪ್ರಭುಗಾವುಂಡ ಎನ್ನುತ್ತಿದ್ದರು.
- ನಾಡುಗಳಲ್ಲಿ 'ನಾಡಗಾವುಂಡ' ಎಂಬ ಅಧಿಕಾರಿ ಇರುತ್ತಿದ್ದನು.
- ಭೂಕಂದಾಯ, ವೃತ್ತಿತೆರಿಗೆ ರಾಜ್ಯದ ಆದಾಯವಾಗಿತ್ತು.
- ವಿದೇಶಿ ವ್ಯಾಪಾರದಿಂದಲು ಸುಂಕ ಬರುತ್ತಿತ್ತು.

16.

- ಕನ್ನಡ ಹಾಗೂ ಸಂಸ್ಕೃತ ಭಾಷಾ ಬೆಳವಣಿಗೆಗೆ ವಿಶೇಷ ಗಮನ ನೀಡಿದ್ದರು.
- ಜೈನ ವಿದ್ವಾಂಸರಿಂದ ಕನ್ನಡ ಸಾಹಿತ್ಯ ಕೃಷಿಯಾಯಿತು. ಗದಾಯುದ್ದ, ಪಂಚತಂತ್ರ, ವಿಕ್ರಮಾಂಕದೇವಚರಿತೆ, ಧರ್ಮಾಮೃತ, ಮಿತಾಕ್ಷರ ಪ್ರಮುಖ ಗ್ರಂಥಗಳಾಗಿವೆ.
- ರಾಜ 3ನೇ ಸೋಮೇಶ್ವರ ಬರೆದ ಮಾನಸೋಲ್ಲಾಸ ಸಂಸ್ಕೃತ ವಿಶ್ವಕೋಶ, ಜಗದೇಕಮಲ್ಲ ಸಂಗೀತ ಚೂಡಾಮಣಿ ಗ್ರಂಥ ರಚಿಸಿದ್ದನು.

- ವಚನ ಸಾಹಿತ್ಯ ಅಭಿವೃದ್ಧಿಯಾಯಿತು. ಬಸವಣ್ಣ, ಅಕ್ಕ ಮಹಾದೇವಿ, ಅಲ್ಲಮಪ್ರಭು, ಮಾಚಯ್ಯ ಪ್ರಮುಖ ವಚನಕಾರರಾಗಿದ್ದರು.

17.

- ಇವರ ಕಲಾ ಕ್ಷೇತ್ರದ ಕೊಡುಗೆ ಅಪಾರ. ಲಕ್ಕುಂಡಿಯ ಕಾಶಿವಿಶ್ವೇಶ್ವರ , ಇಟಗಿಯ ಮಹಾದೇವಾಲಯ, ಮಲ್ಲಿಕಾರ್ಜುನ ಮಂದಿರ, ಗದಗಿನ ತ್ರಿಕೂಟೇಶ್ವರ ಇವರ ಕಾಲದ ದೇವಾಲಯಗಳು.
- ಸಂಗೀತ ನೃತ್ಯಗಳು ಅಭಿವೃದ್ಧಿಗೊಂಡವು .ಕಲಾವಿದರನ್ನು ನೇಮಿಸಲಾಯಿತು.
- ಮಹಾರಾಣಿ ಚಂದ್ರಲೇಖೆ ಅನೇಕ ವಿದ್ವಾಂಸರಿಗೆ ಮತ್ತು ನೃತ್ಯಗಾರ್ತಿಯರಿಗೆ ಆಶ್ರಯ ನೀಡಿದ್ದರು.
- ಸಂಗೀತ ನೃತ್ಯ ಕಲೆ ಆಭರಣ ಮುಂತಾದ ವಿಷಯಗಳು ಮಾನಸೋಲ್ಲಾಸ ಹಾಗೂ ಸಂಗೀತ ಚೂಡಾಮಣಿ ಗ್ರಂಥಗಳಲ್ಲಿ ವ್ಯಕ್ತವಾಗಿದೆ

## ಅಧ್ಯಾಯ 21. ಚೋಳರು ಮತ್ತು ದ್ವಾರಸಮುದ್ರದ ಹೊಯ್ಸಳರು

**ಬಹು ಆಯ್ಕೆ ಉತ್ತರಗಳು**

1. B) ತಂಜಾವೂರು
2. C) ಒಂದನೇ ರಾಜ ರಾಜ ಚೋಳ
3. A) ಸೊಸೆವೂರು
4. D) ಬಿಟ್ಟಿದೇವ
5. B) ರಾಘವಾಂಕ
6. A) ಕೇತು ಮಲ್ಲ

**ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.**

7. ಗಂಗೈಕೊಂಡ ಚೋಳಪುರಂ' ನಗರವನ್ನು ಕಟ್ಟಿಸಿದ ಚೋಳ ದೊರೆ ಒಂದನೇ ರಾಜೇಂದ್ರ ಚೋಳ.
8. ಕವಿ ಚಕ್ರವರ್ತಿ' ಎಂಬ ಬಿರುದು ಪಡೆದ ಕನ್ನಡದ ಕವಿ ರನ್ನ.
9. ರಾಮಾನುಜಾಚಾರ್ಯರು ಸ್ಥಾಪಿಸಿದ ಪಂಥ ವಿಶಿಷ್ಟಾದ್ವೈತ ಪಂಥ.
10. ಒಂದನೇ ರಾಜರಾಜ ಚೋಳನು ತಂಜಾವೂರಿನಲ್ಲಿ ಕಟ್ಟಿಸಿದ ದೇವಸ್ಥಾನ ಬೃಹದೇಶ್ವರ ದೇವಾಲಯ.
11. ಚೋಳ ಸಾಮ್ರಾಜ್ಯದ ಶಿಲ್ಪಿ ಒಂದನೇಯ ರಾಜರಾಜ ಚೋಳ

**III. ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ**

12.

- ಗ್ರಾಮದ ಸ್ವಯಂಮಾಧಿಪತ್ಯದ ಬೆಳವಣಿಗೆ
- ಗ್ರಾಮಸಭೆಗಳು ಪ್ರಥಮ ಸಭೆಗಳಾಗಿದ್ದವು
- ತರ ಕುರಂ ಒಂದು ಹಳ್ಳಿ, ಪ್ರತಿ ಕುರಂಗೂ ಮಹಾಸಭೆಯ ಎನ್ನುವ ಗ್ರಾಮಸಭೆ ಇದ್ದಿತು, ಇದನ್ನು ಪೆರುಂಗುರಿ ಎಂದು ಅದರ ಸದಸ್ಯರನ್ನು ಪೆರುಮಕ್ಕಳ್ ಎಂದು ಕರೆಯಾಗುತ್ತಿತ್ತು.
- ಸದಸ್ಯರನ್ನು ಚುನಾವಣೆ ಮೂಲಕ ಆರಿಸಲಾಗುತ್ತಿತ್ತು.
- ಸಂಸ್ಕೃತ ವಿದ್ವಾಂಸರು ಹಾಗೂ ಶ್ರೀಮಂತರು ಚುನಾವಣೆಗೆ ಅರ್ಹರಾಗಿದ್ದರು.

13.

- ಕನ್ನಡ ಸಾಹಿತ್ಯವು ವಿಪುಲವಾಗಿ ಬೆಳೆಯಿತು
- ಜಗನ್ನಾಥ ವಿಜಯ, ಯೋಶೋಧರ ಚರಿತೆ, ಗಿರಿಜಾ ಕಲ್ಯಾಣ ಶಬ್ದಮಣಿ ದರ್ಪಣ, ಮುಂತಾದ ಗ್ರಂಥಗಳು ರಚನೆಯಾದವು.
- ಸಂಸ್ಕೃತದಲ್ಲೂ, ಶ್ರಿಭಾಷ್ಯ, ಶ್ರೀಗುಣ ರತ್ನಕೋಶ ರಚನೆಯಾದವು.

**ಕೆಳಗಿನ ಪ್ರಶ್ನೆಗಳಿಗೆ ಏಳು-ಏಂಟು ವಾಕ್ಯದಲ್ಲಿ ಉತ್ತರಿಸಿ.**

14)

- ಚೋಳರ ಒಂದನೆಯ ರಾಜರಾಜ ಪ್ರಸಿದ್ಧ ಅರಸನಾಗಿದ್ದಾನೆ
- ಶೂರ, ಶ್ರೇಷ್ಠ, ಯೋಧ ಹಾಗೂ ದಕ್ಷ ಆಡಳಿತಗಾರನಾಗಿದ್ದನು
- ಚೋಳ ರಾಜ್ಯದ ಶಿಲ್ಪಿಯಾಗಿ, ಅದರ ತಳಹದಿಯನ್ನು ಭದ್ರ ಮಾಡಿ ತನ್ನ ರಾಜ್ಯವನ್ನು ವಿಸ್ತರಿಸಿದನು
- ನೌಕಾ ಸೈನ್ಯವನ್ನು ನಿರ್ಮಿಸಿ ಶ್ರೀಲಂಕಾವನ್ನು ವಶಪಡಿಸಿಕೊಂಡನು
- ಮಲೇಷಿಯಾ, ಸಿಂಗಪೂರಗಳಲ್ಲಿ, ತಮಿಳರ ಪ್ರಾಬಲ್ಯ
- ಸಾಗರೋತ್ತರ ವಾಣಿಜ್ಯ ವ್ಯವಹಾರ ಪ್ರಾರಂಭಿಸಿದನು
- ತಂಜಾವೂರಿನ ವೃಹದೇಶ್ವರ ದೇವಾಲಯ ಅತ್ಯಂತ ಪ್ರಸಿದ್ಧವಾದುದು.

15.

- ಚೋಳರಿಂದ ಗಂಗವಾಡಿಯನ್ನು ಗೆದ್ದು '**ತಲಕಾಡುಗೊಂಡ**' ಎಂಬ ಬಿರುದನ್ನು ಪಡೆದನು.
- ವಿಜಯದ ನೆನಪಿಗಾಗಿ ತಲಕಾಡಿನಲ್ಲಿ ಕೀರ್ತಿನಾರಾಯಣ ದೇವಾಲಯವನ್ನು ಹಾಗೂ ಬೇಲೂರಿನ ಚನ್ನಕೇಶವ ದೇವಾಲಯವನ್ನು ಕಟ್ಟಿಸಿದನು.
- ರಾಜ್ಯ ವಿಸ್ತರಿಸಲು ಪ್ರಯತ್ನಿಸಿ ಚಾಲುಕ್ಯರ ಆರನೇ ವಿಕ್ರಮಾದಿತ್ಯನಿಂದ ಸೋತನು
- ರಾಮಾನುಜಾಚಾರ್ಯರು ತಮ್ಮ ವಿಶಿಷ್ಟಾದ್ವೈತ ತತ್ವವನ್ನು ಚೋಳ ರಾಜ್ಯದಲ್ಲಿ ಪ್ರಚಾರ ಮಾಡಲಾಗದೆ ಬಿಟ್ಟಿದೇವನ ಆಶ್ರಯದಲ್ಲಿ ಬಂದು ಕರ್ನಾಟಕದಾದ್ಯಂತ ಪ್ರಚಾರ ಮಾಡಿದರು
- ದಂಡನಾಯಕನಾದ ಕೇತಮಲ್ಲನು ಹಳೇಬೀಡಿನಲ್ಲಿ ಹೊಯ್ಸಳೇಶ್ವರ ಮತ್ತು ಶಾಂತಲೇಶ್ವರ ದೇವಾಲಯಗಳನ್ನು ಕಟ್ಟಿಸಿದನು.
- ಇವರ ಕಾಲದಲ್ಲಿ ಅನೇಕ ಕಡೆ ಜೈನ ಬಸದಿಗಳನ್ನು ಮತ್ತು ಜೈನ ದೇವಾಲಯಗಳನ್ನು ನಿರ್ಮಾಣವಾದವು.

# ಅಧ್ಯಾಯ 22.ಪ್ರಜಾಪ್ರಭುತ್ವ

**I. ಬಹು ಆಯ್ಕೆ ಪ್ರಶ್ನೆಗಳು**

1) A) 2005
2) A) 18 ವರ್ಷಗಳು
3) C) 61ನೇ ತಿದ್ದುಪಡಿ
4) B) ಸ್ವಿಡ್ಜರ್‌ಲ್ಯಾಂಡ್

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ**

5) ಡೆಮಾಕ್ರೆಸಿ' ಪದವು ಡೆಮಾಸ್ ಮತ್ತು ಕ್ರೇಷಿಯಾ ಎಂಬ ಪದಗಳಿಂದ ಬಂದಿದೆ.
6) ಅಬ್ರಾಹಂ ಲಿಂಕನ್ ರವರ ಪ್ರಕಾರ ಪ್ರಜಾಪ್ರಭುತ್ವ ಎಂದರೆ ಪ್ರಜೆಗಳಿಂದ, ಪ್ರಜೆಗಳಿಗಾಗಿ ಮತ್ತು ಪ್ರಜೆಗಳಿಗೋಸ್ಕರ ರಚನೆಗೊಂಡ ಸರ್ಕಾರ.
7) ಐದು ವರ್ಷಗಳಿಗೊಮ್ಮೆ ನಡೆಯುವ ಚುನಾವಣೆಗಳನ್ನು ಸಾರ್ವತ್ರಿಕ ಚುನಾವಣೆಗಳು ಎನ್ನುವರು.
8) ಪ್ರಜಾಪ್ರಭುತ್ವ ಒಂದು ಜೀವನ ವಿಧಾನವೂ ಆಗಿದೆ ಎಂದು ವ್ಯಾಖ್ಯಾನಿಸಿದವರು ಹರ್ಮನ್ ಫೈನರ್

**III. ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ**

9) ಪ್ರಜಾಪ್ರಭುತ್ವದ ವಿಧಗಳು

ಎ) ಪ್ರತ್ಯಕ್ಷ ಪ್ರಜಾಪ್ರಭುತ್ವ ಬಿ) ಪರೋಕ್ಷ ಪ್ರಜಾಪ್ರಭುತ್ವ

10)

ಪ್ರಜಾ ಪ್ರಭುತ್ವದ ಎರಡು ಲಕ್ಷಣಗಳು.

- ಪ್ರಜಾಪ್ರಭುತ್ವ ಜನರ ಸರ್ಕಾರವಾಗಿದೆ.
- ಪ್ರತಿನಿಧಿಗಳು ಜನರ ಪರವಾಗಿ ಕಾನೂನು ರಚಿಸುತ್ತಾರೆ..

**V. ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿ**

11) ಜನರು ತಮ್ಮ ಪ್ರತಿನಿಧಿಗಳನ್ನು ನಿಯತಕಾಲಿಕ ಚುನಾವಣೆಗಳಲ್ಲಿ ಚುನಾಯಿಸುತ್ತಾರೆ. ಚುನಾಯಿತ ಸದಸ್ಯರು ಶಾಸನಗಳನ್ನು ರೂಪಿಸಿಕೊಂಡು ಆಡಳಿತ ನಿರ್ವಹಣೆ ಮಾಡುವ ಪದ್ಧತಿಯೇ ಪರೋಕ್ಷ ಪ್ರಜಾಪ್ರಭುತ್ವ. ಭಾರತ ಪರೋಕ್ಷ ಪ್ರಜಾ ಪ್ರಭುತ್ವ ಹೊಂದಿದೆ.

**12).** ಪ್ರಜಾಪ್ರಭುತ್ವದ **ಎರಡು ವಿಧ** :

**ಪ್ರತ್ಯಕ್ಷ ಪ್ರಜಾಪ್ರಭುತ್ವ** : ಜನರು ತಮ್ಮದೇ ಸರ್ಕಾರವನ್ನು ಚುನಾವಣೆ ಮೂಲಕ ರಚಿಸಿಕೊಂಡು ತಮ್ಮ ಪ್ರಗತಿಗೆ ಸಹಕಾರಿಯಾಗುವ ನಿಯಮ ಮತ್ತು ಕಾನೂನು ಗಳನ್ನು ರೂಪಿಸಿಕೊಳ್ಳುತ್ತಾರೆ.

**ಪರೋಕ್ಷ ಪ್ರಜಾಪ್ರಭುತ್ವ** : ಜನರು ನಿಯತಕಾಲಿಕ ಚುನಾವಣೆಯಲ್ಲಿ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಾರೆ. ಚುನಾಯಿತ ಪ್ರತಿನಿಧಿಗಳು ಕಾನೂನು ರೂಪಿಸಿಕೊಂಡು ಆಡಳಿತ ನಿರ್ವಹಣೆ ಮಾಡುತ್ತಾರೆ.

V **ಈ ಕೆಳಗಿನ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯಗಳಲ್ಲಿ ಉತ್ತರಿಸಿ**

13)

- ಪ್ರಜೆಗಳಿಗೆ ಹಕ್ಕು ಮತ್ತು ಸ್ವಾತಂತ್ರ್ಯವನ್ನು ನೀಡುತ್ತದೆ.
- ಸ್ವತಂತ್ರ್ಯ ನ್ಯಾಯಾಂಗ ವ್ಯವಸ್ಥೆಯ ಮೂಲಕ ಪ್ರಜೆಗಳನ್ನು ರಕ್ಷಿಸುತ್ತದೆ.
- ಇದು ಸಮಾನತೆಯ ತತ್ವ ಆಧಾರಿತವಾಗಿದೆ.
- ಜನರು ಸಮರ್ಥ ನಾಯಕರನ್ನು ಚುನಾಯಿಸಲು ಅವಕಾಶ ನೀಡುತ್ತದೆ.
- ತೀರ್ಮಾನಗಳು ಸಾರ್ವಜನಿಕ ಅಭಿಪ್ರಾಯ ಮತ್ತು ಚರ್ಚೆಯ ಮೂಲಕ ನಿರ್ಧರಿಸಲ್ಪಡುತ್ತವೆ.
- ಪ್ರಜೆಗಳ ವ್ಯಕ್ತಿತ್ವ ವಿಕಸನಕ್ಕೆ ಅವಕಾಶ ಕಲ್ಪಿಸುತ್ತದೆ.
- ಆಡಳಿತ ಪಕ್ಷದ ಅಧಿಕಾರ ದುರುಪಯೋಗ ಮಾಡಿಕೊಳ್ಳದಂತೆ ತಡೆಯಲು ವಿರೋಧ ಪಕ್ಷ  ಅಸ್ತಿತ್ವದಲ್ಲಿರುತ್ತದೆ.
- ಪೌರರಲ್ಲಿ ರಾಷ್ಟ್ರೀಯತೆ, ದೇಶಭಕ್ತಿ, ವಿವಿಧತೆಯಲ್ಲಿ ಏಕತೆಯನ್ನು ಬೆಳೆಸುತ್ತದೆ.

14)

- ಜನತಾ ಸರ್ಕಾರವಾಗಿದೆ
- ಪ್ರತಿನಿಧಿಗಳನ್ನು ಜನರೇ ಚುನಾಯಿಸುತ್ತಾರೆ
- ಪ್ರತಿನಿಧಿಗಳು ಜನರ ಪರ ಕಾನೂನು ರಚಿಸುತ್ತಾರೆ.
- ಸಾರ್ವತ್ರಿಕ ವಯಸ್ಕ ಮತದಾನ ತತ್ವ  ಆಧರಿಸಿದೆ.
- ಎಲ್ಲಾ ಪ್ರಜೆಗಳು ಕಾನೂನು ದೃಷ್ಟಿಯಲ್ಲಿ ಸಮಾನರು.
- ರಾಜಕೀಯ ಪಕ್ಷಗಳು ಅಸ್ತಿತ್ವದಲ್ಲಿರುತ್ತವೆ.
- ಜನರ ಸರ್ವತೋಮುಖ ಅಭಿವೃದ್ಧಿಗೆ ವಿಶೇಷ ಗಮನ ಹರಿಸುತ್ತದೆ.
- ಪ್ರಜಾಪ್ರಭುತ್ವ ವ್ಯಕ್ತಿ ಪೂಜೆಗೆ ವಿರುದ್ಧವಾದದ್ದು.

## ಅಧ್ಯಾಯ 23.ಸ್ಥಳೀಯ ಸ್ವಯಂ ಸರ್ಕಾರಗಳು

.

**I. ಬಹು ಆಯ್ಕೆಯ ಪ್ರಶ್ನೆಗಳು**

1) A) 73ನೇ ಮತ್ತು 74ನೇ ತಿದ್ದುಪಡಿ
2) D) ಮೇಲಿನ ಎಲ್ಲಾ ವರ್ಗಗಳಿಗೆ
3) B) 1 ಹಾಗೂ 10
4) B) ಮಹಾನಗರ ಪಾಲಿಕೆ ಆಯುಕ್ತರು

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ**

5) ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ 1993 ರಲ್ಲಿ ಜಾರಿಗೆ ಬಂದಿತು.
6) ಗ್ರಾಮ ಸಭೆಯ ಅಧ್ಯಕ್ಷತೆಯನ್ನು  ಗ್ರಾಮ ಪಂಚಾಯಿತಿ ಅಧ್ಯಕ್ಷರು ವಹಿಸಿರುತ್ತಾರೆ.
7) ಗ್ರಾಮ ಪಂಚಾಯಿತಿಯ ಆಡಳಿತಾವಧಿ  ಐದು ವರ್ಷಗಳು.
8) ತಾಲ್ಲೂಕು ಪಂಚಾಯಿತಿ ಸಭೆಗಳ ಅವಧಿ ಐದು ವರ್ಷಗಳು
9) ಜಿಲ್ಲಾ ಪಂಚಾಯ್ತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅಧಿಕಾರಾವಧಿ ಮೂವತ್ತು ತಿಂಗಳು.

10) ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ (CEO)ರವರನ್ನು ರಾಜ್ಯ ಸರ್ಕಾರ ನೇಮಿಸುತ್ತದೆ.

**III. ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ**

11)

- ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸ್ಥಳೀಯರನ್ನೇ ಬಳಸಿಕೊಳ್ಳುವುದು.
- ಜನ ಸಾಮಾನ್ಯರಿಗೆ ಆಡಳಿತ ಜ್ಞಾನ ಒದಗಿಸುವುದು.

12)

- ನೀರು, ಆರೋಗ್ಯ, ಶಿಕ್ಷಣ, ಗ್ರಂಥಾಲಯಗಳ ಮೇಲಿನ ಉಪಕರಣದಿಂದ ಸಂಗ್ರಹವಾಗುವ ಹಣ.
- ಪಂಚಾಯಿತಿಯ ಆಸ್ತಿಗಳಿಂದ ಬರುವ ಬಾಡಿಗೆ ಮತ್ತು ಗುತ್ತಿಗೆ ಹಣ

13.)

- ಗ್ರಾಮ ಪಂಚಾಯಿತಿಗಳ ವಾರ್ಷಿಕ ಯೋಜನಾ ಪ್ರಸ್ತಾವನೆಗಳನ್ನು ಕ್ರೋಢೀಕರಿಸಿ ಜಿಲ್ಲಾ ಪಂಚಾಯಿತಿಗೆ ಸಲ್ಲಿಸುವುದು.
- ರಾಜ್ಯ ಸರ್ಕಾರ ಅಥವಾ ಜಿಲ್ಲಾ ಪಂಚಾಯಿತಿಗಳು ಸೂಚಿಸುವ ಕಲ್ಯಾಣ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವುದು.

14. ಎ) ನಗರಪಾಲಿಕೆ ಬಿ) ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ ಸಿ) ದಂಡು ಪ್ರದೇಶದ ಭಾಗ.

**ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿ**

15)

- ಆಯ-ವ್ಯಯ ಪಟ್ಟಿ ತಯಾರಿಸಿ ಅನುಮೋದನೆ ಪಡೆಯುವುದು.
- ನಗರ ಅಥವಾ ಪಟ್ಟಣದ ಸಂಪೂರ್ಣ ಆಡಳಿತ ನೋಡಿಕೊಳ್ಳುವುದು.
- ಉತ್ತಮ ನಗರ ಯೋಜನೆ ರೂಪಿಸುವುದು.
- ಜನನ – ಮರಣ ನೋಂದಣಿ ಮಾಡಿಕೊಳ್ಳುವುದು.
- ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವುದು.
- ನಗರಗಳಲ್ಲಿ ಒಳಚರಂಡಿ ವ್ಯವಸ್ಥೆ ಹಾಗೂ ಘನತ್ಯಾಜ್ಯ ವಿಲೇವಾರಿಗೆ ಸೌಕರ್ಯ ಕಲ್ಪಿಸುವುದು.

## ಅಧ್ಯಾಯ 24.ದಿನನಿತ್ಯದ ಜೀವನದಲ್ಲಿ ಸಮಾಜಶಾಸ್ತ್ರ

**I. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.**

1. ನಮ್ಮ ದಿನನಿತ್ಯದ ಜೀವನದಲ್ಲಿ ಅನೇಕ ಜನರೊಡನೆ ನಡೆಸುವ ಒಡನಾಟವನ್ನು ಸಾಮಾಜಿಕ ಅಂತಕ್ರಿಯೆ ಎನ್ನುವರು.
2. ಪ್ರತಿಯೊಬ್ಬ ವ್ಯಕ್ತಿ ತನಗೆ ವಹಿಸಿದ ಪಾತ್ರವನ್ನು ನಿರ್ವಹಿಸುವುದೇ ಪಾತ್ರ ಪ್ರಜ್ಞೆ .

3. ಸಂಭಾಷಣೆ ನಡೆಸಲು ಭಾಷೆಯ ಅಗತ್ಯವಿದೆ.
4. ಇಬ್ಬರಿಗಿಂತ ಹೆಚ್ಚು ವ್ಯಕ್ತಿಗಳು ಪ್ರತಿನಿತ್ಯ ಭಾಷೆ ಸಂಕೇತಗಳ ಮೂಲಕ ಪರಸ್ಪರ ಸಂವಹನ ನಡೆಸುವುದೇ ಸಾಮಾಜಿ ಒಡನಾಟ.

**II. ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿ.**

5)

- ಸಂವಹನಕ್ಕೆ ಭಾಷೆ ಅಗತ್ಯವಾಗಿದೆ.
- ಅಭಿಪ್ರಾಯ ವ್ಯಕ್ತಪಡಿಸಲು ಭಾಷೆ ಬೇಕು,
- ಭಾವನೆಗಳನ್ನು ವ್ಯಕ್ತಪಡಿಸಲು ಮತ್ತು ಹಂಚಿಕೊಳ್ಳಲು ಭಾಷೆ ಬೇಕು,
- ಮಗುವಿನ ಶೈಕ್ಷಣಿಕ ಬೆಳವಣಿಗೆಗೆ ಭಾಷೆ ಬೇಕು,
- ಸುತ್ತಲಿನ ಪ್ರಪಂಚ ಅರ್ಥೈಸಿಕೊಳ್ಳಲು ಭಾಷೆ ಬೇಕು,
- ಭಾಷೆ ತಿಳಿವಳಿಕೆಯ ಅವಿಭಾಜ್ಯ ಅಂಗವಾಗಿದೆ.

6).

ಪ್ರತಿಯೊಬ್ಬ ವ್ಯಕ್ತಿ ತನಗೆ ವಹಿಸಿದ ಪಾತ್ರ ನಿರ್ವಹಿಸುವುದನ್ನೇ ಪಾತ್ರ ಪ್ರಜ್ಞೆ ಎನ್ನುವರು.

ಉದಾಹರಣೆಗೆ - ಆಸ್ಪತ್ರೆಯಲ್ಲಿ ವೈದ್ಯರು ರೋಗಿಯನ್ನು ಪರೀಕ್ಷೆ ಮಾಡಿದ ಮೇಲೆ ಅದಕ್ಕೆ ಅಗತ್ಯ ಔಷದಿ ಮತ್ತು ಚಿಕಿತ್ಸೆಯನ್ನು ಸೂಚಿಸುತ್ತಾರೆ. ಅದಕ್ಕೆ ಅನುಗುಣವಾಗಿ ದಾದಿಯರು ಔಷಧ ನೀಡಿ ರೋಗಿಯನ್ನು ಶುಶ್ರೂಷೆ ಮಾಡುತ್ತಾರೆ. ಶಾಲೆಯಲ್ಲಿ ಉಪಾಧ್ಯಾಯರು ಬೋಧಿಸುವುದು, ವಿದ್ಯಾರ್ಥಿಗಳು ಅರ್ಥೈಸಿಕೊಂಡು ಪರೀಕ್ಷೆ ಎದುರಿಸುವುದು.

## ಅಧ್ಯಾಯ 25.ಸಮಾಜದ ಪ್ರಕಾರಗಳು

**I ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.**

1. . ಕೃಷಿ ಸಮಾಜದಲ್ಲಿ ಉಳುಮೆಗೆ ಬಳಸುವ ಸಾಧನ ನೇಗಿಲು.
2. ಬೇಟೆಯಾಡುವ ಸಮಾಜದ ಜನರು ಸದಾ ಚಲಿಸುತ್ತಿರುತ್ತಾರೆ.
3. ತಮ್ಮ ಜೀವನಾಧಾರಕ್ಕೆ ಪೂರಕವಾಗಿ ಪಶುಗಳನ್ನು ಸಾಕುವ ಸಮಾಜವೇ ಪಶುಪಾಲನಾ ಸಮಾಜ.
4. ಬೇಸಾಯವನ್ನು ಅವಲಂಬಿಸಿ ಬದುಕುವ ಸಮಾಜ ಕೃಷಿಕ ಸಮಾಜ.
5. ಸಮಾಜವನ್ನು ಜನರ ಪ್ರಧಾನ ಉದ್ಯೋಗ ಮತ್ತು ಚಟುವಟಿಕೆಗಳ ಮೇಲೆ ವರ್ಗೀಕರಿಸಿದೆ .
6. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಅವಲಂಬಿಸಿರುವ ಸಮಾಜ ಕೈಗಾರಿಕಾ ಸಮಾಜ

**II. ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿ**

7. ಸಮಾಜದ ವಿವಿಧ ಪ್ರಕಾರಗಳು
    - ಬೇಟೆಯಾಡುವ ಮತ್ತು ಆಹಾರ ಸಂಗ್ರಹಿಸುವ ಸಮಾಜ
    - ಪಶು ಪಾಲನಾ ಸಮಾಜ ,
    - ಕೃಷಿಕ ಸಮಾಜ,

- ಕೈಗಾರಿಕಾ ಸಮಾಜ

8.

- ಬೇಸಾಯವನ್ನು ಅವಲಂಬಿಸಿ ಬದುಕುವ ಸಮಾಜ.
- ಕೃಷಿ ಉತ್ಪನ್ನಗಳೇ ಜೀವನಾಧಾರ .- ಒಂದೇ ಕಡೆ ನೆಲೆಸಿರುತ್ತಾರೆ.
- ಕೃಷಿ ಯೊಂದಿಗೆ ಇತರೆ ಕಾರ್ಯಗಳಲ್ಲಿ ತೊಡಗಿಕೊಳ್ಳುವರು.
- ವಿವಿಧ ರೀತಿಯ ಕೌಶಲ್ಯ ಹೊಂದಿರುತ್ತಾರೆ

## ಅಧ್ಯಾಯ 26.ಜಲಗೋಳ

**I. ಬಹು ಆಯ್ಕೆ ಪ್ರಶ್ನೆಗಳು**

1. B)ಕೊಲ್ಲಿ
2. A)ಸಾಂಬಾರ್ ಸರೋವರ
3. C)1000 ಭಾಗದಲ್ಲಿ 35 ಭಾಗ
4. B)ಸುಯೆಜ್ ಕಾಲುವೆ,
5. A)100 ಫ್ಯಾದಮ್

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.**

6. ಭೂ ಮೇಲ್ಮೈನ ಶೇಕಡಾ 70.78 ಭಾಗ ನೀರಿನಿಂದ ಆವರಿಸಿರುವುದರಿಂದ ಭೂಮಿಯನ್ನು ನೀಲಿ ಗ್ರಹ ಎಂದು ಕರೆಯಲಾಗುತ್ತದೆ.
7. ಜಲಸಂಧಿಗೆ ಒಂದು ಉದಾಹರಣೆ ಬೇರಿಂಗ್ ಜಲಸಂಧಿ
8. ಅತ್ಯಂತ ಆಳ ಸಾಗರ ತಗ್ಗು ಚಾಲೆಂಜರ್ ತಗ್ಗು
9. ಪ್ರಪಂಚದಲ್ಲೇ ಅತಿ ಹೆಚ್ಚು ಲವಣತೆ ಹೊಂದಿರುವ ಜಲ ಭಾಗ ಟರ್ಕಿಯ ವ್ಯಾನ್ ಸರೋವರ .

10 ಒಂದು ಅಧಿಕ ಉಬ್ಬರದಿಂದ ಮತ್ತೊಂದು ಅಧಿಕ ಒಬ್ಬರದ ನಡುವಿನ ವೇಳೆಯ ಅಂತರ12 ಗಂಟೆ 26 ನಿಮಿಷಗಳು .

11. ಹುಣ್ಣಿಮೆಯ ದಿನಗಳಲ್ಲಿ ಕಂಡು ಬರುವ ಒಬ್ಬರದ ಬಗೆ ಅಧಿಕ ಉಬ್ಬರ.
12. ಸೂರ್ಯನ ಕಿರಣಗಳು ನೀರಿನಲ್ಲಿ 200 ಮೀಟರ್ ವರೆಗೆ ಆಳದವರೆಗೆ ಪ್ರವೇಶಿಸುತ್ತವೆ.
13. ಉಷ್ಣ ವಲಯದಲ್ಲಿ ಸಾಗರದ ಲವಣತೆ ಹೆಚ್ಚಿರುತ್ತದೆ.

**III. ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

14.

- ಖಂಡಾವರಣ ಪ್ರದೇಶ
- ಖಂಡಾವರಣ ಇಳಿಜಾರು
- ಆಳ ಸಾಗರ ಮೈದಾನ
- ಸಾಗರ ತಗ್ಗುಗಳು

15.

ನಿಶ್ಚಿತ ದಿಕ್ಕಿನಲ್ಲಿ ನಿರಂತರವಾಗಿ ಹರಿಯುವ ಸಾಗರದ ಮೇಲ್ಮೈ ನೀರನ್ನು ಸಾಗರ ಪ್ರವಾಹಗಳೆಂದು ಕರೆಯುವರು.

- ಉಷ್ಣಸಾಗರ ಪ್ರವಾಹಗಳು
- ಶೀತಸಾಗರ ಪ್ರವಾಹಗಳು

ಸಾಗರದಲ್ಲಿನ ನೀರು ನಿರಂತರವಾಗಿ ಆವಿಯಾಗುವುದರಿಂದ ನೀರಿನಲ್ಲಿನ ಲವಣವು ಸಾಗರದಲ್ಲಿಯೇ ಉಳಿಯುತ್ತದೆ. ಈ ರೀತಿಯ ದೀರ್ಘಕಾಲದ ಪ್ರಕ್ರಿಯೆಯಿಂದ ಸಮುದ್ರದ ನೀರು ಉಪ್ಪಾಗಿರುತ್ತದೆ .

16. ಹಿಂದೂ ಮಹಾಸಾಗರದ ಮುಖ್ಯ ಪ್ರವಾಹಗಳು ಮೋಝಾಂಬಿಕ್, ಮಡಗಾಸ್ಕರ್, ಅಗುಲಾಸ್ ,ಪಶ್ಚಿಮ ಆಸ್ಟ್ರೇಲಿಯನ್ ಪ್ರವಾಹ .

## IV. ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿ.

17.

- ಖಾರಿ-- ಇದು ಸಾಗರದ ಕಿರಿದಾದ ನೀಳ ಭಾಗವಾಗಿದ್ದು, ಭೂಭಾಗದ ಒಳಗೆ ಚಾಚಿರುವುದು .ಇವು ಸಮುದ್ರಕ್ಕಿಂತ ಚಿಕ್ಕ ಗಾತ್ರ ಹೊಂದಿವೆ, ಆಳ ,ಆಕಾರ ಗಾತ್ರದಲ್ಲಿ ಒಂದಕ್ಕೊಂದು ವ್ಯತ್ಯಾಸದಿಂದ ಕೂಡಿರುತ್ತವೆ.
- ಕೊಲ್ಲಿ --ಭೂಭಾಗದಿಂದ ಸುತ್ತುವರೆಯಲ್ಪಟ್ಟ ಅರ್ಧ ವೃತ್ತಾಕಾರದ ಸಮುದ್ರದ ಭಾಗವೇ ಕೊಲ್ಲಿ. ಆಳ, ಆಕಾರ ಮತ್ತು ಗಾತ್ರದಲ್ಲಿ ವ್ಯತ್ಯಾಸದಿಂದ ಕೂಡಿರುತ್ತವೆ .

18.

- ಸಾಗರದಂಚಿನ ಹೆಚ್ಚು ಆಳವಿಲ್ಲದ ಪ್ರದೇಶವೇ ಖಂಡಾವರಣ ಪ್ರದೇಶ.
- ಮೀನುಗಾರಿಕೆಗೆ ಸಹಕಾರಿಯಾಗಿದೆ.
- ನೌಕಯಾನಕ್ಕೆ ಸಹಕಾರಿಯಾಗಿದೆ.
- ಜಲಚರ ಮತ್ತು ಕೃಷಿಗೆ ಸಹಕಾರಿಯಾಗಿದೆ.
- ಕಚ್ಚಾ ತೈಲ ಉತ್ಪಾದನೆಗೆ ಸಹಕಾರಿಯಾಗಿದೆ.

19.

- ಗರಿಷ್ಠ ಉಬ್ಬರ ಭೂಮಿ ಚಂದ್ರ ಸೂರ್ಯ ಒಂದೇ ಸರಳರೇಖೆಯಲ್ಲಿದ್ದಾಗ ಸಂಭವಿಸುತ್ತದೆ.
- ಸೂರ್ಯ ಮತ್ತು ಚಂದ್ರನ ಒಟ್ಟು ಗುರುತ್ವ ಶಕ್ತಿಯಿಂದ ಉಬ್ಬರಗಳು ಗರಿಷ್ಠ ವಾಗುತ್ತವೆ.
- ಕನಿಷ್ಠ ಉಬ್ಬರ ಭೂಮಿ ಮತ್ತು ಸೂರ್ಯ ಒಂದೇ ಸರಳ ರೇಖೆಯಲ್ಲಿದ್ದು ಚಂದ್ರನು ಭೂಮಿಗೆ ಲಂಬವಾಗಿರುವ ಸಮಯದಲ್ಲಿ ಕನಿಷ್ಠ ಒಬ್ಬರ ಸಂಭವಿಸುತ್ತದೆ.

## V. ಈ ಕೆಳಗಿನ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯಗಳಲ್ಲಿ ಉತ್ತರಿಸಿ..

20.

- ದೊಡ್ಡ ನೌಕಯಾನಕ್ಕೆ ಉಪಯುಕ್ತವಾಗಿವೆ.

- ಬಂದರು ಮತ್ತು ಹಡಗು ನಿಲ್ದಾಣ ನಿರ್ಮಿಸಲು ಸಹಕಾರಿ.
- ಬಂದರುಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸುತ್ತವೆ.
- ಉಪ್ಪನ್ನು ತಯಾರಿಸಲು ಅನುಕೂಲಕರವಾಗಿದೆ .
- ಮೀನುಗಾರಿಕೆಗೆ ಅನುಕೂಲಕರವಾಗಿದೆ .
- ವಿದ್ಯುತ್ ಉತ್ಪಾದನೆಗೆ ಸಹಕಾರಿಯಾಗಿದೆ,
- ಪ್ರವಾಸಿಗರನ್ನು ಆಕರ್ಷಿಸುತ್ತವೆ,
- ವಾಣಿಜ್ಯ ಉತ್ಪಾದನೆಗೆ ಸಹಕಾರಿಯಾಗಿದೆ.

21.

- ಸಾಗರಗಳ ಸಂರಕ್ಷಣೆ ಇತ್ತೀಚಿನ ದಿನಗಳಲ್ಲಿ ಅತ್ಯವಶ್ಯಕವಾಗಿವೆ.
- ಮನುಷ್ಯನಿಗೆ ವಿವಿಧ ರೀತಿಯಲ್ಲಿ ಸಹಕಾರಿಯದ ಹಾಗೂ ಅಸಂಖ್ಯಾತ ಜೀವಿಗಳನ್ನು ಹೊಂದಿರುವ ಸಾಗರಗಳು ಇತ್ತೀಚೆಗೆ ಮಲಿನಗೊಳ್ಳುತ್ತಿವೆ.
- ಮುನ್ನೆಚ್ಚರಿಕೆ ಕ್ರಮಗಳು- ಸಾಗರಗಳ ಮೂಲಕ ಕಚ್ಚಾತೈಲವನ್ನು ಸಾಗಿಸುವ ಬದಲು ಕೊಳವೆ ಮಾರ್ಗಗಳ ಮೂಲಕ ಸಾಧಿಸುವುದು.
- ಅಣು ಇಂಧನ ತ್ಯಾಜ್ಯ ವಸ್ತುಗಳನ್ನು ಸಾಗರಗಳಿಗೆ ಸುರಿಯುವುದನ್ನು ನಿಲ್ಲಿಸುವುದು.
- ಕೈಗಾರಿಕೆಗಳ ಮಾಲಿನ್ಯಯುಕ್ತ ರಾಸಾಯನಿಕಗಳು ಸಮುದ್ರ ಸೇರದಂತೆ ಕ್ರಮವಹಿಸುವುದು.
- ತ್ಯಾಜ್ಯ ವಸ್ತುಗಳನ್ನು ಬಂದರು, ರೇವು ಪಟ್ಟಣಗಳಲ್ಲಿ ಎಸೆಯುವುದನ್ನು ನಿಯಂತ್ರಿಸುವುದು,
- ಕರಾವಳಿ ಮರಳು ದಂಡೆಗಳು ಹಾಳಾಗುತ್ತಿರುವುದನ್ನು ತಡೆಯುವುದು.
- ಸ್ವಚ್ಛ ಸುಂದರ ಪ್ರವಾಸಿ ತಾಣಗಳನ್ನು ನಿರ್ಮಿಸುವುದು ಮತ್ತು
- ಪ್ರವಾಸಿಗರಲ್ಲಿ ಸ್ಥಳೀಯರಲ್ಲಿ ಜಾಗೃತಿ ಮೂಡಿಸುವುದು.

## ಅಧ್ಯಾಯ 27.ಜೀವಗೋಳ

**I. ಬಹು ಆಯ್ಕೆ ಪ್ರಶ್ನೆಗಳು**

1. A) ಸಮೋಷ್ಣ ಮಂಡಲ
2. A)ಜೀವಿಗಳ ನಾಶ ತಡೆಯಬಹುದು

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ..**

3. ನಮ್ಮ ಸುತ್ತಲಿನ ಪರಿಸರದಲ್ಲಾಗುವ ಅನಪೇಕ್ಷಣೀಯ ಬದಲಾವಣೆ ಯೇ ಪರಿಸರ ಮಾಲಿನ್ಯ.
4. ಅತಿ ನೇರಳೆ ಕಿರಣಗಳಿಂದ ರಕ್ಷಣೆಯನ್ನು ನೀಡುತ್ತದೆ.

5. ಮಳೆಯ ನೀರಿನಲ್ಲಿ ಸೆಲ್ಫ್ಯೂರಿಕ್ ಆಮ್ಲ ಮತ್ತು ಇಂಗಾಲದ ಮಾನಾಕ್ಸೈಡ್

ಮೊದಲಾದ ಆಮ್ಲಗಳು ಹೆಚ್ಚಾಗಿರುವುದನ್ನು ಆಮ್ಲ  ಮಳೆ ಎನ್ನುವರು.

6. ಜೀವಿಗಳು ಮತ್ತು ಅವುಗಳ ಭೌತಿಕ, ರಾಸಾಯನಿಕ, ಜೈವಿಕ ಪರಿಸರಗಳ ನಡುವಿನ ಸಂಬಂಧವನ್ನು ವಿವರಿಸುವ ಶಾಸ್ತ್ರ .
7. ಒಂದು ಭೂಭಾಗದಲ್ಲಿ ಕಂಡುಬರುವ ಎಲ್ಲಾ ಬಗೆಯ ಸಸ್ಯಗಳು ಹಾಗೂ ಪ್ರಾಣಿ ಪ್ರಭೇದಗಳನ್ನು ಜೀವ ವೈವಿಧ್ಯತೆ ಎನ್ನುವರು.
8. ಮಾನವನ ವಿವಿಧ ಚಟುವಟಿಕೆಗಳಿಂದ ಸಾಂದ್ರಿಕರಣಗೊಂಡ ಪದಾರ್ಥಗಳು ವಾಯುವಿನಲ್ಲಿ ಸೇರಿ ಮಾನವನ ಆರೋಗ್ಯ ಮತ್ತು  ಆಸ್ತಿಪಾಸ್ತಿಗಳು ಹಾನಿ ಉಂಟಾಗುವುದೇ ವಾಯುಮಾಲಿನ್ಯ.

**III. ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

9. ಪ್ರಾಕೃತಿಕ ಪರಿಸರ ಹಾಗೂ ಪ್ರಾಕೃತಿಕ ಪರಿಸರದಲ್ಲಿರುವ ವಿವಿಧ ಪ್ರಕಾರದ ಪ್ರಾಣಿಗಳ ನಡುವಿನ ಸಂಹರ್ದಯುತವಾದ ಹಾಗೂ ಸಮತೋಲನವಾದ ಸಂಬಂಧ ನೈಸರ್ಗಿಕವಾಗಿ ಕಂಡುಬರುವುದು. ಇದನ್ನೇ ಜೈವಿಕ ಪರಿಸರ ಸಮತೋಲನ ಎನ್ನುವರು .
10. ಪರಿಸರ ಮಾಲಿನ್ಯದ ವಿಧಗಳು
    - ವಾಯುಮಾಲಿನ್ಯ.
    - ಜಲಮಾಲಿನ್ಯ ,
    - ಮಣ್ಣಿನ ಮಾಲಿನ್ಯ,
    - ಶಬ್ದ ಮಾಲಿನ್ಯ.
11. ಆಮ್ಲ ಮಳೆಯ ಪ್ರಭಾವಕ್ಕೆ ಒಳಗಾಗಿರುವ ಪ್ರದೇಶಗಳು
    - ಯುರೋಪ್ ಖಂಡದ ಪೋಲೆಂಡ್,
    - ಚೆಕ್ ಗಣರಾಜ್ಯ ,
    - ಆಗ್ನೇಯ ಜರ್ಮನಿ ಭಾಗಗಳು.
12. ಶಬ್ದ ಮಾಲಿನ್ಯದ ಮಾನವ ನಿರ್ಮಿತ ಮೂಲಗಳು
    - ಕೈಗಾರಿಕೆಗಳ ಶಬ್ದ,
    - ಗಣಿಗಾರಿಕೆ ಶಬ್ದ,
    - ವಿಮಾನಗಳ ಶಬ್ದ,
    - ಸ್ಫೋಟಕಗಳ ಶಬ್ದ .

**IV. ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿ.**

13. ಎಲ್ಲಾ ಜೀವಿಗಳು ಜೈವಿಕ ವಸ್ತುಗಳು ವಾಸಿಸುವ ಸುತ್ತಲಿನ ಸನ್ನಿವೇಶವನ್ನು ಪರಿಸರ ಎನ್ನುವರು.
    - ಪ್ರಾಕೃತಿಕ ಅಥವಾ ಭೌಗೋಳಿಕ ಪರಿಸರ
    - ಸಾಂಸ್ಕೃತಿಕ ಅಥವಾ ಮಾನವ ನಿರ್ಮಿತ ಪರಿಸರ
14. 
    - ನೀರು ಕಲುಷಿತವಾಗುತ್ತದೆ.
    - ಕಾಲರ, ಕ್ಷಯ, ಕಾಮಾಲೆಯಂತಹ ರೋಗಗಳು ಹರಡುತ್ತವೆ.
    - ಜಲಚರಗಳ ಸಾವಿಗೆ ಕಾರಣವಾಗುತ್ತದೆ.
    - ವ್ಯವಸಾಯಕ್ಕೆ ಹಾನಿ ಉಂಟು ಮಾಡುತ್ತದೆ.

- ಪರಿಸರ ಅಸಮತೋಲನಕ್ಕೆ ಕಾರಣವಾಗುತ್ತದೆ.
- ನೀರಿನಲ್ಲಿರುವ ಆಮ್ಲಜನಕದ ಪ್ರಮಾಣ ಕಡಿಮೆ ಆಗುತ್ತದೆ .

15.

- ಶಬ್ದ ಮಾಲಿನ್ಯದಿಂದ ಶಾಶ್ವತವಾಗಿ ಕಿವಿ ಕೇಳಿಸುವುದಿಲ್ಲ.
- ಹೃದಯ ಸಂಬಂಧಿ ಕಾಯಿಲೆಗಳು ಹೃದಯಘಾತ ಸಂಭವಿಸಬಹುದು.
- ಮಾನಸಿಕ ಅಸ್ವಸ್ಥತೆ.
- ನಿದ್ರಾ ಭಂಗ, ಏಕಾಗ್ರತೆ ಭಂಗ, ತಲೆನೋವು ಹಾಗೂ
- ಹೆಚ್ಚಿನ ಆಯಾಸ ಉಂಟಾಗುವುದು.

16. ಪಳೆಯುಳಿಕೆ ಇಂಧನಗಳ ಬಳಕೆಯಿಂದ ಇಂಗಾಲದ ಡೈಯಾಕ್ಸೈಡ್ ಹಾಗೂ ಇತರೆ ಹಾನಿಕಾರಕ ಅನಿಲಗಳು ಭೂಮಿಯಿಂದ ಬಿಡುಗಡೆಯಾಗುವ ಉಷ್ಣಾಂಶವನ್ನು ಹೊರ ಹೋಗಲು ಬಿಡದೆ ಹೀರಿ ಸಂಗ್ರಹಿಸುವುದರಿಂದ ವಾಯುಮಂಡಲದಲ್ಲಿ ಉಷ್ಣಾಂಶ ಹೆಚ್ಚುತ್ತಿದೆ .ಇದನ್ನೇ ಹಸಿರುಮನೆ ಪರಿಣಾಮ ಎನ್ನುವರು.

**V. ಈ ಕೆಳಗಿನ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯಗಳಲ್ಲಿ ಉತ್ತರಿಸಿ.**

17.

- ಮಣ್ಣಿನ ಸವೆತ ಭೂಕುಸಿತಗಳು.
- ಜ್ವಾಲಾಮುಖಿ ಸ್ಫೋಟ .
- ಸಸ್ಯಗಳ ಪ್ರಾಣಿಗಳ ಕ್ಷಯಿಸುವಿಕೆ. ಮತ್ತು ಕೊಳೆಯುವ ಕಾರ್ಯಗಳು.
- ಕೈಗಾರಿಕಾ ತ್ಯಾಜ್ಯಗಳು .
- ನಗರ ತ್ಯಾಜ್ಯಗಳು.
- ಕೃಷಿ ಮತ್ತು ಗೃಹ ತ್ಯಾಜ್ಯಗಳು.
- ತೈಲ ಸೋರುವಿಕೆ.
- ಪರಮಾಣು ತ್ಯಾಜ್ಯ .
- ತೈಲಬಾವಿಗಳನ್ನು ಸಾಗರದಲ್ಲಿ ಕೊರೆಯುವುದು.
- ಶಾಖ ವಿದ್ಯುತ್ ಕೇಂದ್ರಗಳ ತ್ಯಾಜ್ಯಗಳು

23. ಭೂಮಿಯ ತಾಪಮಾನ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇತ್ತೀಚಿನ ದಿನಗಳಲ್ಲಿ ಹಲವು ವರ್ಷಗಳಿಂದ ವಾಯುಮಂಡಲದ ತಾಪಮಾನ ಹೆಚ್ಚಾಗಿದೆ. ಇದನ್ನೇ ಜಾಗತಿಕ ತಾಪಮಾನ ಏರಿಕೆ ಎನ್ನುವರು.

ದುಷ್ಪರಿಣಾಮಗಳು—

- ವಾಯುಮಂಡಲದ ವಲಯಗಳು ಬದಲಾಗುತ್ತವೆ.
- ಹಿಮಾ ನದಿಗಳು ಕರಗುತ್ತವೆ .
- ಸಮುದ್ರದ ನೀರಿನ ಮಟ್ಟ ಹೆಚ್ಚುತ್ತಿದೆ.
- ಪರಿಸರದ ಅಸಮತೋಲನ ಕಾರಣವಾಗಿದೆ.
- ಹಿಮಾಲಯ, ಆರ್ಕಟಿಕ್, ಅಂಟಾರ್ಟಿಕಾದಲ್ಲಿ ಹಿಮರಾಶಿಯು ಕರಗುತ್ತಿದೆ.

******

## ಅಧ್ಯಾಯ 28.ಅರ್ಥ ಶಾಸ್ತ್ರದ ಮೂಲ ಪರಿಕಲ್ಪನೆಗಳು

I. **ಬಹು ಆಯ್ಕೆ ಪ್ರಶ್ನೆಗಳು**:

1. D) ಹೆಚ್ಚಾಗುತ್ತದೆ.

2. A) ಅನುಭೋಗ

3 D) ಉಳುವುದು.

4. A) ಮಾನಸಿಕ ಶ್ರಮ

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.:**

5. ಸರಕು ಸೇವೆಗಳನ್ನು ಹಣ ಕೊಳ್ಳುವ ಶಕ್ತಿಯೇ ಬೇಡಿಕೆ.

6. ಒಂದು ರಾಷ್ಟ್ರದ ಜನ ಸಂಖ್ಯೆಯನ್ನು ಆದಾಯದಿಂದ ಭಾಗಿಸಿದಾಗ ದೊರೆಯುವ ವರಮಾನವೇ 7ಲಾವರಮಾನ.

8. ಪೂರೈಕೆ

9. ಯಾವುದಾದರೊಂದು ಸರಕು ಹೇರಳವಾಗಿ ದೊರೆಯುವ ಸಂದರ್ಭದಲ್ಲಿ ಸಂಗ್ರಹಿಸಿಟ್ಟು ಅದು ದೊರೆಯದ ಸಮಯದಲ್ಲಿ ಪೂರೈಸುವುದು.

**III. ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿ:**

10)

- ಉತ್ಪಾದನಾ ಕ್ಷೇತ್ರದಲ್ಲಿ ಬೇಡಿಕೆಯ ಪ್ರಭಾವ ಹೆಚ್ಚು.
- ಬೇಡಿಕೆ ಹೆಚ್ಚಾದಾಗ ಉತ್ಪಾದನೆ, ಉದ್ಯೋಗ, ವರಮಾನ, ಪೂರೈಕೆ ಹೆಚ್ಚುತ್ತದೆ.
- ಜನರ ಜೀವನ ಮಟ್ಟ ಸುಧಾರಿಸುತ್ತದೆ.
- ರಾಷ್ಟರದ ವರಮಾನ ಹೆಚ್ಚಾಗಿ, ರಾಷ್ಟ್ರ ಪ್ರಗತಿ ಹಾದಿಯಲ್ಲಿ ಮುಂದುವರೆಯುತ್ತದೆ.
- ಬೇಡಿಕೆ ಕಡಿಮೆಯಾದಲ್ಲಿ:-
- ಉತ್ಪಾದನೆ ಕಡಿಮೆಯಾಗಿ ಆದಾಯ ಕಡಿಮೆಯಾಗುತ್ತದೆ. ನಿರುದ್ಯೋಗ ಹೆಚ್ಚುತ್ತದೆ. ಜನರ ಜೀವನ ಮಟ್ಟ ಕುಸಿಯುತ್ತದೆ.
- ರಾಷ್ಟ್ರದ ಪ್ರಗತಿ ಕುಸಿಯುತ್ತದೆ. ಆದ್ದರಿಂದ ಬೇಡಿಕೆ ರಾಷ್ಟ್ರದ ಪ್ರಗತಿಯ ಪ್ರತೀಕವಾಗಿದೆ.

11).*

- ಒಂದು ದೇಶದ ಪ್ರಗತಿಗೆ ದೈಹಿಕ ಮತ್ತು ಮಾನಸಿಕ ಶ್ರಮಗಳೆರಡು ಮಹತ್ವದ್ದಾಗಿದೆ.
- ದೈಹಿಕ ಶ್ರಮ ವಹಿಸುವಾಗ ಸಂಖ್ಯೆ ಕಡಿಮೆಯಾದಲ್ಲಿ ಉತ್ಪಾದನಾ ಕಾರ್ಯ ಕುಂಠಿತವಾಗುತ್ತದೆ.
- ಮಾನಸಿಕ ಶ್ರಮಿಕರಿಂದ ದೇಶ ಅಭಿವೃದ್ದಿ ಹೊಂದುತ್ತದೆ.
- ದೈಹಿಕ ಶ್ರಮ ನಿರ್ವಹಿಸಲು ಎಲ್ಲರೂ ಸಿದ್ದರಿರಬೇಕು.
- ದೈಹಿಕ ಶ್ರಮ ಮತ್ತು ಮಾನಸಿಕ ಶ್ರಮ ಪಡುವವರನ್ನು ಮೇಲು ಕೀಳೆಂದು ಸಮಾಜ ಭೇದ ಮಾಡಬಾರದು.
- ದೈಹಿಕ ಶ್ರಮವಿಲ್ಲದೆ ಯಂತ್ರಗಳನ್ನು ನಡೆಸಲು ಹಾಗೂ. ಯಂತ್ರ ಮಾಡದ ಕೆಲಸ ನಿರ್ವಹಿಸಲು ಸಾಧ್ಯವಿಲ್ಲ.
- ದೇಶದ ಅಭಿವೃದ್ದಿ ಎರಡು ರೀತಿಯ ಶ್ರಮ ಅತ್ಯಗತ್ಯವಾಗಿದ್ದು, ಎಲ್ಲ ರೀತಿಯ ಉದ್ಯೋಗ ನಿರ್ವಹಿಸಲು ನಾವು ಸಿದ್ದರಿರಬೇಕು.

- ಇದರಿಂದ ಶ್ರಮದ ಮಹತ್ವದ ಅರಿವಾಗುತ್ತದೆ. ಸಮಾನ ಭಾವನೆ ಉಂಟಾಗುತ್ತದೆ. ರಾಷ್ಟ್ರ ಕಟ್ಟುವ ಕಾರ್ಯ ಸಾಧ್ಯವಾಗುತ್ತದೆ.

12.

- ಕೃಷಿ ಕೆಲಸ,
- ಗಾರೆ ಕೆಲಸ,
- ಪಶುಪಾಲನೆ,
- ಕುಂಬಾರಿಕೆ,
- ಬುಟ್ಟಿ ಹೆಣೆಯುವುದು,
- ಇಟ್ಟಿಗೆ ತಯಾರಿಸುವುದು,
- ಬೀಡಿ ಕಟ್ಟುವುದು,
- ಕಟ್ಟಡ ನಿರ್ಮಾಣ,
- ಕುಲುಮೆ ಕೆಲಸ ಇತ್ಯಾದಿ

13)

ಮಾನವನು ತನ್ನ ತೃಪ್ತಿಗಾಗಿ ಸರಕು ಮತ್ತು ಸೇವೆಗಳನ್ನು ಉಪಯೋಗಿಸುವುದೇ ಉಪಭೋಗ.

ಅನುಭೋಗದಲ್ಲಿ ಎರಡು ವಿಧಗಳಿವೆ.

- ಉತ್ಪಾದನೆಗಾಗಿ ಸರಕು ಮತ್ತು ಸೇವೆಗಳನ್ನು ಬಳಸುವುದು.
- ಬಯಕೆಗಳ ತೃಪ್ತಿಗಾಗಿ ಸಿದ್ಧ ಮಾಡಿದ ಸರಕು ಮತ್ತು ಸೇವೆಗಳನ್ನು ಬಳಸುವುದು.

# ಅಧ್ಯಾಯ 29. ವ್ಯವಹಾರ ಅಧ್ಯಯನ
## ವಿವಿಧ ವ್ಯವಹಾರ ಸಂಘಟನೆಗಳ ಹುಟ್ಟು

**ಬಹು ಆಯ್ಕೆ ಪ್ರಶ್ನೆಗಳು:**

1) B) ಏಕವ್ಯಕ್ತಿ ಮಾಲೀಕತ್ವದ ಸಂಸ್ಥೆ.

2) A) ಭಾರತದ ಪಾಲುದಾರಿಕೆ ಸಂಸ್ಥೆಗಳ ಕಾಯ್ದೆ 1932

3) B) 18 ವರ್ಷಗಳು

4) B) ರೂ. 100/-

**ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.:**

4) ಹಣಕಾಸಿನ ವ್ಯವಹಾರ ಮಾಡುವ ಪಾಲುದಾರಿಕಾ ಸಂಸ್ಥೆಯಲ್ಲಿ ಗರಿಷ್ಠ 20 ಜನ ಪಾಲುದಾರರಿಗೆ ಅವಕಾಶವಿದೆ.

5) ಹಿಂದೂ ಅವಿಭಕ್ತ ಕುಟುಂಬ ವ್ಯವಹಾರ ಸಂಸ್ಥೆಗಳ ಮೇಲ್ವಿಚಾರಣೆ ನೋಡಿಕೊಳ್ಳುವವರನ್ನು ಕರ್ತ ಎಂದು ಕರೆಯುತ್ತಾರೆ.

6) ಭಾರತದಲ್ಲಿ ಮಾತ್ರ ಅಸ್ತಿತ್ವದಲ್ಲಿರುವ ಸಣ್ಣ ಪ್ರಮಾಣದ ವ್ಯವಹಾರ ಸಂಸ್ಥೆ ಹಿಂದೂ ಅವಿಭಕ್ತ ಕುಟುಂಬ ವ್ಯವಹಾರ ಸಂಸ್ಥೆ.

7) ಹೊಸ ಸಂಸ್ಥೆಗಳು ಯಾವ ರೀತಿಯ ಪಾಲುದಾರರನ್ನು ಅಪ್ರಾಪ್ತ ವಯಸ್ಸಿನ ಪಾಲುದಾರರು.

8) ಇವುಗಳನ್ನು ಪ್ರಾರಂಭಿಸಲು ಕಾನೂನಿನ ಕಟ್ಟಳೆಗಳ ಅವಶ್ಯಕತೆ ಇಲ್ಲ.

9) ಪಾಲುದಾರಿಕೆ ಸಂಸ್ಥೆಗಳನ್ನು ವಿಸರ್ಜಿಸಲು ಪಾಲುದಾರರಿಗೆ 14 ದಿನಗಳ ಮುನ್ಸೂಚನೆ ನೀಡಬಹುದು ಹಾಗೂ ಇತರೆ ಪಾಲುದಾರರ ಸಮ್ಮತಿ ಮೇಲೆ ವಿಸರ್ಜಿಸುವುದು.

**I. ಈ ಕೆಳಗಿನ ಪ್ರಶ್ನೆಗಳಿಗೆ ಮೂರು/ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

10)
- ಖಾಸಗಿ ರಂಗದ ವ್ಯವಹಾರ ಸಂಘಟನೆಗಳು
- ಸಾರ್ವಜನಿಕ ರಂಗದ ವ್ಯವಹಾರ ಸಂಘಟನೆಗಳು,
- ಜಂಟಿ ರಂಗದ ವ್ಯವಹಾರ ಸಂಘಟನೆಗಳು,
- ಸರ್ಕಾರಿ ಸ್ವಾಮ್ಯದ ವ್ಯವಹಾರ ಸಂಘಟನೆಗಳು,

11) A) ಸಣ್ಣ ಪ್ರಮಾಣದ ಸಂಘಟನೆಗಳು
- ಏಕವ್ಯಕ್ತಿ ಮಾಲೀಕತ್ವದ ಸಂಸ್ಥೆಗಳು,
- ಪಾಲುದಾರಿಕೆ ಸಂಸ್ಥೆಗಳು.
- ಹಿಂದೂ ಅವಿಭಕ್ತ ಕುಟುಂಬ ಸಂಸ್ಥೆಗಳು.

B) ದೊಡ್ಡ ಪ್ರಮಾಣದ ಸಂಘಟನೆಗಳು.

12) ಒಂದು ಸಂಸ್ಥೆಯಲ್ಲಿ ಒಬ್ಬರಿಗಿಂತ ಹೆಚ್ಚು ಜನ ಸೇರಿ ನಡೆಸುವ ವ್ಯವಹಾರವೇ ಪಾಲುದಾರಿಕೆ ವ್ಯವಹಾರ

ವಿಧಗಳು:
- ಕ್ರಿಯಾಶೀಲ ಪಾಲುದಾರಿಕೆ
- ತಟಸ್ಥ ಪಾಲುದಾರರು

- ನಾಮ ಮಾತ್ರ ಪಾಲುದಾರರು
- ಅಪ್ರಾಪ್ತ ವಯಸ್ಕ ಪಾಲುದಾರರು

13)

- ಸುಲಭ ರಚನೆ
- ಹೆಚ್ಚಿನ ಬಂಡವಾಳ
- ಹೆಚ್ಚಿನ ಪರಿಣತಿ
- ವಿಶ್ವಾಸಾರ್ಹತೆ
- ನಷ್ಟದ ಹಂಚಿಕೆ
- ವ್ಯವಹಾರದ ರಹಸ್ಯ
- ಸರಳ ವಿಸರ್ಜನೆ

14)

- ಬಂಡವಾಳದ ಮಿತಿ
- ಸೀಮಿತ ಆಡಳಿತದ ಕೌಶಲಗಳು
- ಸೂಕ್ತ ನಿರ್ಣಯ ತೆಗೆದುಕೊಳ್ಳುವುದು ಕಷ್ಟ.
- ನಷ್ಟದ ಹೊಣೆ ಒಬ್ಬರೇ ಹೊರ ಬೇಕಾಗುವುದು.
- ಮಾಲಿಕನ ನಿಧನ ಅಥವಾ ದಿವಾಳಿಯಿಂದ ಸಂಸ್ಥೆ ಮುಚ್ಚ ಬೇಕಾಗುವುದು.

15)

- ನೂರು ಮೀರಿದ ಸಾಲ ವಸೂಲಿಗೆ ಮೂರನೇ ವ್ಯಕ್ತಿ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಬಹುದು.
- ಇತರೆ ಪಾಲುದಾರನ ಸಾಲ ವಸೂಲಾತಿ ಸಾಲ ವಸೂಲಿಗಾಗಿಯೂ ದಾವೆ ಹೂಡಬಹುದು.
- ನೊಂದಣಿಯಾಗದ ಸಂಸ್ಥೆ ಅಥವಾ ಪಾಲುದಾರರ ವಿರುದ್ಧ ದಾವೆ ಹೂಡಬಹುದು.
- ನೊಂದಣಿಯಾಗದ ಸಂಸ್ಥೆ ಅಥವಾ ಪಾಲುದಾರರ ವಿರುದ್ಧ ಸಂಸ್ಥೆಯ ವಿಸರ್ಜನೆ ಅಥವಾ ಲೆಕ್ಕಪತ್ರ ಇತ್ಯರ್ಥಕ್ಕಾಗಿ ದಾವೆ ಹೂಡಬಹುದು.

## ಅಧ್ಯಾಯ 30.ದೊಡ್ಡ ಪ್ರಮಾಣದ ವ್ಯವಹಾರ ಸಂಘಟನೆಗಳು

•

**I. ಬಹು ಆಯ್ಕೆ ಪ್ರಶ್ನೆಗಳು**

1) C) ಗದಗ ಜಿಲ್ಲೆಯ ಕಣಗಿನಹಾಳ

2) A) ಭಾರತ ಕಂಪನಿ ಕಾಯಿದೆ 1956

3. C) ಎಲ್ಲರಿಗಾಗಿ ಒಬ್ಬನು ಮತ್ತು ಒಬ್ಬನಿಗಾಗಿ ಎಲ್ಲರು

4. D) ಇಂಗ್ಲೆಂಡ್

**II ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ.**

5. ಬಹು ರಾಷ್ಟ್ರೀಯ ಕಂಪನಿಗಳು ಮೊದಲ ಬಾರಿಗೆ ಅಮೆರಿಕಾ ಸಂಯುಕ್ತ ಸಂಸ್ಥಾನ

6. ಭಾರತದಲ್ಲಿ ಮೊಟ್ಟ ಮೊದಲು ಷೇರುಮಾರುಕಟ್ಟೆ ಸ್ಥಾಪನೆಯಾದ ಸ್ಥಳ ಮುಂಬೈ

7. ಜಂಟಿರಂಗದ ಸಂಸ್ಥೆಗಳು ಸರ್ಕಾರ ಮತ್ತು ಸಾರ್ವಜನಿಕರ ಜಂಟಿ ಮಾಲೀಕತ್ವದಲ್ಲಿ ಇರುತ್ತವೆ.

9. ಭಾರತದಲ್ಲಿ ಸಹಕಾರಿ ಸಂಘಗಳ ರಚನೆ ಸಹಕಾರಿ ಸಂಘಗಳ ಕಾಯಿದೆಯ ನಿಬಂಧನೆಗೆ ಒಳಪಟ್ಟಿರುತ್ತದೆ.

10. ಕಡಿಮೆ ಬಡ್ಡಿ ದರದಲ್ಲಿ ಸಾಲ ಪಡೆದು ಲೇವಾದೇವಿದಾರರ ಹಿಡಿತದಿಂದ ಪಾರಾಗುತ್ತಾರೆ.

11. ತಾವು ಬೆಳದ ಬೆಳೆಗಳಿಗೆ ಮಧ್ಯವರ್ತಿಗಳ ಹಿಡಿತವಿಲ್ಲದೆ ಒಳ್ಳೆಯ ಬೆಲೆ ಪಡೆಯುತ್ತಾರೆ.

**III. ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿ**

**11.** ಇವು ವ್ಯಕ್ತಿಗಳ ಸ್ವಯಂ ಪ್ರೇರಿತ ಸಂಸ್ಥೆಗಳಾಗಿವೆ.

- ಯಾವುದೇ ಬೇಧವಿರುವುದಿಲ್ಲ, ಎಲ್ಲರಿಗೂ ಮುಕ್ತ ಅವಕಾಶವಿದೆ.
- ಸದಸ್ಯರ ಸಂಖ್ಯೆಗೆ ಮಿತಿ ಇಲ್ಲ.
- ಪ್ರಜಾಪ್ರಭುತ್ವ ಮಾದರಿ ಆಡಳಿತವಿರುತ್ತದೆ.
- ಎಷ್ಟೇ ಬಂಡವಾಳ ಹೂಡಿದ್ದರೂ ಒಂದೇ ಮತ ಚಲಾಯಿಸುವ ಹಕ್ಕಿರುತ್ತದೆ.
- ಸರ್ಕಾರದ ಮೇಲ್ವಿಚಾರಣೆಗೆ ಒಳಪಟ್ಟಿರುತ್ತದೆ.
- ಲಾಭದ ಒಂದು ಭಾಗ ಮಾತ್ರ ಸಾಮಾನ್ಯ ನಿಧಿಗೆ ವರ್ಗಾಯಿಸಲಾಗುತ್ತದೆ.
- ಲಾಭವನ್ನು ಬಂಡವಾಳ ಹೂಡಿಕೆಗೆ ಅನುಗುಣವಾಗಿ ಹಂಚಲಾಗುತ್ತದೆ.

12.

- ಸಾಲದ ಸಹಕಾರಿ ಸಂಘಗಳು
- ಮಾರುಕಟ್ಟೆ ಸಹಕಾರಿ ಸಂಘಗಳು
- ಉತ್ಪಾದಕರ ಸಹಕಾರಿ ಸಂಘಗಳು
- ಗ್ರಾಹಕರ ಸಹಕಾರಿ ಸಂಘಗಳು
- ಬೇಸಾಯಗಾರರ ಸಹಕಾರಿ ಸಂಘಗಳು
- ಗೃಹ ನಿರ್ಮಾಣ ಸಹಕಾರಿ ಸಂಘಗಳು
- ವಿವಿಧ ರೀತಿಯ ಸಹಕಾರಿ ಸಂಘಗಳು

13.

- ಇವುಗಳ ರಚನೆ ಸುಲಭ
- ಹೆಚ್ಚು ಬಂಡವಾಳದ ಅವಶ್ಯಕತೆಯಿರುವುದಿಲ್ಲ
- ಸಮಾನ ಹಕ್ಕು ಭಾದ್ಯತೆಗಳಿವೆ.
- ಸೀಮಿತ ಹೊಣೆಗಾರಿಕೆ.
- ಒಂದೇ ಮತದಾನಕ ಹಕ್ಕು
- ಪ್ರಜಾಪ್ರಭುತ್ವ ಮಾದರಿ
- ಉಳಿತಾಯದ ಅಭ್ಯಾಸ ರೂಢಿಯಾಗುತ್ತದೆ.
- ಎಲ್ಲರಿಗಾಗಿ ಒಬ್ಬನು, ಒಬ್ಬನಿಗಾಗಿ ಎಲ್ಲರು ಇದರ ಪ್ರಮುಖ ಧ್ಯೇಯವಾಗಿದೆ.

14.

- ಕಡಿಮೆ ಬೆಲೆಯಲ್ಲಿ ಆಶ್ರಯದಾತ ದೇಶಗಳಿಂದ ಕಚ್ಚಾವಸ್ತುಗಳನ್ನು ಪಡೆಯಬಹುದಾಗಿದೆ.
- ಆಶ್ರಯದಾತ ದೇಶಗಳಿಗೆ ಕಚ್ಚಾವಸ್ತು ಮತ್ತು ಸಿದ್ದವಸ್ತುಗಳನ್ನು ರಫ್ತು ಮಾಡಿ ಲಾಭ ಹೆಚ್ಚಿಸಿಕೊಳ್ಳಬಹುದು
- ಆಶ್ರಯದಾತ ದೇಶಗಳಿಂದ ಲಾಭಂಶದ ಜೊತೆ ರಾಜಧನ ಮತ್ತು ಆಡಳಿತಾತ್ಮಕ ಒಪ್ಪಂದಗಳಿಂದ ಆದಾಯ ಗಳಿಸಬಹುದು
- ತವರು ದೇಶದಲ್ಲಿ ಹೆಚ್ಚು ಉದ್ಯೋಗವಕಾಶಗಳನ್ನು ಕಲ್ಪಿಸುತ್ತದೆ.
- ಆಶ್ರಯದಾತ ದೇಶಗಳಿಂದ ತಂತ್ರಜ್ಞಾನ ಮತ್ತು ಕೌಶಲ್ಯಗಳನ್ನು ಪಡೆಯಬಹುದು.